
ಗೌರಿ ಲಂಕೇಶರ

ಲಂಕೇಶ್


ಜೂನ್ 28, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಬೋಧನೆ



ಅಂಧ ಮಕ್ಕಳ 100 ಕೋಟಿ ಆಸ್ತಿಗೆ

ಮಾಫಿಯಾ-ಪೋಲೀಸ್

ಸ್ಕೆಚ್!





ಕೂಗುಮಾರಿಗೇ ಆವಾಜ್!

ೆಡ್ಡನ ಬಲಿಗೆ ಖೆಡ್ಡ!



ೋಣದ
ಾಟೀಲರ
ಾಲತ್ತು



ಗೋಲ್‌ಗುಂಬಜ್ ಮಾರ್ತಾನಂತೆ ಡಿ.ಸಿ. ಮೊಹಸಿನ್



ಭಾರತದ ಭೂಮಿ ಮಾತ್ರವಲ್ಲ.. ಆಕಾಶವೂ ಖಾಸಗಿ ಪಾಲು!

ಜಾಗತೀಕರಣದ ದಾಳಿಯಿಂದಾಗಿ ಭಾರತದ ನೆಲ, ಜಲ, ಅರಣ್ಯ ವಿದೇಶಿ ಬಂಡವಾಳಿಗರ ಪಾಲಾಗುತ್ತಿದೆ ಎನ್ನುವವರು ಹೇಳುತ್ತಿರುವುದು ಸತ್ಯ. ಆದರೆ ಅದು ಪೂರ್ತಿ ಸತ್ಯವಲ್ಲ. ಏಕೆಂದರೆ ಅವರು ದೇಶದ ಆಕಾಶವೂ ವಿದೇಶಿಯರ ಪಾಲಾಗುತ್ತಿರುವುದನ್ನು ತಲೆಯೆತ್ತಿ ನೋಡುತ್ತಿಲ್ಲ. WTO ಒಪ್ಪಂದದ ಅನುಸಾರವಾಗಿ ನಮ್ಮ ದೇಶದ ಸೇವಾವಲಯವೂ ಖಾಸಗೀಕರಣ ವಾಯಿತಷ್ಟೆ. ಆದರಿಂದ ನಮ್ಮ ದೇಶಕ್ಕೆ ವಿದೇಶಿ ಸೇವಾ ಕ್ಷೇತ್ರದ ಯಾವ ಅವಕಾಶವೂ ತೆರೆದುಕೊಳ್ಳದಿದ್ದರೂ ಭಾರತದ ಎಲ್ಲಾ ಸೇವಾವಲಯಕ್ಕೂ, ಬ್ಯಾಂಕ್, ವಿಮೆ, ಸಂಪರ್ಕ, ಸಾರಿಗೆ ಎಲ್ಲದರಲ್ಲೂ ವಿದೇಶಿ ಬಂಡವಾಳದ ಲಗ್ಗೆ ಆರಂಭವಾಗಿದೆ. ಅದೇರೀತಿ ಈವರೆಗೆ ಸರ್ಕಾರದ ಏಕಸ್ವಾಮ್ಯದಲ್ಲಿದ್ದ ಟೆಲಿಫೋನ್ ಮತ್ತು ವಿಮಾನಯಾನ ಕ್ಷೇತ್ರಗಳಲ್ಲೂ ವಿದೇಶಿ ಬಂಡವಾಳ ನಮ್ಮ ದೇಶದ ರಕ್ಷಣೆಗೇ ಅಪಾಯ ಉಂಟುಮಾಡುವ ಮಟ್ಟಿಗೆ ಹರಿದು ಬರುತ್ತಿದೆ. ಮೊಬೈಲ್ ಟೆಲಿಫೋನ್ ಕಂಪನಿಗಳು ಹೆಚ್ಚಿಗೆ ಲಾಭ ಮಾಡಿಕೊಳ್ಳಲು ಹೇಗೆ ದೇಶ ರಕ್ಷಣೆಗೆ ಮೀಸಲಾಗಿದ್ದ ತರಂಗಾಂತರಗಳನ್ನು ಖಾಸಗಿಯವರಿಗೆ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಇದೇ ಅಂಕಣದಲ್ಲಿ ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ.




ಅದೇರೀತಿ ವಿಮಾನಯಾನಕ್ಕೆ ನಮ್ಮ ದೇಶಕ್ಕೆ ಸೇರಿರುವ ಆಕಾಶವೂ ಖಾಸಗೀಕರಣಗೊಂಡಿದೆ. ಈಗ ಅದು ನಮ್ಮ ದೇಶದ ರಕ್ಷಣೆಗೇ ಪೆಟ್ಟುಕೊಡುವಷ್ಟು ಸವಾಲು ಹಾಕುತ್ತಿದೆ. ವಿಮಾನಯಾನ ಕ್ಷೇತ್ರ ಖಾಸಗೀಕರಣ ಆದಂದಿನಿಂದ ಏರ್‌ಟ್ರಾಫಿಕ್ ಅಂದರೆ ಆಕಾಶದಲ್ಲಿ ವಿಮಾನಗಳ ಓಡಾಟದ ಸಾಂದ್ರತೆ ಹೆಚ್ಚಿದೆ. ಅದು ಪ್ರತಿ ವರ್ಷ ಶೇ.12ರಷ್ಟು ಹೆಚ್ಚುತ್ತಿದೆ. ಈಗ ವಿಮಾನಯಾನ ಎನ್ನುವುದು ಅತಿ ದೊಡ್ಡ ಲಾಭ ತರುವ ಕ್ಷೇತ್ರವೂ ಆದ್ದರಿಂದ ಈ ಖಾಸಗೀ ಕಂಪನಿಗಳು ತಮ್ಮ ಲಾಭವನ್ನು ಅರ್ಥಾತ್ ವಿಮಾನ ಯಾನದ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವ ಪ್ರಸ್ತಾಪವನ್ನು ಮುಂದಿಟ್ಟಿವೆ. ಆದರೆ ಆ ಪ್ರಮಾಣದ ವಿಮಾನ ಯಾನಕ್ಕೆ ಅವಕಾಶ ಕೊಡಬೇಕೆಂದರೆ ಅಷ್ಟರ ಮಟ್ಟಿಗೆ ಭಾರತದ ಆಕಾಶವನ್ನು ಇನ್ನೂ ಹೆಚ್ಚು ಖಾಸಗಿಯವರಿಗೆ ಬಿಡುಗಡೆ ಮಾಡಬೇಕಾಗುತ್ತದೆ. ಈಗಾಗಲೇ ಭಾರತದ ವಾಯುಪಡೆಯ ಉಸ್ತುವಾರಿ ಮತ್ತು ಬಳಕೆಯಲ್ಲಿದ್ದ ಆಕಾಶದಲ್ಲಿ ಶೇ.50ರಷ್ಟನ್ನು ಖಾಸಗಿ ಕಂಪನಿಗಳಿಗೆ ಬಿಡುಗಡೆ ಮಾಡಲಾಗಿದೆ. ಆದರಿಂದಾಗಿ ವಾಯುಪಡೆಯ ದೈನಂದಿನ ಕಸರತ್ತಿಗೆ ಈಗಾಗಲೇ ಧಕ್ಕೆಯಾಗಿದೆ. ಉದಾಹರಣೆಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಖಾಸಗಿ ವಿಮಾನಗಳ ಓಡಾಟ ಹೆಚ್ಚಾಗಿ ಏರ್‌ಟ್ರಾಫಿಕ್ ಹೆಚ್ಚಾದ ಮೇಲೆ ಯಲಹಂಕದಲ್ಲಿರುವ ವಾಯುಪಡೆಯ ಪೈಲೆಟ್ ತರಬೇತಿ ಕೇಂದ್ರವು ತನ್ನ ತರಬೇತಿಯನ್ನು 40 ಪೈಲೆಟ್‌ಗಳಿಂದ 20ಕ್ಕೆ ಇಳಿಸಿ ಕೊಂಡಿದೆ. ಈಗ ಇನ್ನೂ ಹೆಚ್ಚಿನ ಆಕಾಶ ಕೇಳುತ್ತಿರುವ ಖಾಸಗಿಯವರ ಬೇಡಿಕೆ ಈಡೇರಿಸಬೇಕೆಂದರೆ ವಾಯು ಪಡೆಯ ಸಾಮರ್ಥ್ಯ ಅಷ್ಟರ ಮಟ್ಟಿಗೆ ಇಳಿಯುತ್ತದೆ ಎಂದೇ ಅರ್ಥವಲ್ಲವೇ?

ಈಗ ಹೇಳಿ.... ದೇಶದ ರಕ್ಷಣೆಗೆ ನಿಜವಾದ ಶತ್ರುಗಳ್ಯಾರು.....?

ಒಂದು ಗುಟ್ಟು: ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಡಾ.ಸಿದ್ದಲಿಂಗಯ್ಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಅಧಿಕಾರ ವಹಿಸಿಕೊಂಡ ಕೂಡಲೇ ಡಾ.ಸಿದ್ದ ಲಿಂಗಯ್ಯನವರು 'ತಾನು ರಣಹೇಡಿಯೂ ಅಲ್ಲ, ರಣಶೂರನೂ ಅಲ್ಲ' ಎಂದು ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾರೆ. ಈ ಬಗೆಯ ಹೇಳಿಕೆಯನ್ನು ಮಾಮೂಲಾಗಿ ಪ್ರಾಧಿಕಾರದ ಅಧ್ಯಕ್ಷರುಗಳು ತಾವು ಅಧಿಕಾರದಿಂದ ನಿರ್ಗಮಿಸುವ ಮುನ್ನ ಹೇಳುತ್ತಿದ್ದರು. ಸಿದ್ದ ಲಿಂಗಯ್ಯನವರು ಕವಿಯಾದದ್ದರಿಂದ ಒಂದು ದೂರದೃಷ್ಟಿಯಿಂದ ಈಗಲೇ ಆ ಮಾತನ್ನು ಹೇಳಿರಬಹುದೇ? ಆಮೇಲೆ ಮಾಮೂಲಾಗಿ ಪ್ರಾಧಿಕಾರಕ್ಕೆ ಶಾಸನಬದ್ಧ ಅಧಿಕಾರ ಕೊಡಿ, ಕನ್ನಡವನ್ನು ಬಳಸದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವ ಅಧಿಕಾರ ಕೊಡಿ ಎಂದೆಲ್ಲಾ ಗೋಗರೆದಿದ್ದಾರೆ. ಯಥಾಪ್ರಕಾರ ಸರ್ಕಾರ ಸಹಾ ಖಂಡಿತಾ ಪ್ರಾಧಿಕಾರಕ್ಕೆ 'ಪ್ರಾ' ಕೊಟ್ಟಿದ್ದೇವೆ ಈಗ ಅಧಿಕಾರವನ್ನು ಕೊಡುತ್ತೇವೆ ಎಂದು ಭರವಸೆ ನೀಡಿದೆ. ಈ ಪ್ರಾಧಿಕಾರ ರಚನೆಯಾದಾಗಿನಿಂದ ಇದೊಂದು ಪ್ರಮಾಣವಚನದ ತರ ವಿಧಿಕರ್ಮಗಳಾಗಿಬಿಟ್ಟಿವೆ. ಆದರೂ ಸರ್ಕಾರದಲ್ಲಿ ಇನ್ನೂ ಕನ್ನಡ ಬಳಕೆ ಆಗದಿರಲು ಕಾರಣವೇನು? ಈವರೆಗೂ ಕನ್ನಡ ಬಳಸದ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳಲಾಗದಿರುವ ಗುಟ್ಟೇನು? ಸಿದ್ದಲಿಂಗಯ್ಯನವರೂ ಸಹಾ ಶಿಸ್ತು ಕ್ರಮಗಳ ಮಾತನಾಡುತ್ತಿದ್ದರೂ ತಾನು ಕೇವಲ ಅಧಿಕಾರಿಗಳ ಮನವೊಲಿಕೆ ಮತ್ತು ಮನವರಿಕೆ ಕ್ರಮಗಳಿಗೆ ಮಾತ್ರ ಮುಂದಾಗುವುದಾಗಿ ಹೇಳಿರುವ ಗುಟ್ಟೇನು?

ಚಾರ್ವಾಕ

- ಶಿವಸುಂದರ್-



.....ರಟ್ಟು ಇದರಲ್ಲಿ ಅಂತಹಾ ಗುಟ್ಟೇನೂ ಇಲ್ಲ, ಏಕೆಂದರೆ ಯಾವ ಸಿದ್ದಲಿಂಗಯ್ಯನವರೇ ಬಂದರೂ ಎಂತಹ ಪ್ರಾಧಿಕಾರವೇ ಆದರೂ ಆಡಳಿತದಲ್ಲಿ ಕನ್ನಡ ಬಳಸದೇ ಇರುವುದನ್ನು ಶಿಕ್ಷಾತ್ಮಕ ಅಪರಾಧ ಮಾಡುವ ಶಾಸನ ಈ ಸದ್ಯಕ್ಕಂತೂ ಕರ್ನಾಟಕದಲ್ಲಿಲ್ಲ. ಆ ಬಗೆಯ ಶಾಸನ ತರುವ ಆಸಕ್ತಿಯೂ ಸರ್ಕಾರಕ್ಕಿಲ್ಲ. ಏಕೆಂದರೆ ಕರ್ನಾಟಕ ಸರ್ಕಾರಗಳ ಪಾಲಿಗೆ ನಿಜವಾದ ಸಿಟಿಜನ್‌ಗಳು ದೇಶಕ್ಕೆ ನುಗ್ಗಿಬರುತ್ತಿರುವ ವಿದೇಶಿ ಬಂಡವಾಳಿಗರು ಮತ್ತು ಸ್ವದೇಶಿ ಸಾಫ್ಟ್‌ವೇರ್ ದೊರೆಗಳು. ಜಾಗತೀಕರಣದ ಈ ಯುಗದಲ್ಲಿ ಸರ್ಕಾರ ಇರುವುದೇ ಈ ಉದ್ಯಮಿಗಳ ಮತ್ತು ಉದ್ಯಮದ ಹಿತಾಸಕ್ತಿಗೆ ಎಂಬಂತಾಗಿದೆ. ಈ ಉದ್ಯಮಕ್ಕೆ ಬೇಕಾಗಿರುವುದು ಹೆಚ್ಚೆಚ್ಚು ಇಂಗ್ಲಿಷೇ ವಿನಃ ಕನ್ನಡವಲ್ಲ. ಈ ಉದ್ಯಮಿಗಳನ್ನು ಆಕರ್ಷಿಸಲು ಅಕ್ಕಪಕ್ಕದ ರಾಜ್ಯಗಳ ನಡುವೆ ನಡೆಯುತ್ತಿರುವ ಪೈಪೋಟಿಯಲ್ಲಿ ಯಾವ ರಾಜ್ಯ ಅತಿ ಹೆಚ್ಚು ಇಂಗ್ಲಿಷ್ ಪೋಷಕ ಎಂದು ಹೆಸರು ಪಡೆಯುವುದೋ ಆ ರಾಜ್ಯಕ್ಕೆ ಈ ಆಧುನಿಕ ಇಂಗ್ಲಿಷರು ಆಗಮಿಸಲಿದ್ದಾರೆ! ಹೀಗಾಗಿ ಯಾವ ಸರ್ಕಾರವೂ ಇಂಗ್ಲಿಷ್ ವಿರೋಧಿಯೆಂದು ಹೆಸರು ಹೊತ್ತುಕೊಳ್ಳಲು ತಯಾರಿಲ್ಲ. ಅದೇರೀತಿ ಕರ್ನಾಟಕ ಸರ್ಕಾರವೂ ಸಹಾ ಯಾವ ಕಾರಣಕ್ಕೂ ಕನ್ನಡವನ್ನು ಕಡ್ಡಾಯ ಮಾಡಿ ತಮ್ಮ ಆ ತಥಾಕಥಿತ ಅಭಿವೃದ್ಧಿಯ ಸೈಕಲ್ಲಿಗೆ ಅಡ್ಡಗಾಲೇಕೆ ಹಾಕಿಕೊಳ್ಳುತ್ತಾರೆ? ಅದರ ಬದಲಿಗೆ ಸಿದ್ದಲಿಂಗಯ್ಯನವರಿಗೆ ಸಕಲ ಕಾಂಟೆಸ್ಸಾ ಸೌಕರ್ಯಗಳನ್ನು ಒದಗಿಸಿದ್ದನ್ನೇ ಕನ್ನಡಕ್ಕೆ ಕೊಟ್ಟ ಸೌಕರ್ಯ ಎನ್ನುತ್ತಾರೆ. ರಣಶೂರರೆಲ್ಲಾ ಕೇವಲ ಒಣಶೂರರಾಗಿ ಕನ್ನಡ ಮಾತ್ರ ಬಣಗುಡುವುದು ಈ ಕಾರಣಕ್ಕಾಗಿಯೇ..

ಒಂದು ಲಕ್ಷ ರೈತರ ಆತ್ಮಹತ್ಯೆ.. ಹಾಗೂ ಇನ್ನೂ ಮುಂದುವರೆದಿದೆ...

ಸರ್ಕಾರವೇ ಇತ್ತೀಚೆಗೆ ಬಿಡುಗಡೆ ಮಾಡಿರುವ ಅಂಕಿ ಅಂಶದ ಪ್ರಕಾರ 1998-2003ರ ನಡುವೆ ಭಾರತದಲ್ಲಿ ಒಂದು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂದರೆ ಸರಾಸರಿ ಒಂದು ದಿನಕ್ಕೆ 45 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದೇನು 2003ಕ್ಕೆ ಮುಗಿದು ಹೋದ ಸಂಗತಿಯಲ್ಲ, ಕಳೆದ ಜನವರಿಯಿಂದ ಈ ಜೂನ್‌ವರೆಗೆ ಮಹಾರಾಷ್ಟ್ರದ ವಿದರ್ಭವೊಂದರಲ್ಲೇ 700 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರೆಲ್ಲರೂ ಹತ್ತಿ ಬೆಳೆಗಾರರು. ಆದರರ್ಥ ಹತ್ತಿ ಇಳುವರಿ ಕಡಿಮೆಯಾಗಿದೆ ಎಂತಲೂ ಅಲ್ಲ, ಅಥವಾ ಹತ್ತಿಯಾಧಾರಿತ ಬಟ್ಟೆ ಉದ್ಯಮ ನೆಲಕಚ್ಚಿದೆ ಎಂತಲೂ ಅರ್ಥವಲ್ಲ, ಹಾಗೆ ನೋಡಿದರೆ ಹತ್ತಿ ಉತ್ಪಾದನೆ ಈ ವರ್ಷ 25 ಲಕ್ಷ ಬೇಲ್



ತಲುಪಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.15ರಷ್ಟು ಜಾಸ್ತಿ, ಅಷ್ಟು ಮಾತ್ರವಲ್ಲ, ಹತ್ತಿ ಬಟ್ಟೆ ತಯಾರಿಸುವ ಉದ್ಯಮವೂ ಒಳ್ಳೆಯ ಬೂಮ್‌ನಲ್ಲಿದೆ. ಅದರಲ್ಲೂ ಎಮ್.ಎಫ್.ಎ. ಒಪ್ಪಂದ ರದ್ದಾದ ಮೇಲೆ ಭಾರತದ ಉದ್ಯಮಕ್ಕೆ ತಾತ್ಕಾಲಿಕವಾಗಿ ಒಳ್ಳೆಯ ಅವಕಾಶಗಳು ಉದ್ಭವಿಸಿವೆ. ಆದರೆ ಈ ಸಮೃದ್ಧಿಯ ಯುಗದಲ್ಲೂ ರೈತರ ಬದುಕು ಮಾತ್ರ ಬರ್ಬಾದಿಯ ಕಡೆಗೇ ಧಾವಿಸುತ್ತಿರುವುದಕ್ಕೆ ಕಾರಣವೇನು? ಕಾರಣವಿಷ್ಟೆ. ಭಾರತ ಸರ್ಕಾರ ಮುಕ್ತ ಆಮದು ಮತ್ತು ರಫ್ತು ನೀತಿ ಜಾರಿಗೆ ತಂದಾಗಿನಿಂದ ಭಾರತದ ಬಟ್ಟೆ ಉದ್ಯಮಕ್ಕೆ ಬೇಕಾದ ಹತ್ತಿಯನ್ನು ವಿದೇಶದಿಂದ ಮುಕ್ತ ಆಮದು ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಅಷ್ಟು ಮಾತ್ರವಲ್ಲ, ಸರ್ಕಾರ ರೈತರಿಗೆ ಕೊಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳುತ್ತಿರುವುದಂತೂ ಮುಂದುವರೆದೇ ಇದೆ. ಅದು ನಿಲ್ಲುವಂತಿಲ್ಲ... ಈ ಜಾಗತೀಕರಣದ ಜೈತ್ರ ಯಾತ್ರೆ ನಿಲ್ಲುವಂತಿಲ್ಲ, ಅದೇರೀತಿ ರೈತರ ಆತ್ಮಹತ್ಯೆಯೂ ನಿಲ್ಲುವಂತಿಲ್ಲ...

ವಾರದ ಫೋಟೋ



ಚೆ ಹುಟ್ಟಿದಿನದಂದು..ಚೆ ಕನಸಿದ ದಾರಿಯಲ್ಲಿ ಅಮ್ಮ ಮಗು

ಒಂದು ಸತ್ಯ :



ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಎಷ್ಟು ಹೆಚ್ಚಾಗಿದೆ? ತಕ್ಷಣ ಅದಕ್ಕೆ ಬರುವ ಉತ್ತರ ಇತ್ತೀಚೆಗೆ ಹೆಚ್ಚಾದ 4 ರೂಪಾಯಿಗಳು ಮಾತ್ರ. ಆದರೆ ವಾಸ್ತವವೇನೆಂದರೆ ಈವರೆಗೆ ಅಂದರೆ ಕೇವಲ ಎರಡು ವರ್ಷಗಳಲ್ಲಿ ಈ ಸರ್ಕಾರ ಹೆಚ್ಚಿಸಿರುವ ದರ ಯಾವುದೇ ಸರ್ಕಾರಕ್ಕಿಂತ ಹೆಚ್ಚು, ಉದಾಹರಣೆಗೆ 2004ರ ಜೂನ್‌ನಿಂದ ಇದೇ ಜೂನ್ 2006ರವರೆಗೆ ಸರ್ಕಾರ ಏರಿಸಿರುವ ದರದ ಪಟ್ಟಿ ನೋಡಿ:


.	ಪೆಟ್ರೋಲ್(ಪ್ರತಿ ಲೀಟರ್‌ಗೆ)	ಡೀಸೆಲ್(ಪ್ರತಿ ಲೀಟರ್‌ಗೆ)
	(ರೂಪಾಯಿಗಳಲ್ಲಿ)	
2004-ಜೂನ್	2ರು.	1ರು.
ಸೆಪ್ಟೆಂಬರ್	1.10	1.42
ನವೆಂಬರ್	1.03	2.12
2005-ಜೂನ್	2.50	2.00
ಸೆಪ್ಟೆಂಬರ್	3.15	2.17
2006-ಜೂನ್	4.00	2.00
ಒಟ್ಟು ಎರಡು ವರ್ಷಗಳಲ್ಲಿ	13.78ರೂ.	10.71ರೂ?..!!!!!



No Comments

"ಕೈಗಾರಿಕಾಭಿವೃದ್ಧಿಗೆಂದು CPM ಸರ್ಕಾರ ರೈತರ ಭೂಮಿ ವಶಪಡಿಸಿಕೊಂಡರೆ ನಾವು ವಿರೋಧಿಸುವುದಿಲ್ಲ, ಈಗಲಾದರೂ ಎಡಪಕ್ಷಗಳು ಮಾರ್ಕ್ಸ್‌ವಾದದ ಕಪಿಮುಷ್ಟಿಯಿಂದ ಹೊರಬರುತ್ತಿರುವುದು ಒಳ್ಳೆಯ ಸಂಗತಿಯೇ"

-ತಥಾಗತ ರಾಯ್, ಪ.ಬಂಗಾಳದ ಬಿ.ಜೆ.ಪಿ. ಅಧ್ಯಕ್ಷ



"ನಾವು ಗಾಯಗೊಂಡಾಗ ಮನಸ್ಸು ಯೋಚಿಸುವ ರೀತಿಯೇ ಬೇರೆ"

-ಸಚಿನ್ ತೆಂಡುಲ್ಕರ್



"ಬಿಹಾರದಲ್ಲಿ ಹಣ ಹೂಡುವವರು ಹಾಳಾಗಿಹೋಗುತ್ತಾರೆ"

-ಲಾಲೂಪ್ರಸಾದ್ ಯಾದವ್




"ಭಾರತದಲ್ಲಿ ಈಗ ನಮಗೆ ಎಂತಹಾ ಅವಕಾಶ ದೊರೆಯುತ್ತಿದೆ ಎಂದರೆ ಕೇವಲ ಕೆಲವು ವರ್ಷಗಳ ಹಿಂದೆ 25ಕೋಟಿ ರೂಪಾಯಿಗಳ ಕಂಪನಿಯಾಗಿದ್ದ ನಾವು ಈಗ 12000 ಕೋಟಿ ರೂಪಾಯಿಗಳ ಕಂಪನಿಯಾಗಿದ್ದೇವೆ"

-ಸುನಿಲ್ ಮಿಟ್ಟಲ್, ಏರ್‌ಟೆಲ್ ಕಂಪನಿಯ ಅಧ್ಯಕ್ಷ

"ನಮ್ಮ ಸರ್ಕಾರ ಒಂದು ಗುಂಡುಕಲ್ಲಿನಂತಿದೆ"


-ಹೆಚ್.ಡಿ.ಕುಮಾರಸ್ವಾಮಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ನಮ್ಮ ಬಿ.ಜೆ.ಪಿ. ಪಕ್ಷ ಯಾವುದೇ ಚಿತ್ರಗಳನ್ನು ಬ್ಯಾನ್ ಮಾಡುವುದಕ್ಕೆ ವಿರುದ್ಧ"

-ಶತ್ರುಘ್ನ ಸಿನ್ಹಾ



"ಸರ್ಕಾರ ಜನರ ವೈದ್ಯೋಪಚಾರಕ್ಕೆ ತಗುಲುತ್ತಿರುವ ವೆಚ್ಚವನ್ನು ಕಡಿಮೆ ಮಾಡಬೇಕೆಂದರೆ ಖಾಸಗೀ ಉದ್ಯಮಿಗಳಿಗೆ ಅವಕಾಶ ಕೊಡಬೇಕು"

-ಡಾ.ದೇವಿಶೆಟ್ಟಿ

"ನಾನು ರಣಶೂರನೂ ಅಲ್ಲ-ರಣಹೇಡಿಯೂ ಅಲ್ಲ"

- ಡಾ.ಸಿದ್ದಲಿಂಗಯ್ಯ

"ನಾನು ಮಾದಕ ವ್ಯಸನಿಯಲ್ಲ, ನನ್ನ ವಿರುದ್ಧ ವ್ಯವಸ್ಥಿತ ಸಂಚು ನಡೆದಿದೆ"

-ರಾಹುಲ್ ಮಹಾಜನ್

ವಾರದ ಘೋಷಣೆ:



"ಶೋಷಣೆ ಹಾಗೂ ದಮನದ ವಿರುದ್ಧ ಜಗತ್ತಿನ ಯಾವುದೇ ಮೂಲೆಯಲ್ಲಿ ಹೋರಾಡುತ್ತಿದ್ದರೂ ನೀನು ನನ್ನ ಸಂಗಾತಿ"

-ಚೆ ಗೆವಾರ

◆ ಸೌಂದರ್ಯ

ಮಾನವ ಪ್ರಜ್ಞೆಯು ವಿಕಾಸದ ಪ್ರತಿ ಮೆಟ್ಟಿಲುಗಳೂ ಚೆಂದವನ್ನು ಬೇಟೆಯಾಡುತ್ತಾ ಬೆಳೆದಿವೆ. ಸೌಂದರ್ಯ ವಸ್ತುಗಳಲ್ಲಿದೆಯೋ, ಕಾಣುವ ಕಾಣ್ಕೆಯಲ್ಲಿದೆಯೋ ಜಿಜ್ಞಾಸೆ ನಡೆದೇ ಇದೆ. ಹಾಗೆ ನೋಡಿದರೆ ಅದು ಮಾನವ ಹೃದಯದ ಅಂತಃಕರಣ. ನಿಸರ್ಗ ಆಡುವ ಆಟದ ಬಣ್ಣಗಳ ತನನಂ...

ಇಲ್ಲಿ ಈ ಸಂಚಿಕೆಯ ಪುಟಗಳಲ್ಲಿ ಸೌಂದರ್ಯದ ಬಗೆಗಿನ ವಿವಿಧ ಬಣ್ಣಗಳ ಮಾತುಗಳಿವೆ

-ಮೂರ್ತಿ

ಇವರೂ ಭಯೋತ್ಪಾದಕರೆ ಅಲ್ಲವೆ....?

ಭಜರಂಗದಳಕ್ಕೂ, ಲಷ್ಕರಿ ಇ ತೊಯಿಬಾಗೂ
ನು ವ್ಯತ್ಯಾಸ? ಈ ಪ್ರಶ್ನೆ ಕೇಳಲು ಹಲವು ಕಾರಣಗಳಿವೆ.
ವುಗಳನ್ನು ನೀಡುವ ಮುನ್ನ ಇತ್ತೀಚೆಗೆ ನಾಗಪುರ
ಲ್ಲಿರುವ ಆರ್‌ಎಸ್‌ಎಸ್ ಕೇಂದ್ರ ಕಚೇರಿಯ ಮೇಲೆ
ಸ್ಲಿಂ ಭಯೋತ್ಪಾದಕರು ದಾಳಿ ನಡೆಸಲೆತ್ನಿಸಿ
ೋಲೀಸರ ಗುಂಡೇಟಿಗೆ ಸತ್ತಿದ್ದು ನೆನಪಿರಬೇಕಲ್ಲ?
ದರೆ ಯಾಕೊ ಏನೋ, ಈ ದಾಳಿಯ ವಿರುದ್ಧ
ಘ ಪರಿವಾರಿಗಳು ತಮ್ಮ ಎಂದಿನ ಚಾಳಿಯಂತೆ
ದೆಬಡಿದುಕೊಂಡು ಪ್ರತಿಭಟಿಸಲಿಲ್ಲ, ಬಂದ್‌ಗೆ
ಕೊಡಲಿಲ್ಲ, ಬೀದಿಗಿಳಿದು ಗಲಾಟೆ
ಾಡಲಿಲ್ಲ. ಯಾಕೆ? ಅಯೋಧ್ಯೆಯಲ್ಲಿರುವ
ದಕಾಶಿ ದೇವಸ್ಥಾನದ ಮೇಲೆ ನಡೆದ ದಾಳಿಯತ್ನ
ತ್ತು ವಾರಣಾಸಿಯಲ್ಲಿ ನಡೆದ ಬಾಂಬ್ ಸ್ಫೋಟಗಳನ್ನು
ುತ್ಸದ್ದಿ' ವಾಜಪೇಯಿಯಿಂದ ಹಿಡಿದು ಸಣ್ಣಪುಟ್ಟ
ದ್ದಿಗಳೂ ಖಂಡಿಸಿದ್ದರು. ಆದರೆ ಅವರ ಗರ್ಭ
ಡಿಯಾದ ಆರ್‌ಎಸ್‌ಎಸ್ ಕೇಂದ್ರ ಕಚೇರಿಯ ಮೇಲೆ
ಳಿ ಯತ್ನ ನಡೆದರೆ ಅವರೆಲ್ಲಾ ಸುಮ್ಮನಿದ್ದರು ಯಾಕೆ?

ಈ ಪ್ರಶ್ನೆಗಳಿಗೆ ಜವಾಹಲ್‌ಲಾಲ್ ನೆಹರು
ಶ್ವವಿದ್ಯಾಲಯದ ಸುಭಾಷ್ ಗಾಟಡೆಯವರು ಒಂದು
ಖನದಲ್ಲಿ ಉತ್ತರ ನೀಡಿದ್ದಾರೆ. ಅವರ ಪ್ರಕಾರ
್‌ಎಸ್‌ಎಸ್ ಕೇಂದ್ರ ಕಚೇರಿಯ ಮೇಲೆ ನಡೆದ
ಳಿ ಯತ್ನವನ್ನು ಕೂಲಂಕಷವಾಗಿ ವಿಚಾರಿಸಿದ್ದೇ ಆದಲ್ಲಿ
್‌ಎಸ್‌ಎಸ್ ಒಂದು "ಸಾಂಸ್ಕೃತಿಕ ಸಂಘಟನೆ"
ಬ ಮುಖವಾಡ ಕಳಚಿ ಬೀಳುತ್ತಿತ್ತು
ತ್ರವಲ್ಲ, ಲಷ್ಕರ್ ಇ ತೊಯಿಬಾದಂತೆ
್‌ಎಸ್‌ಎಸ್‌ನ "ಹಿಂದೂ ಪರಿವಾರ"
ಡ ಭಯೋತ್ಪಾದಕ ಕೃತ್ಯಗಳಲ್ಲಿ
ಗವಹಿಸುತ್ತಿರುವುದೂ ಬಟಾಬಯ
ಗುತ್ತಿತ್ತು. ಗಾಟಡೆಯವರು ತಮ್ಮ
ಅಭಿಪ್ರಾಯವನ್ನು ಮಾಹಿತಿ ಸಮೇತ
ಡಿದ್ದಾರೆ.

ಕಳೆದ ಏಪ್ರಿಲ್ ತಿಂಗಳಲ್ಲಿ ಮಹಾ
ಷ್ಟ್ರದ ನ್ಯಾಮ್‌ಡೀಡ್ ಎಂಬ ನಗರದ
್‌ಎಸ್‌ಎಸ್ ಮುಖ್ಯಸ್ಥರೊಬ್ಬರ
ನೆಯಲ್ಲಿ ಅಸಹಜ ಸ್ಫೋಟ ಸಂಭವಿಸಿ
ಬ್ಬರು ಭಜರಂಗದಳದ ಕಾರ್ಯಕರ್ತರು
ದ್ದರು. ಈ ಸುದ್ದಿ ಕರ್ನಾಟಕದ ಒಂದು ಪತ್ರಿಕೆಯಲ್ಲಿ
ತ್ರ ಸಣ್ಣದಾಗಿ ಪ್ರಕಟಗೊಂಡಿತ್ತು. ಟೀವಿ
ನೆಲ್‌ಗಳಂತೂ ಇದರ ಬಗ್ಗೆ ತಲೆ ಕೆಡಿಸಿಕೊಳ್ಳಲೇ
ಬಡಿ. ಆರ್‌ಎಸ್‌ಎಸ್ ಮುಖಂಡನ ಮನೆಯಲ್ಲಿ
ದ ಈ ಸ್ಫೋಟಕ್ಕೆ ಕಾರಣವೇನಿರಬಹುದು ಎಂಬ
ಪ್ರಶ್ನೆಗೆ ಗಾಟಡೆಯವರ ಲೇಖನದಲ್ಲಿ ಉತ್ತರಗಳಿವೆ.

ಗಾಟಡೆ ಹೀಗೆ ಹೇಳುತ್ತಾರೆ: ಹೇಳಿಕೇಳಿ
ಮ್‌ಡೀಡ್ ನಗರ ಕೋಮು ಸೂಕ್ಷ್ಮ ನಗರ. ಗುರು
ೋಬಿಂದ್ ಸಿಂಗ್‌ನ ಸಮಾಧಿ ಈ ನಗರದಲ್ಲಿರುವು
ದ ಇಲ್ಲಿ ಹಿಂದೂ ಮತ್ತು ಮುಸ್ಲಿಮರಲ್ಲದೆ ಸಾಕಷ್ಟು
ಖ್ಯೆಯಲ್ಲಿ ಸಿಖ್‌ರೂ ಇದ್ದಾರೆ. ಕಳೆದ ಏಪ್ರಿಲ್ ತಿಂಗಳಲ್ಲಿ
.ಕೆ. ಅಡ್ವಾಣಿಯವರ 'ಭಾರತ್ ಸುರಕ್ಷಾ ಯಾತ್ರೆ'
ಮಹಾರಾಷ್ಟ್ರವನ್ನು ಪ್ರವೇಶಿಸಬೇಕಿತ್ತು, ಅದೇ ಸಮಯಕ್ಕೆ ಸಿಖ್ ಹುಡುಗಿಯೊಬ್ಬಳು ಮುಸ್ಲಿಮ್ ಯುವಕನೊಂದಿಗೆ ಓಡಿ ಹೋದಳು ಎಂಬ ಸುದ್ದಿ ಎಲ್ಲೆಡೆ ಹರಡಿ ಆ ಎರಡೂ ಸಮುದಾಯಗಳ ನಡುವೆ ಗಲಾಟೆಗಳು ಪ್ರಾರಂಭವಾಗಿದ್ದವು. ಈ ಸನ್ನಿವೇಶವನ್ನು

ಕಂಡಹಾಗೆ



ಬಳಸಿಕೊಂಡು ಎರಡೂ ಅಲ್ಪಸಂಖ್ಯಾತ ಸಮುದಾಯಗಳ ನಡುವೆ ಬೆಂಕಿ ಹಚ್ಚುವ ಉದ್ದೇಶ ಆರ್‌ಎಸ್‌ಎಸ್‌ಗೆ ಇತ್ತು. ಆ ಕಾರಣಕ್ಕಾಗಿಯೇ ಲಕ್ಷ್ಮಣ ರಾಜಕೊಂಡ್ವಾರ್ ಎಂಬ ಆರ್‌ಎಸ್‌ಎಸ್ ಮುಖಂಡನ ಮನೆಯಲ್ಲಿ ಪೈಪ್ ಬಾಂಬ್‌ಗಳನ್ನು ಭಜರಂಗಿಗಳು ತಯಾರಿಸುತ್ತಿದ್ದರು. ಆದರೆ ಅದೇನೋ ಎಡವಟ್ಟಾಗಿ ಆ ಬಾಂಬ್ ಸ್ಫೋಟಗೊಂಡು ಇಬ್ಬರು ಭಜರಂಗಿಗಳು ಸತ್ತರು.

ಈ ಸ್ಫೋಟದ ಬಗ್ಗೆ ಹಿಂದೂತ್ವವಾದಿಗಳು "ರಾಜಕೊಂಡ್ವಾರ್‌ರವರ ಮನೆಯಲ್ಲಿ ಪಟಾಕಿಗಳನ್ನು ತಯಾರಿಸುತ್ತಿದ್ದರು. ಅವು ಬಾಂಬ್ ಅಲ್ಲ" ಎಂದು



ಹೇಳಿ ತಿಪ್ಪೆ ಸಾರಿಸಲು ಯತ್ನಿಸಿದ್ದರು. ಆದರೆ ಆ ಘಟನೆಯಲ್ಲಿ ಸತ್ತವರ ದೇಹಗಳಲ್ಲಿ ಬಾಂಬ್ ಚೂರುಗಳು ಸಿಕ್ಕಿದ್ದವು. ಅಷ್ಟೇ ಅಲ್ಲ ರಾಜಕೊಂಡ್ವಾರ್‌ರವರ ಮನೆಯಲ್ಲಿ ಮುಸಲ್ಮಾನರು ಧರಿಸುವ ಅಂಗಿ, ಟೋಪಿಗಳ ಜೊತೆ ಸುತ್ತಮುತ್ತಲಿನ ಮಸೀದಿಗಳ ನೀಲನಕ್ಷೆಗಳೂ ಪೋಲೀಸರಿಗೆ ಸಿಕ್ಕಿದ್ದವು. ಯಾವುದೋ ತಲೆ ಕೆಟ್ಟ ಸಂಘ ಪರಿವಾರಿಗಳು ಇಂತಹ ದುಷ್ಕೃತ್ಯದಲ್ಲಿ ತೊಡಗಿದ್ದಿರಬಹುದು ಎಂದು ಹೇಳಿ ಸುಮ್ಮನಾಗಲಾಗುವುದಿಲ್ಲ.

ಏಕೆಂದರೆ ರಾಜಕೊಂಡ್ವಾರ್‌ರವರ ಮನೆಯಲ್ಲಿ ತಯಾರಿಸಲಾಗುತ್ತಿದ್ದ ಪೈಪ್ ಬಾಂಬ್‌ಗಳನ್ನು ಅದಕ್ಕೂ ಹಿಂದೆಯೇ ಮಹಾರಾಷ್ಟ್ರದ ಹಲವು ಕಡೆ ಸ್ಫೋಟಿಸಲಾಗಿತ್ತು, ಉದಾಹರಣೆಗೆ ಔರಂಗಬಾದ್‌ನ ಗಣೇಶನ ದೇವಸ್ಥಾನದ ಹತ್ತಿರ, ಆನಂತರ ವಿಶ್ವಹಿಂದೂ ಪರಿಷತ್ತಿನ ಆಫೀಸಿನ ಹತ್ತಿರ, ಆಮೇಲೆ ಮಹದೇವ್ ಗುಡಿಯ ಹತ್ತಿರ ಪೈಪ್ ಬಾಂಬ್‌ಗಳನ್ನು ಇಟ್ಟು ಸ್ಫೋಟಿಸಲಾಗಿತ್ತು, ಆ ಕೃತ್ಯಗಳನ್ನು ಮುಸ್ಲಿಮರ ಬಟ್ಟೆ, ಟೋಪಿಗಳನ್ನು ಧರಿಸಿದ್ದವರೇ ಎಸಗಿದ್ದರು ಮಾತ್ರವಲ್ಲ, ಅವರ್ಯಾರನ್ನೂ ಇಲ್ಲಿಯವರೆಗೂ ಬಂಧಿಸಿಲ್ಲ.

ಇದೆಲ್ಲ ಏನನ್ನು ಸೂಚಿಸುತ್ತದೆ? ಇಷ್ಟೇ: ಅಡ್ವಾಣಿಯವರ 'ಭಾರತ ಸುರಕ್ಷಾ ಯಾತ್ರೆ' ನ್ಯಾಮ್‌ಡೀಡ್ ಅನ್ನು ಪ್ರವೇಶಿಸಿದ್ದಾಗ ನಗರದ ಹಲವು ಕಡೆ ಪೈಪ್ ಬಾಂಬ್‌ಗಳನ್ನು ಸ್ಫೋಟಿಸಿ ಕೋಮು ಗಲಭೆಯನ್ನು ಸೃಷ್ಟಿಸುವ ಉದ್ದೇಶ ಸಂಘ ಪರಿವಾರದವರದಾಗಿತ್ತು ಎಂಬುದನ್ನು.

ಆದರೆ ಸಂಘ ಪರಿವಾರಿಗಳು ಇಂತಹ ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿದ್ದು ಇದೇ ಮೊದಲಲ್ಲ. ಎ.ಜಿ. ನೂರಾನಿಯವರು 2000 ರಲ್ಲಿ ಬರೆದ 'ಅರ್ಧ ಶತಮಾನದ ರಕ್ತಸಿಕ್ತ ದಾಖಲೆ' ಎಂಬ ಲೇಖನದಲ್ಲಿ ವಿಚಾರಣಾ ಆಯೋಗಗಳು ಕೋಮು ಗಲಭೆಗಳಿಗೆ ಸಂಘ ಪರಿವಾರ ಕಾರಣವಾಗಿತ್ತು ಎಂದು ಹೇಳಿದ್ದನ್ನು ಉದಾಹರಣೆಗಳ ಸಮೇತ ನೀಡಿದ್ದಾರೆ. ಒಂದು ಪ್ರಕರಣದಲ್ಲಿ ಹಿಂದೂತ್ವವಾದಿಗಳ ಪಿತಾಮಹ ಎಂ.ಎಸ್. ಗೋಲ್ವಾಲ್‌ಕರ್‌ನೇ ಭಾಗಿಯಾಗಿದ್ದು ಆತನನ್ನು ಬಂಧಿಸಲು ಅಂದಿನ ಉತ್ತರ ಪ್ರದೇಶದ ಮುಖ್ಯಮಂತ್ರಿ ಜಿ.ಬಿ. ಪಂತ್ ಹಿಂದೇಟು ಹಾಕಿದ್ದರು. ಇದನ್ನೆಲ್ಲ ನೋಡಿ ಅಂದಿನ ರಾಷ್ಟ್ರಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲರು "ಆರ್‌ಎಸ್‌ಎಸ್‌ನ ಚಟುವಟಿಕೆಗಳು ಸರ್ಕಾರ ಮತ್ತು ರಾಜ್ಯದ ಅಸ್ತಿತ್ವಕ್ಕೆ ಒಂದು ಬೆದರಿಕೆಯಾಗಿವೆ" ಎಂದು ಇನ್ನೊಬ್ಬ ಚೆಡ್ಡಿ ವೀರ ಶ್ಯಾಂಪ್ರಸಾದ್ ಮುಖರ್ಜಿಗೆ ಪತ್ರ ಬರೆದಿದ್ದರು.

ನಮ್ಮ ಪ್ರಶ್ನೆ ಇಷ್ಟೇ: ಕುಖ್ಯಾತ ಲಷ್ಕರ್-ಇ ತೊಯಿಬಾವನ್ನು ಭಯೋತ್ಪಾದಕ ಸಂಘಟನೆ ಎಂದು ಘೋಷಿಸಲಾಗಿದೆ, ಸಿಮಿ ಎಂಬ ಮುಸ್ಲಿಮ್ ವಿದ್ಯಾರ್ಥಿಗಳ ಸಂಘವನ್ನು ಬ್ಯಾನ್ ಮಾಡಲಾಗಿದೆ. ಆದರೆ ತಾನು 'ಸಾಂಸ್ಕೃತಿಕ ಸಂಘಟನೆ' ಎಂದೂ, 'ವ್ಯಕ್ತಿತ್ವ ವಿಕಸನಕ್ಕೆ ಶ್ರಮಿಸುತ್ತಿರುವ ಪರಿವಾರ'ವೆಂದೂ ಹೇಳುವ ಆರ್‌ಎಸ್‌ಎಸ್ ಮತ್ತದರ ಹಿಂಬಾಲಕ ಪಡೆಗಳನ್ನೂ ಭಯೋತ್ಪಾದಕ ಕೂಟ ಎಂದು ಬ್ಯಾನ್ ಮಾಡಬಾರದೇಕೆ?

-ಗೌರಿ ಲಂಕೇಶ್

ಕಳೆದ ಸೋಮವಾರ ನಾನು ಮತ್ತು ನಮ್ಮ ಮಲ್ಲನಗೌಡರ್ ಅಮ್ಮನ ನೆಲಮಂಗಲದ ತೋಟದಲ್ಲಿ ಬಾಳೆಗಿಡಗಳ ಕೂಳೆಬೆಳೆಗಳನ್ನು ಕೀಳುತ್ತಿದ್ದಾಗ ನಮ್ಮ ಹಿರಿಯ ವರದಿಗಾರರಾದ ಸದಾಶಿವ ಶೆಣೈಯವರಿಂದ ಫೋನ್ ಬಂತು. "ಆ ರವಿ ಶ್ರೀವತ್ಸ ನನಗೆ ಫೋನ್ ಮಾಡಿ ಅವಾಚ್ಯ ಪದಗಳಿಂದ ಏನೇನೋ ಹೇಳುತ್ತಿದ್ದಾನೆ. ಈಗಾಗಲೇ ಐದಾರು ಬಾರಿ ಫೋನ್ ಮಾಡಿದ್ದಾನೆ" ಅಂದರು.

"ತಕ್ಷಣವೇ ಆತನ ವಿರುದ್ಧ ಪೋಲೀಸರಿಗೆ ದೂರು ಕೊಡಿ. ಬೇಕಿದ್ದರೆ ನಾನು ಕೂಡ ನಮ್ಮ ವರದಿಗಾರರಿಗೆ ಈ ಶ್ರೀವತ್ಸ ಬೆದರಿಸುತ್ತಿದ್ದಾನೆ ಎಂದು ದೂರು ಕೊಡುತ್ತೇನೆ" ಅಂದೆ.



ಏನಾಗಿತ್ತೆಂದರೆ ಕಳೆದ ಸಂಚಿಕೆಯಲ್ಲಿ ಶ್ರೀವತ್ಸ ಎಂಬಾತ ನಿರ್ದೇಶಿಸಿರುವ 'ಗಂಡ-ಹೆಂಡತಿ' ಸಿನಿಮಾ ಬಗ್ಗೆ ನಾಲ್ಕೈದು ಸಾಲುಗಳನ್ನು ಪ್ರಕಟಿಸಿದ್ದೆವು. ಈ ಶ್ರೀವತ್ಸ ಎಂತಹ ಹುಂಬ ಎಂದರೆ ತನ್ನ ಚಿತ್ರ ಅದ್ಭುತವಾಗಿದೆ ಎಂದು ನಂಬಿ ಅದರ ಹಲವು ದೃಶ್ಯಗಳನ್ನು ಸಿನಿಮಾ ಪತ್ರಕರ್ತರಿಗೆ ತೋರಿಸಿದ್ದ. ಹಿಂದೆ 'ದೆಡ್ಲಿ ಸೋಮ ' ಎಂಬ 'ಸುಮಾರಾದ' ಸಿನಿಮಾ ಮಾಡಿದ್ದ ಶ್ರೀವತ್ಸನ ಲೇಟೆಸ್ಟ್ ಸೃಷ್ಟಿ ನೋಡಿ ಪತ್ರಕರ್ತರು ಶಾಕ್ ಆಗಿದ್ದರು; 'ಗಂಡ-ಹೆಂಡತಿ' ಸಿನಿಮಾದ ದೃಶ್ಯಗಳು ಅಷ್ಟು ಅಸಹ್ಯವಾಗಿದ್ದವು. ಇದನ್ನೇ ನಮ್ಮ ಶೆಣೈ ಬರೆದಿದ್ದರು.


ಆದರೆ ಶ್ರೀವತ್ಸನಿಗೆ ಇದು ಸರಿ ಕಾಣಿಸಲಿಲ್ಲ, ತಾನು ಮಾಡಿದ್ದೇ ಕಲೆ, ತಾನು ಹೇಳಿದ್ದೇ ವೇದವಾಕ್ಯ ಎಂದು ನಂಬಿರುವ ಶ್ರೀವತ್ಸ ತನ್ನ ಈ ಕಲೆ-ವೇದಗಳಿಗೆ ತಕ್ಕಂತಹ ಪದಗಳಿಂದ ಶೆಣೈ ಮೇಲೆ ಹರಿಹಾಯ್ದಿದ್ದ. ಇಂಥವರನ್ನು ಹೀಗೇ ಬಿಟ್ಟರೆ ಇವತ್ತು ಪತ್ರಕರ್ತರನ್ನು ಬೆದರಿಸುತ್ತಾರೆ, ನಾಳೆ ವಿಮರ್ಶೆಗಳನ್ನೇ ಬ್ಯಾನ್ ಮಾಡಬೇಕೆನ್ನುತ್ತಾರೆ. ಆ ಕಾರಣದಿಂದಾಗಿಯೇ ಪೋಲೀಸ್ ಕಂಪ್ಲೇಂಟ್ ಕೊಡಿ ಎಂದು ಶೆಣೈಗೆ ಸೂಚಿಸಿದ್ದೆ.

ಶ್ರೀವತ್ಸನ ಈ ಧಿಮಾಕಿನ ಬಗ್ಗೆ ಇತರೆ ಪತ್ರಕರ್ತರಿಗೂ ಗೊತ್ತಾಗಿ ಅವರೆಲ್ಲ ಸೇರಿ ಫಿಲಂ ಚೇಂಬರಿಗೂ ದೂರು ನೀಡಿದರು. ರಾಕ್‌ಲೈನ್ ವೆಂಕಟೇಶ್, ಕೆ. ಮಂಜು ಥರದವರು, ಚಿತ್ರರಂಗದ ಹಿರಿಯರು ಶೆಣೈ ಪರವಾಗಿ ನಿಂತರು. ಇದನ್ನೆಲ್ಲ ನೋಡಿ ಶ್ರೀವತ್ಸನ ತಿಮಿರು ಇಳಿದಿರಬೇಕು. ಚೇಂಬರ್‌ಗೆ ಬಂದವನೇ ಶೆಣೈರವರ ಕ್ಷಮೆ ಯಾಚಿಸಿದನಲ್ಲದೆ, ಅವರ ಕಾಲಿಗೆ ಬೀಳುವುದೊಂದು ಬಾಕಿಯಿತ್ತು.

ತಾವು ಎಲ್ಲ ವಿಮರ್ಶೆ, ಟೀಕೆಗೆ ಮೀರಿರುವವರು ಎಂಬ ಭ್ರಮೆಯಲ್ಲಿರುವ ಕನ್ನಡ ಚಿತ್ರರಂಗದವರಿಗೆ ಈ ಶ್ರೀವತ್ಸನ ಪ್ರಕರಣ ಕಣ್ಣು ತೆರೆಸುವಂತಾಗಲಿ.

-ಜಿ.ಎಲ್.

ರಫೀಕ್ ಉಪ್ಪಿನಂಗಡಿಗೆ ಕಂಬನಿ




ಕಳೆದ ಸಂಚಿಕೆಯಲ್ಲಿ ರಫೀಕ್ ಉಪ್ಪಿನಂಗಡಿ
ಂಬ ಪ್ರತಿಭಾವಂತ ಯುವ ಬರಹಗಾರ
್ವಸಕೋಶಗಳ ಕ್ಯಾನ್ಸರ್ ವಿರುದ್ಧ
ೋರಾಡುತ್ತಿದ್ದಾರೆಂದು, ಅವರು ಬೇಗನೆ
ಣಮುಖರಾಗಲಿ ಎಂದೂ ಆಶಿಸಿ ಬರೆದಿದ್ದೆವು.
ದರೆ ನಮ್ಮ ಆಶಯಗಳು ಹಲವೊಮ್ಮೆ
ಜವಾಗುವುದಿಲ್ಲ, ಇದೇ ಮಂಗಳವಾರ, ಜೂನ್
ರಂದು ರಫೀಕ್ ತಮ್ಮ ಮಡದಿ ಗೀತಾ ಮತ್ತು
ಬ್ಬರು ಮಕ್ಕಳನ್ನು, ಅಪಾರ ಮಿತ್ರರನ್ನು ಅಗಲಿದರು.
ಸುದ್ದಿ ಗೊತ್ತಾಗುತ್ತಿದ್ದಂತೆ ಗೀತಾರವರಿಗೆ ಫೋನ್
ಾಡಿದೆವು. ಇಂತಹ ಸನ್ನಿವೇಶಗಳಲ್ಲಿ ಏನೇ
ೇಳಿದರೂ ಕ್ಲೀಷೆ ಆಗುತ್ತದೆ. ಯಾಕೆಂದರೆ ಯಾವ
ಾತು, ಯಾರ ಸಾಂತ್ವನ ಕೂಡ ಆ ಅಗಲಿಕೆಯ
ೋವನ್ನು ಕಿಂಚಿತ್ತೂ ಕಡಿಮೆ ಮಾಡಲಾಗುವುದಿಲ್ಲ,
ದರೂ ಗೀತಾ ಅವರು ಗಂಡನ ಅಗಲಿಕೆಯ
ೋವನ್ನು ಹಲ್ಲು ಕಚ್ಚಿ ಸಹಿಸಿಕೊಂಡು ತಮ್ಮ
ತ್ತು ಇಬ್ಬರು ಮಕ್ಕಳ ಜೀವನದ ಮುಂದಿರುವ
ಾಲುಗಳನ್ನು ಎದುರಿಸುವಂತಾಗಲಿ ಎಂದು
್ರಾರ್ಥಿಸುತ್ತೇವೆ. ಹಾಗೆಯೇ ರಫೀಕ್‌ರವರನ್ನು
್ನೇಹಿತರಾದ ಸರ್ಜಾಶಂಕರ್‌ರವರು ಬರೆದಿರುವ
ತ್ರವನ್ನು ಪ್ರಕಟಿಸಿ, ರಫೀಕ್ ಉಪ್ಪಿನಂಗಡಿಯವರಿಗೆ
ಂಕೇಶ್' ಬಳಗದಿಂದ ವಿಷಾದದ ವಿದಾಯವನ್ನು
ುತ್ತಿದ್ದೇವೆ.

ಆತ್ಮೀಯ ಗೌರಿಯವರಿಗೆ,

ನೀವು ಕಳೆದ ಸಂಚಿಕೆಯಲ್ಲಿ ರಫೀಕ್ ಬಗ್ಗೆ ಬರೆದಿದ್ದನ್ನು ಓದಿದಾಗ ರಫೀಕ್‌ರೊಂದಿಗಿನ ನನ್ನ ಒಡನಾಟ ಮತ್ತೊಮ್ಮೆ ಕಣ್ಣಮುಂದೆ ಬಂದಂತಾಯಿತು.

ರಫೀಕ್ ನನಗೆ ಪರಿಚಯವಿರಲಿಲ್ಲ. ನನ್ನ ಅಂಕಣ ಬರಹದ ಸಂಕಲನಕ್ಕೆ ರೇಖಾಚಿತ್ರಗಳನ್ನು ಬರೆಸಬೇಕು ಅಂದುಕೊಂಡಿದ್ದಾಗ ಶಿವು ರಫೀಕ್ ಬಗ್ಗೆ ತಿಳಿಸಿದ್ದ. ಆನಂತರ ಶಿವುನೇ ಹಸ್ತಪ್ರತಿ ಕೊಂಡುಹೋಗಿ ರೇಖಾಚಿತ್ರ ಬರೆಸಿಕೊಂಡು ಬಂದಿದ್ದ. ರಫೀಕ್ ರೇಖಾಚಿತ್ರಗಳಿಂದ 'ಚಿಟ್ಟೆ ಬೀಳಿಸಿದ ಬೆಂಗಳೂರು' ಸೊಗಸಾಗಿ ಮೂಡಿಬಂತು. ಅಂಕಣಗಳ ಶೀರ್ಷಿಕೆಗಳನ್ನು ನೋಡಿ ಖುಷಿಗೊಂಡ ರಫೀಕ್ ಶೀರ್ಷಿಕೆಯ ಒಂದಕ್ಷರವನ್ನೂ ಬದಲಾಯಿಸದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರು.

ಮೈಸೂರಿಗೆ ಹೋದಾಗ ರಫೀಕರನ್ನು ಭೇಟಿಯಾಗಿದ್ದೆ. ನಾನು ಶಿವಮೊಗ್ಗದಲ್ಲಿ ಆರಂಭಿಸುತ್ತಿದ್ದ ದೇಸಿ ಅಂಗಡಿಗೆ ಪೂರಕವಾದ ಕರಕುಶಲ ವಸ್ತುಗಳ ತಯಾರಕರನ್ನು ರಫೀಕ್ ಭೇಟಿ ಮಾಡಿಸಿದ್ದರು.



ರಫೀಕ್ ತೆಗೆದ ಚಿತ್ರ

ಮೊದಲ ದರ್ಶನದಲ್ಲಿಯೇ ಹತ್ತಿರದವರಾಗಿಬಿಡುವ ಸ್ನೇಹಶೀಲ ವ್ಯಕ್ತಿತ್ವ ರಫೀಕ್‌ರವರದ್ದು, ಅವರಿಗೆ ಕ್ಯಾನ್ಸರ್ ಇದೆ ಎಂದು ತಿಳಿದಾಗ ಶಾಕ್ ಆಗಿತ್ತು, ಇತ್ತೀಚೆಗೆ ಚೇತರಿಸಿಕೊಳ್ಳುತ್ತಿದ್ದಾರೆ ಎಂಬ ಸುದ್ದಿಯಿಂದ ನೆಮ್ಮದಿಯೂ ಆಗಿತ್ತು. ನನ್ನ ಮುಂದಿನ ಪುಸ್ತಕಕ್ಕೆ ಅವರಿಂದಲೇ ರೇಖಾಚಿತ್ರ ಬರೆಸುವ ಹಂಬಲ ನನ್ನದಾಗಿತ್ತು. ಈ ಮೂಲಕವಾದರೂ ಕೊಂಚ ನೆರವಾಗಬಹುದು ಎಂದೂ ಯೋಚಿಸಿದ್ದೆ. ಮೊನ್ನೆ ಶಿವಮೊಗ್ಗಕ್ಕೆ ಬಂದಿದ್ದ ಕಾಳೇಗೌಡ ನಾಗರವಾರರಲ್ಲಿ ರಫೀಕ್ ಬಗ್ಗೆ ಮಾತನಾಡಿದ್ದೆ. 'ನಾನೂ ಭೇಟಿ ಮಾಡದೆ ತುಂಬಾ ಸಮಯವಾಯಿತು. ಬನ್ನಿ ಭೇಟಿಯಾಗೋಣ' ಎಂದಿದ್ದರು. ಕಾಳೇಗೌಡರಿಗೂ ರಫೀಕ್ ಬಗ್ಗೆ ತುಂಬ ಅಭಿಮಾನ. 'ರಫೀಕ್ ದಲಿತ ಯುವತಿಯನ್ನು ಸರಳವಾಗಿ ಮದುವೆಯಾಗಿದ್ದಾರೆ, ಆ ಮದುವೆಗೆ ನಾನೂ ಹೋಗಿದ್ದೆ' ಎಂದು ಕಾಳೇಗೌಡರು ಹೆಮ್ಮೆಯಿಂದ ನೆನಪಿಸಿಕೊಂಡಿದ್ದರು.

ರಫೀಕ್ ಇನ್ನಿಲ್ಲವಾದ ಸುದ್ದಿ ಈಗ ಬಂದಿದೆ. ರಫೀಕರನ್ನು ಪರಿಚಯಿಸಿದ್ದ ಶಿವುನೇ ಫೋನ್ ಮಾಡಿದ.

ರಫೀಕ್ ತಮ್ಮನ್ನು ಕಾಡುತ್ತಿದ್ದ ರೋಗದಿಂದ ಮುಕ್ತವಾಗಿ ನಮ್ಮೊಂದಿಗೆ ಇರಬೇಕಿತ್ತು.

ರಫೀಕ್‌ಗೆ ನನ್ನ ಕಂಬನಿ.

-ಸರ್ಜಾಶಂಕರ್ ಹರಳಿಮಠ

ಬೆಂಗಳೂರು ವಿ.ವಿ: ಯಡ್ಡಿಗೆ ಹಾರ ಹಾಕಿದ ಪ್ರಜ್ಞಾಹೀನ ದಲಿತ ಪುಂಡರು




ಅದೊಂದು ಕಾಲವಿತ್ತು. ದಲಿತ ವಿದ್ಯಾರ್ಥಿಗಳ ಹಾಸ್ಟೆಲ್‌ಗಳೆಂದರೆ ಸಾಮಾಜಿಕ ಚಳವಳಿಗಳು ರೂಪು ತಳೆಯುವ ಜಾಗಗಳಾಗಿದ್ದವು. ತಮ್ಮ ಬಡಜೋಪಡಿಗಳ ಸಂದುಗಳಲ್ಲಿ ಸೋರಿ ಹೋಗುತ್ತಿದ್ದ ತಮ್ಮ ಕನಸುಗಳನ್ನು ಹಾಸ್ಟೆಲ್ ಸಿಕ್ಕೊಡನೆ ಚಿಗುರಿಸಿಕೊಳ್ಳುತ್ತಿದ್ದ ದಲಿತ ಯುವಜನರು ತಮ್ಮ ಸಾಮುದಾಯಿಕ ಜವಾಬ್ದಾರಿಯನ್ನು ಅರಿತು ಹೋರಾಟದ ಮನೋಭಾವವನ್ನು ಹಿಗ್ಗಿಸಿಕೊಳ್ಳುತ್ತಿದ್ದರು. ಬಾಬಾ ಸಾಹೇಬರ ಸಂವಿಧಾನದ ಬೆಳಕಿನಲ್ಲಿ ಸಮಾಜದ ಅನಿಷ್ಟಗಳನ್ನು ಇಲ್ಲವಾಗಿಸುವ ಹೋರಾಟದ ಮುನ್ನುಡಿಗಳನ್ನು ಬರೆಯುತ್ತಿದ್ದರು. ಇದರಿಂದಲೇ ದಲಿತ ಸಂಘರ್ಷ ಸಮಿತಿಗೆ ಒಂದು ಯುವ ಉತ್ಸಾಹ ಸಿಕ್ಕಿ ಜೋಪಡಿಗಳಲ್ಲಿ ದೀಪ ಹಚ್ಚುವ ಕಾರ್ಯಕ್ಕೆ ಸಾವಿರಾರು ಕೈಗಳನ್ನು ಅಣಿಗೊಳಿಸಲು ಸಾಧ್ಯವಾಯಿತು.

ಹಾಗೆ ಹಚ್ಚಿದ ದೀಪಗಳಲ್ಲಿ ಎಣ್ಣೆ ಮುಗಿದು ಮತ್ತೆ ಕತ್ತಲಾವರಿಸುವ ಹೊತ್ತಿಗೆ ಅವುಗಳಿಗೆ ಎಣ್ಣೆ ಹೊಂಚಬೇಕಾದ ಮನಸ್ಸುಗಳಿಗೇ ಕತ್ತಲಾವರಿಸಿಕೊಂಡು ಬಿಟ್ಟಿತು. ಶೋಷಕರು ತಮ್ಮ ಸ್ವರೂಪಗಳನ್ನು ಬದಲಿಸಿಕೊಳ್ಳತೊಡಗಿದರು. ಪ್ರಭುತ್ವ ತನ್ನ ನಾಜೂಕುತನದಿಂದ ಮಾಯಾಕುರ್ಚಿಗಳನ್ನು ಸೃಷ್ಟಿಸಿ ಅವುಗಳ ಮೆತ್ತೆಯ ಮೇಲೆ ಹೋರಾಟಗಾರರನ್ನು ಕುಳ್ಳರಿಸಿ 'ಹೋರಾಟವೆಂದರೆ ಇದು' ಎಂದು ಗಹಗಹಿಸತೊಡಗಿತು. ಇದರೊಟ್ಟಿಗೆ ಎದುರಾದ ದೊಡ್ಡ ದುರಂತವೆಂದರೆ ದಲಿತ ವಿದ್ಯಾರ್ಥಿ ನಿಲಯಗಳು ಪ್ರಜ್ಞಾಹೀನ ಸ್ಥಿತಿಗೆ ದೂರಲ್ಪಟ್ಟಿದ್ದು.

ಇದನ್ನೆಲ್ಲಾ ಯಾಕೆ ಹೇಳಬೇಕಾಯಿತೆಂದರೆ ಮೊನ್ನೆ ಬೆಂಗಳೂರು ವಿ.ವಿ.ಯ ದಲಿತ ವಿದ್ಯಾರ್ಥಿನಿಲಯಕ್ಕೆ ಚೆಡ್ಡಿ ಯಡ್ಡಿ ಬಂದು ಹೋದ ಕಾರಣಕ್ಕೆ. ರಾಜ್ಯದ ಉಪಮುಖ್ಯಮಂತ್ರಿಯೊಬ್ಬ ವಿ.ವಿ.ಯ ಹಾಸ್ಟೆಲ್ ಒಂದಕ್ಕೆ ಭೇಟಿ ನೀಡಬಾರದೆಂದೇನಿಲ್ಲ. ಆದರೆ ಜಾತಿಯನ್ನೇ ತಲೆಯ ತುಂಬಾ ತುಂಬಿಕೊಂಡು, ದಲಿತರು ಅಸ್ಪೃಶ್ಯರು, ಅವರ ಆ ಸ್ಥಿತಿ ಪೂರ್ವಜನ್ಮದ ಕರ್ಮ, ಅವರು ದುರಾಚಾರಿಗಳು, ಸನ್ನಡತೆಯಿಲ್ಲದವರು ಎಂಬ ವೈದಿಕ ತತ್ವ ಹೊಂದಿರುವ ಬಜೆಪಿಯ ನಾಯಕನೊಬ್ಬ ಅಂಬೇಡ್ಕರ್‌ರಂತಹ ಮಾನವತಾವಾದಿಯ ಭಾವಚಿತ್ರವನ್ನೇ ತನ್ನ ಕಚೇರಿಯಿಂದ ತೆಗೆಸಿ ಹಾಕಿದ ವಿಕೃತ ಹಿಂದೂತ್ವವಾದಿ ಹುಳುವೊಬ್ಬ ದಲಿತ ಸಮುದಾಯದ ಪ್ರಜ್ಞೆ ರೂಪುಗೊಳ್ಳುವ ಜಾಗವೊಂದಕ್ಕೆ ಹೋಗಿ ತಮ್ಮವರನ್ನು ಗೆಲ್ಲಿಸುವಂತೆ ಪ್ರಚಾರ ಮಾಡುವುದಿದೆಯಲ್ಲಾ... ಅದು ಏನನ್ನು ಸೂಚಿಸುತ್ತದೆ, ಅದು ಯಾರಿಗೆ ಮಾಡಿದ ಅವಮಾನ? ಅದು ಯಾರಿಗೆ ಸಂದ ಲಾಭ....?

ಇವೆಲ್ಲಾ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾದದ್ದು ಸಾಮುದಾಯಿಕ ಪ್ರಜ್ಞೆಯೇ ಮರೆತು ಹೋದ, ಹೆಂಡ ಕುಡಿದು ಎಗರಾಡುವುದೇ ತಮ್ಮ ಹಕ್ಕು ಎಂದು ಕೊಂಡಿರುವ ಯಾರು ಎಷ್ಟು ಕೊಟ್ಟರೂ ತಮ್ಮ ಸಾಮುದಾಯಿಕ ತಾಖತ್ತನ್ನು ಒತ್ತೆ ಇಡುವ, ರೌಡಿಗಳಂತೆ ವರ್ತಿಸುವ, ವಿದ್ಯಾರ್ಥಿಗಳ ಹೆಸರಲ್ಲಿ ತಮ್ಮ ಸಮುದಾಯಕ್ಕೆ ದ್ರೋಹ ಬಗೆಯುತ್ತಿರುವ ಮಹಾನುಭಾವರು.



ಕುಳ್ಳ ರಾಜಪ್ಪ

ಮೊನ್ನೆ ಯಡಿಯೂರಪ್ಪನನ್ನು ಹಾಸ್ಟೆಲಿಗೆ ಬರಮಾಡಿಕೊಂಡು ಹಾರ ಹಾಕಿ ಜೈಕಾರ ಹಾಕಿರುವ ಕೋಲಾರ ರವಿ ಮತ್ತು ಕುಳ್ಳಾ ರಾಜಪ್ಪ ಎಂಬ ದಡ್ಡ ಶಿಖಾಮಣಿಗಳ ಗುಂಪು ಇದೇ ಯಡಿಯೂರಪ್ಪ ತನ್ನ ಕಚೇರಿಯಿಂದ ಅಂಬೇಡ್ಕರ್ ಫೋಟೋ ತೆಗೆಸಿ ಹಾಕಿದನೆಂದು ಅವನಿಗೆ ಚಪ್ಪಲಿ ಹಾರ ಹಾಕಲು ಮುಂದಾಗಿದ್ದರು. ಇಷ್ಟಕ್ಕೂ ಇವರಿಗೆ ದುಡ್ಡು ಕೊಡಿಸಿ, ರಾಮಚಂದ್ರೇಗೌಡರ ಪರ ಪ್ರಚಾರ ನಡೆಸಲು ಒಪ್ಪಿಸಿ, ಯಡಿಯೂರಪ್ಪನನ್ನು ಕರೆತಂದಿದ್ದು ಡಿ.ಎಸ್. ವೀರಯ್ಯ ಎಂಬ ಅವಕಾಶವಾದಿ ಎಂಎಲ್‌ಸಿ. "ಡಿಸಿಎಂ ಸಾಹೇಬರು ಹಾಸ್ಟೆಲಿಗೆ ಬರುತ್ತಿರುವುದು ನಮ್ಮ ಪುಣ್ಯ, ಅವರನ್ನು ಯಾವುದೇ ತೊಂದರೆಗಳಾಗದಂತೆ ಬರಮಾಡಿಕೊಳ್ಳಿ. ಅವರಿಗೆ ಜಿಂದಾಬಾಂದ್ ಹೇಳುವಾಗ ಅವರ ಹೆಸರಿನ ಜೊತೆಯಲ್ಲಿ ನನ್ನ ಹೆಸರನ್ನೂ ಸೇರಿಸಿ ಜಿಂದಾಬಾದ್ ಕೂಗಿ. ನಿಮ್ಮ ಹಾಸ್ಟೆಲ್ಲಿಗೆ ಒಳ್ಳೆ ಸೌಲಭ್ಯ ಕೊಡಿಸ್ತೀನಿ" ಅಂತ ಯಾವುದೇ ಮುಜುಗರವಿಲ್ಲದೆ, ತಾನು ಮಾತನಾಡುತ್ತಿರುವುದು ಪಿಎಚ್‌ಡಿ ವಿದ್ಯಾರ್ಥಿಗಳ ಮುಂದೆ ಎಂಬುದನ್ನೂ ಮರೆತು ಮಾತಾಡಿದ್ದ. ಇವನ ಜೊತೆ ವಿ.ವಿ.ಯ ದಲಿತ ಹುಡುಗರ ತಲೆಯನ್ನು ಎಕ್ಕುಟ್ಟಿಸಿರುವ, ಮೊನ್ನೆ ಆರೆಸ್ಸೆಸ್ ಸಮಾರಂಭವೊಂದಕ್ಕೆ ಮುಖ್ಯ ಅತಿಥಿಯಾಗಿ ಹೋಗಿ ತಲೆಗೆ ಚೆಡ್ಡಿ ಏರಿಸಿಕೊಂಡು ಬಂದ ನಾಚಿಕೆಗೇಡಿ ಮೈಲಾರಿ ಸಹ ಇದ್ದ. ಅಷ್ಟಕ್ಕೇ ಮರಣಾನಂದಗೊಂಡು ಕಾಲು ನೆಕ್ಕಲು ಮುಂದಾದ ರವಿ ಮತ್ತು ರಾಜಪ್ಪ ಎಂಬ ಪುಂಡರಿಗೆ ಕೆಲ ಪ್ರಜ್ಞಾವಂತ ಯುವಕರು ಪ್ರಶ್ನಿಸಿದರೆ "ಅವರು ಏನಾದರೂ ಆಗಲಿ, ನಮ್ಮ ಹಾಸ್ಟೆಲಿಗೆ ಬಂದರೆ ನಮ್ಮ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳಬಹುದು" ಎಂದು ವದರುತ್ತಾರೆ. ಇಷ್ಟಕ್ಕೂ ಇವರು ಕೇಳುವ 'ಸೌಲಭ್ಯ'ಗಳು ಯಾವುವು ಎಂಬುದು ಅಲ್ಲಿನ ವಿದ್ಯಾರ್ಥಿಗಳ ಗೊಂದಲವಾಗಿದೆ.



ಸೂಟ್ ಮೈಲಾರಿ


ಇದೆಲ್ಲದರ ನಡುವೆಯೂ ಚುನಾವಣಾ ಪ್ರಚಾರಕ್ಕೆ ಬಂದ ಯಡ್ಡಿ ಪಡೆಯ ದಲಿತ ಉದ್ಧಾರದ ಮಾತುಗಳನ್ನು ಕೇಳಲು ಅಲ್ಲಿ ವಿದ್ಯಾರ್ಥಿಗಳೇ ಇಲ್ಲದಿದ್ದದ್ದು ಯಡ್ಡಿಗೆ ಅವಮಾನವಾಗಿದೆ.

'ಎಲ್ಲಾದರೂ ಇರಲಿ, ನಮ್ಮವರು ಬೆಳೀ ಬೇಕಷ್ಟೇ' ಅಂತ ಬಜೆಪಿಯ ದಲಿತರನ್ನು ಸಮರ್ಥಿಸಿ ಕೊಳ್ಳುವ ಈ ದಲಿತ ವಿದ್ಯಾರ್ಥಿ ಪುಂಡರು ದಲಿತ ಸಮುದಾಯದ ದುರಂತ ಪ್ರತಿಮೆಗಳಾಗುತ್ತಿರುವುದು ಕೆಲ ಪ್ರಜ್ಞಾವಂತ ಯುವ ಜನರಿಗೆ ಆತಂಕ ಮೂಡಿಸಿದೆ. ಸಾಮಾಜಿಕ ಕಾರ್ಯಕರ್ತರು, ಚಳವಳಿಗಾರರು ಬಂದು ಹೋಗಬೇಕಾದ ಹಾಸ್ಟೆಲ್‌ಗಳು ರಾಜಕಾರಣಿಗಳು, ರೌಡಿಗಳು ಬಂದುಹೋಗುವ ಜಾಗಗಳಾಗು ತ್ತಿವೆಯೆಂದರೆ ಏನರ್ಥ?


ಈ ಆತ್ಮಾಹತ್ಯಾಕಾರಿ ಬದಲಾವಣೆಯನ್ನು ಸುಮ್ಮನೆ ಕೂತು ನೋಡುತ್ತಿರುವ ವಿವಿಯ ಬೋಧಕರಾಗಲಿ, ಚಳವಳಿ ಬಿಟ್ಟು ಲ್ಯಾಂಡ್ ಡೀಲಿಂಗ್‌ಗಳಿಗೆ ಇಳಿದಿರುವ ದಲಿತ ಚಳವಳಿಗಾರರಾಗಲಿ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಇವೆಲ್ಲಾ ಕಾರಣಗಳಿಂದ ಕರ್ನಾಟಕಕ್ಕೆ ಒಂದು ಪ್ರಜ್ಞಾವಂತ, ಶಕ್ತಿಯುತ, ಪ್ರಭಾವೀ ವಿದ್ಯಾರ್ಥಿ ಚಳವಳಿ ಸದ್ಯದ ತುರ್ತಾಗಿದೆ. ದಲಿತ-ಹಿಂದುಳಿದ ಯುವ ಜನತೆ ತಮ್ಮ ವಿಸ್ಮೃತಿಗಳಿಂದ ಎಚ್ಚೆತ್ತು ಈ ಬಗ್ಗೆ ಯೋಚಿಸಿ ಪ್ರಜ್ಞಾಹೀನರಿಗೆ ಬುದ್ಧಿ ಕಲಿಸಬೇಕಾಗಿದೆ.

-ಹುಲಿಕುಂಟೆ ಮೂರ್ತಿ


ಟ್ರಾನ್ಸ್‌ಫರ್ ಗಲೀಜು ಪೊಲೀಸ್ ಠಾಣೆಗಳ ಹರಾಜು



ವಿಜಯಕುಮಾರ್



ಸಿದ್ದಪ್ಪ



ಚಲಪತಿ

ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಇಪ್ಪತ್ತೈದು ಲಕ್ಷ!

ಕಾಮಾಕ್ಷಿಪಾಳ್ಯಕ್ಕೆ ಐದು ಲಕ್ಷ. ಅಶೋಕ್‌ನಗರಕ್ಕೆ ಹತ್ತು ಲಕ್ಷ. ಕಾಟನ್ ಪೇಟೆಗೆ ಎಂಟು ಲಕ್ಷ!

ಇದು ಲೇಟೆಸ್ಟ್ ಪೊಲೀಸ್ ಟ್ರಾನ್ಸ್‌ಫರ್ ಅರ್ಥಾತ್ ಪೊಲೀಸ್ ಠಾಣೆಗಳ ನಿರ್ಲಜ್ಜ ಹರಾಜಿನ ಹೊಸ ರೇಟ್ ಲಿಸ್ಟ್. ಮಾನಗೆಟ್ಟ ಸರ್ಕಾರವೊಂದು ಹಗಲು ದರೋಡೆಗೆ ನಿಂತರೆ ಇಂತಿಷ್ಟು ರೇಟಿಗೆಂದು ಪೊಲೀಸ್ ಠಾಣೆಗಳನ್ನೇ ಮಾರಿಕೊಳ್ಳುತ್ತದೆ. ಕೋ-ಜಾ ಸರ್ಕಾರದ ಪಾಪಕ್ಕೆ ಈಗ ಪೊಲೀಸ್ ಠಾಣೆಗಳ ಹರಾಜೂ ಸೇರ್ಪಡೆಯಾಗಿದೆ.

ಉಪ್ಪಾರಪೇಟೆ ಪೊಲೀಸ್ ಠಾಣೆಯನ್ನು ಕಳೆದ ಐದು ವರ್ಷದಿಂದ ಖರೀದಿಸಿಕೊಂಡೇ ಬಂದವನು ಖಾಕಿ ಡಕಾಯಿತ ವಿಜಯ್‌ಕುಮಾರ್. ಮಾರ್ವಾಡಿಯೊಬ್ಬನ ಮೊಬೈಲ್ ಮಳಿಗೆಗೆ ಕಳ್ಳರು ಕನ್ನ ಹಾಕಿ ಇಡೀ ಅಂಗಡಿಯನ್ನು ದೋಚಿದ್ದರು. ಕಳ್ಳರೂ ಸಿಕ್ಕಿಬಿದ್ದರು. ಆದರೆ ದೋಚಲ್ಪಟ್ಟ ಯಾವೊಂದು ಮೊಬೈಲೂ ಮಾರ್ವಾಡಿಗೆ ದಕ್ಕಲಿಲ್ಲ. ಹಿಡಿದ ಕಳ್ಳರ ಜೊತೆ ಇನ್ಸ್‌ಪೆಕ್ಟರ್ ವಿಜಯ್‌ಕುಮಾರ್ ಕೈಜೋಡಿಸಿ ದೂರು ಕೊಟ್ಟ ಮಾರ್ವಾಡಿಯನ್ನೇ ಮೂರ್ಖನನ್ನಾಗಿಸಿದ್ದ. ಅಂಥವನಿಂದ ಇಪ್ಪತ್ತು ಲಕ್ಷ ಕಿತ್ತ ದಿನೇಶ್ ಗುಂಡೂರಾವ್ ಖರ್ಗೆಗೂ ತಿನ್ನಿಸಿ ಉಪ್ಪಾರಪೇಟೆಯನ್ನು ಮಾರಿಕೊಂಡಿದ್ದ. ಆನಂತರ ಮುಖ್ಯಮಂತ್ರಿಯಾದ ಧರ್ಮಸಿಂಗ್ ಅಲ್ಲಿಗೆ ಮುರವಿ ಮಲ್ಲಪ್ಪನನ್ನು ತಂದರು. ಇಪ್ಪತ್ತು ಲಕ್ಷ ಕೊಟ್ಟೇ ಬಂದಿದ್ದ ಮುರವಿ ಮಲ್ಲಪ್ಪನನ್ನು ಆನಂತರ ಅಶೋಕ್‌ನಗರಕ್ಕೆ ಎತ್ತಂಗಡಿ ಮಾಡಿ ಅಲ್ಲಿಗೆ ವಿಜಯ್‌ಕುಮಾರ್ ಎರಡನೇ ಬಾರಿಗೆ ಬಂದ. ಈಗಲಾದರೂ ಆತನ ಎತ್ತಂಗಡಿಯಾದೀತೆಂದು ಎಲ್ಲರೂ ಲೆಕ್ಕ ಹಾಕಿದರೆ ಖದೀಮ ವಿಜಯ್‌ಕುಮಾರ್ ಮೂರನೇ ಬಾರಿಗೂ ಉಪ್ಪಾರಪೇಟೆಗೆ ವಕ್ಕರಿಸಿದ್ದಾನೆ!

ಈ ಬಾರಿ ಇಪ್ಪತ್ತೈದು ಲಕ್ಷಕ್ಕೆ!

ಯಡ್ಡೀ-ಕುಮಾರ್ ಜಂಟಿ ಟ್ರಾನ್ಸ್‌ಫರ್ ಕಾರ್ಯಾಚರಣೆಗೆ ಇದು ಸ್ಯಾಂಪಲ್ ಅಷ್ಟೇ. ಕಾಮಾಕ್ಷಿಪಾಳ್ಯಕ್ಕೆ ಇನ್ಸ್‌ಪೆಕ್ಟರ್ ರವಿಪ್ರಕಾಶ್ ಬಂದು ಬರೇ ಮೂರು ತಿಂಗಳಾಗಿತ್ತು. ಈಗ ಆ ಜಾಗಕ್ಕೆ ಮಂಜುನಾಥ್ ಎಂಬ ಅನಾಮಧೇಯನನ್ನು ಆರೋಗ್ಯ ಮಂತ್ರಿ ಅಶೋಕ್ ತಂದಿದ್ದಾರೆ. ಇನ್ನು ರಾಜಗೋಪಾಲನಗರ ಪೊಲೀಸ್ ಠಾಣೆ ವ್ಯಾಪ್ತಿಯ ಲಗ್ಗೆರೆಯಲ್ಲಿ ಅಶೋಕ್ ಬಂಟರೇ ಭೂಕಂಟಕರಾದ್ದರಿಂದ ಅವರೆಲ್ಲರಿಗೂ ಬೇಕಾದ ಭೋಪಯ್ಯನನ್ನು ಅಲ್ಲೇ ಇರಿಸಲಾಗಿದೆ. ಚಾಮರಾಜಪೇಟೆ ಪೊಲೀಸ್ ಠಾಣೆಯಲ್ಲಿದ್ದ ವಿದ್ಯಾನಂದ ತೇಜಸ್ವಿಯಂಥ ಸಜ್ಜನನನ್ನು ಐಟಿಐಗೆ ರವಾನಿಸಿದ್ದು ಅಶೋಕ್ ನಗರಕ್ಕೆ ಕಾಶಿ, ಚಿಕ್ಕಪೇಟೆ ಟ್ರಾಫಿಕ್ಕಿಗೆ ಸಾವರ್ಕರ್, ತ್ಯಾಗರಾಜನಗರಕ್ಕೆ ಲಕ್ಷ್ಮೀಪತಿಗೌಡ, ವಿಲ್ಸನ್ ಗಾರ್ಡನ್ನಿಗೆ ಇಸ್ಮಾಯಿಲ್ ಷರೀಫ್ ಇತ್ಯಾದಿಗಳೆಲ್ಲ ಪೇಮೆಂಟ್ ಸೀಟುಗಳೆ.

ಬೆಂಗಳೂರಿನ ಅಷ್ಟೂ ಎಮ್ಮೆಲ್ಲೆಗಳ ಪೈಕಿ ದುಡ್ಡಿಗೆ ಕೈಚಾಚದೇ ದಕ್ಷ ಇನ್ಸ್‌ಪೆಕ್ಟರ್‌ಗಳನ್ನು ತಂದದ್ದು ಚಾಮರಾಜಪೇಟೆ ಶಾಸಕ ಜಮೀರ್ ಮಾತ್ರ. ಕಲಾಸಿಪಾಳ್ಯಕ್ಕೆ ಎಸ್.ಕೆ. ಉಮೇಶ್, ಸಿಟಿ ಮಾರುಕಟ್ಟೆಗೆ ಬಾಬು ನರೋನ್ಹಾ, ಎಸ್.ಜೆ. ಪಾರ್ಕ್‌ಗೆ ಡೇವಿಡ್ ಮೇಷಾಕ್, ಹೈಗ್ರೌಂಡ್ಸ್‌ಗೆ ಲೋಕೇಶ್ವರ್‌ರಂಥ ಖಾಕಿ ನಿಷ್ಠರನ್ನು ತಂದದ್ದೊಂದೇ ಸಮಾಧಾನದ ಸಂಗತಿ. ಮಿಕ್ಕಂತೆ ಬಹುಪಾಲು ಒಕ್ಕಲಿಗ ಇನ್ಸ್‌ಪೆಕ್ಟರ್‌ಗಳು. ಯಡ್ಡಿ ಮೂಲಕ ಬಂದವರೆಲ್ಲರೂ ಲಿಂಗವಂತರೆ. ದಂಡುಪಾಳ್ಯದ ಹಂತಕರನ್ನು ಹಿಡಿದ ಚಲಪತಿ, ಸಿಸಿಬಿಯ ರೇವಣ್ಣ ನಂಜುಂಡೇಗೌಡರಂಥ ನಿಷ್ಠುರಿ ಇನ್ಸ್‌ಪೆಕ್ಟರ್‌ಗಳಿಗೆ ಕೊನೆಗೂ ಅಜ್ಞಾತವಾಸ ತಪ್ಪಲಿಲ್ಲ. ನಿಷ್ಠುರಿ ಇನ್ಸ್‌ಪೆಕ್ಟರ್ ಪಾಲಿಗಿನ್ನು ಪೊಲೀಸ್ ಠಾಣೆಗಳು ಮರೀಚಿಕೆಯಾದಂತೆಯೇ!


'ಎಲ್ಲಿಂದ ತರೋಣ ಐದು ಲಕ್ಷಾನ. ಇವರಿಗೆ ಐದು ಲಕ್ಷ ಕೊಟ್ಟು ಬಂದು ರೌಡಿಗಳು ಕಳ್ಳರ ಬಳಿ ಕೈಚಾಚಬೇಕಾ?' ಹಾಗಂಥ ನಿಷ್ಠಾವಂತ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರು ಪ್ರಶ್ನೆ ಹಾಕುತ್ತಾರೆಂದರೆ ಇನ್ಯಾವ ಮಟ್ಟಕ್ಕೆ ಪೊಲೀಸ್ ಇಲಾಖೆ demoralise ಆಗಿರಬೇಡ. ವಿಜಯನಗರದ ಎಸಿಪಿ ಭಂಡಾರಿಗೆ ಇನ್ನೆರಡು ತಿಂಗಳಲ್ಲಿ ಬಡ್ತಿಯಿತ್ತು. ಆಲಸೂರು ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ ನಿವೃತ್ತಿಯಾಗುವುದಕ್ಕೆ ಇನ್ನೆರಡು ವಾರವಷ್ಟೇ ಬಾಕಿಯಿತ್ತು. ಧರ್ಮಸಿಂಗ್ ಕಾಲಕ್ಕೆ ಐದೋ ಹತ್ತೋ ಲಕ್ಷ ತೆತ್ತು ಬಂದವರು, ಮಕ್ಕಳನ್ನು ಶಾಲೆಗೆ ಸೇರಿಸಿದವರು; ಯಾರನ್ನೂ ಬಿಡದೇ ಕೋ-ಜಾ ಸರ್ಕಾರ ಎತ್ತೊಗೆದಿದೆ. ಹೋಗಲಿ; ಈಗ ಐದೋ ಹತ್ತೋ ಕೊಟ್ಟು ಬಂದವರಿಗಾದರೂ ಗ್ಯಾರಂಟಿ ಇದೆಯೇ? ಯಾವ ಗಳಿಗೆಯಲ್ಲಿ ಕುಮಾರ್ ಸರ್ಕಾರ ಬೀಳುತ್ತೋ? ಕೊಟ್ಟ ಕಾಸಿಗೆ ಕಳ್ಳರೆದುರು ಕೈಚಾಚಲೇ ಬೇಕು. ಕೊಲೆ-ರೇಪು ನಡೆದಷ್ಟೂ ಲಾಭ. ಲ್ಯಾಂಡ್ ಲಫಡಾಗಳಿಂದಲೇ ಪೊಲೀಸರಿಗೇ ದುಡ್ಡು ಹುಟ್ಟಬೇಕು.

ಅಂದಹಾಗೆ ಈ ಒಂದೇ ಪೊಲೀಸ್ ವರ್ಗಾವರ್ಗಿಯಿಂದ ಎತ್ತುವಳಿಯಾದ ಒಟ್ಟೂ ಮೊತ್ತವೆಷ್ಟು ಇರಬಹುದು?


ಇನ್ಸ್‌ಪೆಕ್ಟರ್ ಒಬ್ಬ ತಲಾ 2 ಲಕ್ಷದಂತೆ ಕೊಟ್ಟರೆ 300 ಮಂದಿಗೆ ಎಷ್ಟಾಯ್ತು?

ಇನ್ನು ಡಿವೈಎಸ್‌ಪಿಗಳ ಬಾಬತ್ತು, ಆಯಕಟ್ಟಿನ ಠಾಣೆಗಳ ಹೆಚ್ಚುವರಿ ಬಾಬತ್ತುಗಳನ್ನೆಲ್ಲಾ ಸೇರಿಸಿದರೆ ಎಷ್ಟೆಂದು ನೀವೇ ಲೆಕ್ಕ ಹಾಕಿ.


-ವರದಿಗಾರ



ರವಿಪ್ರಕಾಶ್





ರೇವಣ್ಣ



ಉಮೇಶ್

ತಂದೆ ಮಗನ ರಣತಾಂಡವ!





ಸುಮಾರು 20 ವರ್ಷ ವಿರೋಧ ಪಕ್ಷದ ನಾಯಕನಾಗಿ ಹಲವಾರು ಸಾರ್ವಜನಿಕ ಹಿತಾಸಕ್ತಿಯ ವಿವಾದಗಳನ್ನೆತ್ತಿಕೊಂಡು ರಾಜಕೀಯ ಕಾಳಗಗಳನ್ನು ನಿರ್ವಹಿಸಿದ್ದ ದೇವೇಗೌಡರು, ಕಳೆದ 25 ವರ್ಷಗಳಲ್ಲಿ ಆಗಾಗ್ಗೆ ಅಧಿಕಾರರೂಢರಾಗಿ ಬಳಸಿದ ತಂತ್ರಗಳೆಲ್ಲವೂ ಇಂತಹ ನಿರರ್ಥಕ ಹೋರಾಟಗಳಿಗೇ ಸೀಮಿತವಾಗಿ, ಇತ್ತ ಅಭಿವೃದ್ಧಿ ಕೇಂದ್ರಿತವೂ ಅಲ್ಲದ, ಅತ್ತ ಪ್ರಗತಿಪರವೂ ಅಲ್ಲದ ದೇವೇಗೌಡರ ಕೌಟುಂಬಿಕ ಪಾಳೆಗಾರಿಕೆ ರಾಜಕಾರಣ ತನ್ನ ಇತ್ತೀಚಿನ ಅತಿರೇಕಗಳಿಂದಾಗಿ ಕರ್ನಾಟಕ ಸಾರ್ವಜನಿಕ ಜೀವನಕ್ಕೆ ಒಂದು ಕೆಟ್ಟ ಶಾಪವಾಗಿ ಪರಿಣಮಿಸಿರುವುದು ಗೌಡರ ವರ್ಣರಂಜಿತ ವ್ಯಕ್ತಿತ್ವದ ದುರದೃಷ್ಟಕರ ಅಧ್ಯಾಯವೇ ಸರಿ.

ರವೀಂದ್ರ ರೇಶ್ಮೆ

ಕಳೆದ ಜನವರಿ 19 ಕುಮಾರಸ್ವಾಮಿಯ ಬಂಡಾಯದೊಂದಿಗೆ ಶುರುವಾದ ದೇವೇಗೌಡರ ರಾಜಕೀಯ ಬಯಲಾಟಕ್ಕೆ ಅಂತಿಮ ತೆರೆಬೀಳುವ ಸನ್ನಿವೇಶ ಅನಾಯಾಸವಾಗಿ ಒದಗಿ ಬಂದಿದೆ. ಇದುವರೆಗೂ ತಮ್ಮ 40 ವರ್ಷಗಳ ರಾಜಕೀಯ ಬದುಕಿನಲ್ಲಿ ತಮ್ಮ ಕುಟುಂಬ, ಅಳಿಯಂದಿರು, ಅನುಯಾಯಿಗಳು ಅಥವಾ ಅಂಗರಕ್ಷಕರ ಹಿತಾಸಕ್ತಿಗೆ ಅಡ್ಡಿ ಬಂದವರನ್ನೆಲ್ಲ ವ್ಯವಸ್ಥಿತವಾಗಿ ಮಟ್ಟ ಹಾಕುವ ಭೀಕರ ಪ್ರತೀಕಾರ ರಾಜಕಾರಣವನ್ನೇ ಯಶಸ್ವಿಯಾಗಿ ಪ್ರಯೋಗಿಸುತ್ತಾ ಬಂದ ಗೌಡರಿಗೆ 'ನೈಸ್' ಕಂಪನಿಯ ಮಾಲೀಕ ಅಶೋಕ ಖೇಣಿ ಸಿಂಹಸ್ವಪ್ನದಂತೆ ಕಾಡತೊಡಗಿದ್ದಾನೆ.

ಬೆಂಗಳೂರು ಬಿಡಿಎ ಎಂಬ ಸಾರ್ವಜನಿಕ ಸೇವಾ ಸಂಸ್ಥೆಗೆ ಪುನರ್ಜನ್ಮ ಕೊಟ್ಟು ಅದನ್ನು ಮತ್ತೆ ಜನೋಪಯೋಗಿ ಇಲಾಖೆಯನ್ನಾಗಿ ಪರಿವರ್ತಿಸಿದ್ದ ಮಾಜಿ ಕಮಿಷನರ್ ಜೈಕರ್ ಜೆರೋಮರನ್ನು ಮಟ್ಟ ಹಾಕಿದ್ದಾಯಿತು.

ಜಯದೇವ ಹೃದ್ರೋಗ ಸಂಸ್ಥೆಯ ಕ್ರಿಯಾಶೀಲ ನಿರ್ದೇಶಕ ಡಾ. ಎಂ. ಪ್ರಭುದೇವ್ ತಮ್ಮ ಅಳಿಯನ ಅಟ್ಟಹಾಸಕ್ಕೆ ಅಡ್ಡಿ ಬಂದಾರೆಂಬ ಅನವಶ್ಯಕ ಆತಂಕದಿಂದ ಅವರಿಗೆ ಅಸಾಧ್ಯ ಕಿರುಕುಳ ಕೊಟ್ಟು ಮನೆಗೆ ಓಡಿಸಿದ್ದಾಯ್ತು.

ಇದೀಗ ತಮ್ಮ ರಾಜಕೀಯ ಶತ್ರು ಎಸ್.ಎಂ. ಕೃಷ್ಣರ ಸಮೀಪವರ್ತಿಯಾಗಿದ್ದ ಎಂಬ ಅನುಮಾನದಿಂದ, ತಾವೇ 12 ವರ್ಷಗಳ ಹಿಂದೆ ರಾಜ್ಯದ ಮುಖ್ಯಮಂತ್ರಿಯಾಗಿ ಅನಾವರಣಗೊಳಿಸಿದ್ದ ಈ ಕಾರಿಡಾರ್ ರಸ್ತೆ ಯೋಜನೆಯ ಪ್ರವರ್ತಕ ಖೇಣಿಯನ್ನು ಯಾವುದೇ ಕಾರಣಕ್ಕೂ ತಲೆ ಎತ್ತಲು ಬಿಡಬಾರದೆಂಬ ಮಾಜಿ ಪ್ರಧಾನಿ ದೇವೇಗೌಡರ ಹಠ, ಛಲ, ರೋಷ ಅವರ ಸುಪುತ್ರ ಕುಮಾರಸ್ವಾಮಿಯನ್ನು ಸ್ವಯಂನಾಶದ ಪ್ರಪಾತದತ್ತ ದೂಡಿಬಿಟ್ಟವೆ.

ಆರಂಭಿಕ ಒಪ್ಪಂದದಲ್ಲೇ ಬೆಂಗಳೂರು ಮೈಸೂರು ಹೆದ್ದಾರಿ ಮತ್ತು 5 ಉಪನಗರ ನಿರ್ಮಾಣಕ್ಕೆಂದು ಸ್ವತಃ ದೇವೇಗೌಡರೇ ಕೊಡಲೊಪ್ಪಿದ್ದ ಮತ್ತು ಅಂತರರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿದ್ದ ಸುಮಾರು 20 ಸಾವಿರ ಎಕರೆ ಜಮೀನು ಕೂಡಾ ರೈತರದ್ದೇ ಆಗಿತ್ತಲ್ಲವೇ? ಆದರೆ ಮಣ್ಣಿನ ಮಗ ಗೌಡರ ಪರಿವಾರಕ್ಕೆ ಕಣ್ಣು ಕೆಸರಾಗಿರುವುದು ತಮ್ಮ ಉತ್ತರಾಧಿಕಾರಿಯಾಗಿ ಬಂದ ಜೆ.ಎಚ್. ಪಟೇಲ್ ಮತ್ತು ಎಸ್.ಎಂ. ಕೃಷ್ಣ ಸರ್ಕಾರಗಳು ಬೆಂಗಳೂರಿನ ಬಾಜುಬಾಜಿನಲ್ಲೇ ಅನುಗ್ರಹಿಸಿದ ಎರಡೂವರೆ ಸಾವಿರ ಎಕರೆ ಜಮೀನಷ್ಟೇ ರೈತರ ಆಸ್ತಿಯಾಗಿ ಗೋಚರಿಸಿದ್ದು ಇವರ ಮಗನ ಅಧಿಪತ್ಯದ ಕೋ-ಜಾ ಸರ್ಕಾರದ ಉಳಿವಿಗೆ [illegible]ವಾಗುತ್ತಿದೆ. ಸುಮಾರು 20 ವರ್ಷ ವಿರೋಧ ಪಕ್ಷದ ನಾಯಕನಾಗಿ ಹಲವಾರು ಸಾರ್ವಜನಿಕ ಹಿತಾಸಕ್ತಿಯ ವಿವಾದಗಳನ್ನೆತ್ತಿಕೊಂಡು ರಾಜಕೀಯ ಕಾಳಗಗಳನ್ನು ನಿರ್ವಹಿಸಿದ್ದ ದೇವೇಗೌಡರು, ಕಳೆದ 25 ವರ್ಷಗಳಲ್ಲಿ ಆಗಾಗ್ಗೆ ಅಧಿಕಾರರೂಢರಾಗಿ ಬಳಸಿದ ತಂತ್ರಗಳೆಲ್ಲವೂ ಇಂತಹ ನಿರರ್ಥಕ ಹೋರಾಟಗಳಿಗೇ ಸೀಮಿತವಾಗಿ ಇತ್ತ ಅಭಿವೃದ್ಧಿ ಕೇಂದ್ರಿತವೂ ಅಲ್ಲದ, ಅತ್ತ ಪ್ರಗತಿಪರವೂ ಅಲ್ಲದ ದೇವೇಗೌಡರ ಕೌಟುಂಬಿಕ ಪಾಳೆಗಾರಿಕೆ ರಾಜಕಾರಣ ತನ್ನ ಇತ್ತೀಚಿನ ಅತಿರೇಕಗಳಿಂದಾಗಿ ಕರ್ನಾಟಕ ಸಾರ್ವಜನಿಕ ಜೀವನಕ್ಕೆ ಒಂದು ಕೆಟ್ಟ ಶಾಪವಾಗಿ ಪರಿಣಮಿಸಿರುವುದು ಗೌಡರ ವರ್ಣರಂಜಿತ ವ್ಯಕ್ತಿತ್ವದ ದುರದೃಷ್ಟಕರ ಅಧ್ಯಾಯವೇ ಸರಿ.

ಅಂದಹಾಗೆ ನೈಸ್ ಕಂಪನಿಯ ಕಾರಿಡಾರ್ ಯೋಜನೆ ವಿರುದ್ಧ ದೇವೇಗೌಡರ ಶೀತಲ ಸಮರ ರಾಜಕೀಯ ರಂಗದಲ್ಲೂ, ಶಾಸಕಾಂಗದಲ್ಲೂ ಮತ್ತು ನ್ಯಾಯಾಂಗದ ವಿವಿಧ ಹಂತಗಳಲ್ಲೂ ತೀರಾ ಹೀನಾಯವಾದ ಸೋಲು ಅನುಭವಿಸಿದ ಮೇಲೂ ಮತ್ತೆ ಗೌಡರು ತಮ್ಮ ಕಪಿಮುಷ್ಟಿಯಲ್ಲಿನ ಹಾಲಿ ರಾಜ್ಯ ಸರ್ಕಾರ ಮತ್ತು ಶಾಸಕಾಂಗದಲ್ಲಿನ ಜೆಡಿಎಸ್-ಬಿಜೆಪಿ ರಾಕ್ಷಸ ಬಲವನ್ನು ಬಳಸಿಕೊಂಡು ಸಾಧಿಸಲು ಹೊರಟಿರುವುದಾದರೂ ಏನನ್ನು?



ಖೇಣಿ

ಕಾರಿಡಾರ್ ಯೋಜನೆಗೆ ಸಂಬಂಧಿಸಿದಂತೆ ದೇವೇಗೌಡರು ಎತ್ತುತ್ತಾ ಬಂದ ಹಲವು ಹತ್ತು ರೂಪದ ಆಕ್ಷೇಪಣೆಗಳೆಲ್ಲವನ್ನೂ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಆಧಾರರಹಿತ, ದುರುದ್ದೇಶಪೂರಿತ ಹಾಗೂ ಕಾನೂನುಬಾಹಿರ ರಾಜಕೀಯ ಕುತಂತ್ರಗಳೆಂದು ಛೇಡಿಸಿ ಛೀಮಾರಿ ಹಾಕಿದ್ದಾಗಿದೆ.

ತಮ್ಮದೇ ಕಪಿಮುಷ್ಟಿಯಲ್ಲಿದ್ದ ಹಿಂದಿನ ಕಾಂಗ್ರೆಸ್-ಜೆಡಿಎಸ್ ಸರ್ಕಾರವನ್ನೇ ನ್ಯಾಯಪೀಠದ ಎದುರು ಹಿಂದೆಂದೂ ಕಾಣದಂತ ಅವಹೇಳನ ಮತ್ತು ದಂಡ ವಿಧಿಸುವ ಶಿಕ್ಷೆಗೆ ಗುರಿಪಡಿಸಿದ ಗೌಡರು ಇದೀಗ ಮತ್ತದೇ ವಿವಾದವನ್ನು ಕೆದಕುವುದು ಆ ತೀರ್ಪು ನೀಡಿದ ಮಹಾಪೀಠದ ವಿರುದ್ಧವೇ ಸೇಡು ತೀರಿಸಿಕೊಳ್ಳಬೇಕೆಂಬ ಹಪಾಹಪಿತನದಿಂದಷ್ಟೇ ಎಂದೇ ಹೇಳಬೇಕಾಗಿದೆ. ಕಮ್ಯುನಿಸ್ಟ್ ಪಾರ್ಟಿಯ ಶ್ರೀರಾಮರೆಡ್ಡಿ ಮತ್ತು ಜೆಡಿಯುನ ಮಾಧುಸ್ವಾಮಿ ಎಂಬ ಪ್ರಬುದ್ಧ ಶಾಸಕರನ್ನು ಸಹ ನ್ಯಾಯಾಂಗದ ಹೋರಾಟಕ್ಕೆ ಸಾರ್ವಜನಿಕ ಹಿತಾಸಕ್ತಿಯ ಅರ್ಜಿದಾರರನ್ನಾಗಿ ಬಳಸಿಕೊಂಡ ಗೌಡರು ಅವರನ್ನು ಸಹ ಕೋರ್ಟು, ವಾಗ್ದಂಡನೆ ಮತ್ತು ತಲಾ 50 ಸಾವಿರ ಜುಲ್ಮಾನೆಗೆ ಗುರಿಪಡಿಸಿದ್ದೂ ಆಗಿತ್ತು.



ಈಗ ಇಡೀ ಕಾರಿಡಾರ್ ಯೋಜನೆಯನ್ನೇ ಸಮಗ್ರವಾಗಿ ರಾಷ್ಟ್ರೀಕರಿಸಿ ರಾಜ್ಯ ಸರ್ಕಾರವೇ ತನ್ನ PWD, ಲ್ಯಾಂಡ್ ಆರ್ಮಿಗಳಂತಹ ಪರಮ ಅದಕ್ಷ ಮತ್ತು ಭ್ರಷ್ಟ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಬೇಕೆಂಬ ಹುಚ್ಚು ಚಿಂತನೆ ಬಿತ್ತಿ ಅದಕ್ಕೋಸ್ಕರ ಒಂದು ಹೊಸ ಕಾನೂನನ್ನು ಪಾಸು ಮಾಡಲಿ ಎಂದು ರಾಜ್ಯ ವಿಧಾನಮಂಡಳದ ಮೇಲೆ ಅತ್ಯಂತ ಅಸಹ್ಯವಾದ, ಅನೈತಿಕವಾದ ಒತ್ತಡ ಹೇರಿದ್ದಾರೆ.

ತಮಗೆ ಕಂಡರಾಗದ ಸರ್ಕಾರಿ ಅಧಿಕಾರಿಗಳನ್ನು ಒಡ್ಡೋಡಿಸುವ, ತಮ್ಮನ್ನು ವಿರೋಧಿಸುವ ರಾಜಕೀಯ ಎದುರಾಳಿಗಳನ್ನು ಮಟ್ಟ ಹಾಕುವ, ಅಪರೂಪಕ್ಕೊಮ್ಮೆ ಭಿನ್ನಮತ ವ್ಯಕ್ತಪಡಿಸುವ ನಿಷ್ಠಾವಂತ ಅನುಯಾಯಿಗಳನ್ನೇ ಎಂದಿಲ್ಲದ ಅವಹೇಳನಕ್ಕೆ ಗುರಿ ಮಾಡುವ ಘಾತುಕ ರಾಜಕಾರಣವನ್ನೇ ಅನುಸರಿಸಿಕೊಂಡು ಬಂದ ದೇವೇಗೌಡರು ಇದೀಗ ರಾಷ್ಟ್ರದ ನ್ಯಾಯಾಂಗವನ್ನು ಧಿಕ್ಕರಿಸುವಂತೆ ಒತ್ತಡ ಹೇರಿ, ಕರ್ನಾಟಕದ ಶಾಸಕಾಂಗವನ್ನೇ ಬ್ಲ್ಯಾಕ್‌ಮೇಲ್ ಮಾಡುವ ಹುನ್ನಾರಕ್ಕೆ ಕೈ ಹಾಕಿದ್ದಾರೆ.

ಯಾವ ಆಯಾಮದಿಂದ ನೋಡಿದರೂ ಸಮಂಜಸವೆನಿಸದ, ಕಿಂಚಿತ್ತೂ ನ್ಯಾಯಪ್ರಜ್ಞೆ ಅಥವಾ ರೈತ ಹಿತಾಸಕ್ತಿಯ ಗಂಧವೂ ಇಲ್ಲದ ದೇವೇಗೌಡರ ಈ ಲೇಟೆಸ್ಟ್ ರಾಜಕೀಯ ದುಸ್ಸಾಹಸ ರಾಜ್ಯದ ಪ್ರಜಾತಂತ್ರ ಪ್ರೇಮಿಗಳೆಲ್ಲರನ್ನು ಬಡಿದೆಬ್ಬಿಸಬೇಕಾಗಿದೆ.

ವಿಪರ್ಯಾಸವೆಂದರೆ ಅವರ ಈ ದುಸ್ಸಾಹಸ ತಿರುಗುಬಾಣವಾದಲ್ಲಿ ಅದಕ್ಕೆ ಮೊಟ್ಟ ಮೊದಲ ಬಲಿಪಶುವಾಗಲಿರುವುದೇ ಅವರ ನೆಚ್ಚಿನ ಸುಪುತ್ರ ಕುಮಾರಸ್ವಾಮಿ ಮತ್ತು ಅವರನ್ನು ದಿಢೀರನೆ ಮುಖ್ಯಮಂತ್ರಿಪಟ್ಟಕ್ಕೆ ಕೊಂಡೊಯ್ದ ಜೆಡಿಎಸ್-ಬಿಜೆಪಿಗಳ ರೆಸಾರ್ಟ್ ರಾಜಕಾರಣ.

ಕಳೆದ ವಾರ ಸಂಜೆ 5 ಗಂಟೆಗೇ ಸೇರಬೇಕಿದ್ದ ಸಚಿವ ಸಂಪುಟ ಸಭೆ ತನ್ನ ಮುಖ್ಯ ಕಾರ್ಯಸೂಚಿಯಾಗಿದ್ದ ಕಾರಿಡಾರ್ ಯೋಜನೆಯ ವಶೀಕರಣದ ಬಗ್ಗೆ ನಿರ್ದಿಷ್ಟ ಒಪ್ಪಂದಕ್ಕೆ ಬರಲಾಗದೇ 5 ತಾಸುಗಳ ಕಾಲ ಚಡಪಡಿಸಿದ್ದು ಬಿಜೆಪಿ ಮತ್ತು ಜೆಡಿಎಸ್ ಎರಡೂ ಪಾಲುದಾರ ಪಕ್ಷಗಳ ರಾಜಕೀಯ ದಿವಾಳಿತನ ಮತ್ತು ಬಾಲಿಶತನಕ್ಕೆ ಜ್ವಲಂತ ಪುರಾವೆಯಾಗಿ ಇಡೀ ರಾಷ್ಟ್ರಾದ್ಯಂತ ಟಿವಿ ಚಾನೆಲ್‌ಗಳಲ್ಲಿ ಬಿಂಬಿಸಲ್ಪಟ್ಟಿತು. ಸುಪ್ರೀಂ ಕೋರ್ಟ್ ತೀರ್ಪನ್ನು ಬುಡಮೇಲು ಮಾಡಲು ಹೊರಟಿದ್ದ ತನ್ನ ಪ್ರಮುಖ ಅಜೆಂಡಾ ಬದಲು ಏಕಾಏಕಿ ರಾಜ್ಯ ಹೈಕೋರ್ಟು ನೀಡಿದ ತೀರ್ಪೊಂದನ್ನು ಗೌರವಿಸಬೇಕೆಂಬ ಜ್ಞಾನೋದಯದ ಪರಿಣಾಮವಾಗಿ ಅಂದು ವಿಳಂಬವಾಗಿ ಜರುಗಿದ ಕ್ಯಾಬಿನೆಟ್ ಸಭೆ ಪಾಸು ಮಾಡಿದ್ದು ದ್ವಿಚಕ್ರ ವಾಹನ ಸವಾರರು ಕಡ್ಡಾಯ ಹೆಲ್ಮೆಟ್ ಧರಿಸಬೇಕೆಂಬ ಜನಪೀಡಿತ ತೀರ್ಮಾನವನ್ನು! ಸುಪ್ರೀಂಕೋರ್ಟ್ ತೀರ್ಪನ್ನು ತಮ್ಮ ಕೌಟುಂಬಿಕ ಸ್ವಾರ್ಥ, ಒಣಪ್ರತಿಷ್ಠೆಗಾಗಿ ಬುಡಮೇಲು ಮಾಡಬೇಕೆಂದು ಹೊರಟಿರುವ ಈ ತಂದೆಮಕ್ಕಳ ರಾಜಕೀಯ ಪ್ರೈ. ಲಿ. ಕಂಪನಿ, ಹೆಲ್ಮೆಟ್ ಧಾರಣೆಯಂತಹ ಯಃಕಶ್ಚಿತ್ ಆಡಳಿತಾತ್ಮಕ ವಿಷಯದಲ್ಲಿ ಹೈಕೋರ್ಟ್ ತೀರ್ಪನ್ನು ಗೌರವಿಸುವುದಕ್ಕೆ ಸಭೆ ನಡೆಯಿತು ಎಂಬ ನಾಟಕೀಯ ಸಬೂಬು ನೀಡುತ್ತದೆ.

ಹೀಗೇ ಉದ್ದಕ್ಕೂ ಪ್ರಾಮಾಣಿಕವಾದ ಜನಪರ ಕಾಳಜಿ ಅಥವಾ ಆರೋಗ್ಯದಾಯಕ ಅಭಿವೃದ್ಧಿ ಚಿಂತನೆಯಿಲ್ಲದ, ಕೇವಲ ರಾಜಕೀಯ ಹುಂಬತನ ಮತ್ತು ಸ್ವೇಚ್ಛಾಪೂರಿತ ತಂತ್ರಗಾರಿಕೆಯನ್ನೇ ತುಂಬಿಕೊಂಡ ಈ ಗೌಡರ ಪರಿವಾರದ ಸಂಚು ಮರುದಿನವೇ ಮತ್ತೊಮ್ಮೆ ಮುಗ್ಗರಿಸಿಬಿತ್ತು.

ಸುಪ್ರೀಂಕೋರ್ಟಿನ ಛೀಮಾರಿಯ ಸಮೇತ ನೈಸ್ ಕಂಪನಿಯ ಖೇಣಿಗೆ ರಾಜ್ಯ ಸರ್ಕಾರ ನೀಡಬೇಕಾಗಿದ್ದ ಕೇವಲ 5 ಲಕ್ಷ ರೂ.ಗಳ ಚೆಕ್ ಕೂಡಾ ಸರ್ಕಾರದ ಖಾತೆಯಲ್ಲಿ ಹಣ ಇಲ್ಲವೆಂದು ಬೌನ್ಸ್ ಆಗಿಬಿಟ್ಟಿತು. ಹಾಗೆಯೇ ಇನ್ನೇನು ಸುಪ್ರೀಂಕೋರ್ಟ್ ತನ್ನ ತೀರ್ಪನ್ನು ಧಿಕ್ಕರಿಸುವ ಕುಮಾರನ ಸರ್ಕಾರಕ್ಕೆ ನ್ಯಾಯಾಂಗ ನಿಂದನೆ ನೋಟೀಸ್ ಕೊಡಬಹುದೆನ್ನುವ ಭಯದ ಕರಾಳ ಛಾಯೆ ಹರಡುತ್ತಿದ್ದಂತೆ ರಾತ್ರೋರಾತ್ರಿ ಆ 'ಹೆಚ್ಚುವರಿ' ಜಮೀನನ್ನೆಲ್ಲ ತಕ್ಷಣವೇ 'ನೈಸ್'ಗೆ ಒಪ್ಪಿಸಬೇಕೆಂದು ಚೀಫ್ ಮಿನಿಸ್ಟರ್ ಸಾಹೇಬರು ತುರ್ತು ಆದೇಶ ಹೊರಡಿಸಬೇಕಾಯ್ತು. ಜೊತೆಗೆ ಮೊದಲೇ ನಿಗದಿಪಡಿಸಿದ್ದಂತೆ ಜೂನ್ 16 ರಂದು ನೈಸ್ ಕಂಪನಿ ಉದ್ಘಾಟಿಸಬೇಕೆಂದಿದ್ದ ಮೊದಲ ಹಂತದ ರಸ್ತೆಯನ್ನು ಅಗೆಸಿ ಅಡ್ಡಿಪಡಿಸಲು ಹೊರಟ ಕುಮಾರ ಸರ್ಕಾರದ ಹತಾಶ ಯತ್ನವೂ ಭಗ್ನಗೊಂಡಿತು.

ಪಾಪ ಕುಮಾರಸ್ವಾಮಿ ಕಳೆದ 3 ತಿಂಗಳಿಂದ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ತಿಂಗಳಿಗೆ ಮೂರಾವರ್ತಿಯಂತೆ ಸುತ್ತಾಡಿ ಕನಿಷ್ಠ ಪಕ್ಷ ತಾನೊಬ್ಬ ಡೈನಾಮಿಕ್ ಯುವ ಸಿಎಂ ಎಂಬ ಭ್ರಮೆಯನ್ನಾದರೂ ಸೃಷ್ಟಿಸಿದ್ದರು. ಮೊದಲ ಎರಡು ತಿಂಗಳಂತೂ ಮುನಿಸಿಕೊಂಡಿದ್ದ ತಮ್ಮ ಅಪ್ಪಾಜಿಯ ಹಂಗು, ಮುಲಾಜು, ಮರ್ಜಿಗಳಿಲ್ಲದೆಯೇ ಹಲವು ಸ್ವತಂತ್ರ ನಿರ್ಣಯಗಳನ್ನು ಪ್ರಕಟಿಸಿ, ಜನಸಾಮಾನ್ಯರಿಂದ 'ಪರವಾಗಿಲ್ಲ', ಎಂಬ ಆರಂಭಿಕ ಶಹಬ್ಬಾಸ್‌ಗಿರಿಯನ್ನು ಪಡೆದಿದ್ದರು. ಇದೀಗ ಮತ್ತೆ ಅಪ್ಪಾಜಿಗೆ ಶರಣಾಗುತ್ತಿದ್ದಂತೆಯೇ ಅವರ ಎಲ್ಲ ಪೂರ್ವಗ್ರಹಪೀಡಿತ ರಾಜಕೀಯ ಕಾರ್ಯಾಚರಣೆಗಳಿಗೆ ತಲೆದಂಡ ನೀಡಬೇಕಾದ ಫಜೀತಿ ತಂದುಕೊಂಡುಬಿಟ್ಟಿದ್ದಾರೆ ಕುಮಾರಸ್ವಾಮಿ. ನೈಸ್ ಕಂಪನಿ ವಿವಾದ ದಿನೇ ದಿನೇ ತಮ್ಮ ಕುಟುಂಬದ ಮಾನ ಮರ್ಯಾದೆಗೆ ಕೊಡಲಿ ಪೆಟ್ಟನ್ನು ಹಾಕುತ್ತಿದ್ದಂತೆ ತತ್ತರಿಸಿ ಹೋದ ಕುಮಾರಸ್ವಾಮಿ ಇನ್ನು 15 ದಿನದಲ್ಲಿ ರಾಜೀನಾಮೆ ಎಂಬ ಹತಾಶ ಪೌರುಷ ಪ್ರದರ್ಶನ ಮಾಡಿದ್ದೂ ಆಯ್ತು. ಕುಮಾರಸ್ವಾಮಿ ರಾಜೀನಾಮೆ ಬೆದರಿಕೆಯಿಂದ ಇತ್ತ ಬಿಜೆಪಿಯವರೂ ಬೆಚ್ಚಿ ಬೀಳಲಿಲ್ಲ, ಅತ್ತ ಜನಸಾಮಾನ್ಯರೂ ದಿಗ್ಭ್ರಾಂತರಾಗಲಿಲ್ಲ. ಇನ್ನು ಅಧಿಕಾರ ವಂಚಿತ ಕಾಂಗ್ರೆಸ್ ಪಕ್ಷವೋ ಮತ್ತೆ ಅಸೆಂಬ್ಲಿ ವಿಸರ್ಜನೆ ಮತ್ತು ಮರುಚುನಾವಣೆಯ ಹೊಂಗನಸು ಕಾಣತೊಡಗಿತು.

ಕಡೆಗೂ ಕರ್ನಾಟಕ ಅಭಿವೃದ್ಧಿ ರಂಗ ಎಂಬ [illegible] ಗೊಂದಲಮಯ ರಾಜಕೀಯ ಪ್ರಯೋಗ ಹೀಗೆ ದೇವೇಗೌಡರ ಕೌಟುಂಬಿಕ ರಾಜಕಾರಣದ ಹುನ್ನಾರಗಳಲ್ಲಿ ಸಿಲುಕಿ ಒದ್ದಾಡುವುದಕ್ಕಿಂತಲೂ ಜಾಗ್ರತೆಯಾಗಿ ತೊಲಗಿದರೇ ಲೇಸು ಎಂದು ಸಮಸ್ತ ಕನ್ನಡಿಗರೆಲ್ಲರೂ ತುದಿಗಾಲ ಮೇಲೆ ನಿಂತು ಆಗ್ರಹಪಡಿಸುವಂತಾಗಿದೆ. ●

ಸೌಂದರ್ಯ ಎನ್ನುವುದು ಕಾಣುವ ಕಣ್ಣಿನಲ್ಲಿರುತ್ತದೆ -ಇಂಗ್ಲಿಷ್ ಗಾದೆ

ನಾಯಿ ಬಾಲ ಅಲ್ಲಾಡುಸಬೇಕೊ, ಬಾಲವೇ ನಾಯಲ್ಲಾಡುಸಬೇಕೊ

ಬಯಲು ಸೀಮೆಯ ಕಟ್ಟೆ ಪುರಾಣ

ಇವರೆಲ್ಲಾ ತಮ್ಮಷ್ಟಕ್ಕೆ ಮಾತನಾಡಿಕೊಳ್ಳುತ್ತಿದ್ದಾಗ ಕಲಕಪ್ಪ ಮೇಷ್ಟ್ರು ಕಾಣಿಸಿದ. ಆ ಕೂಡಲೇ ಜುಮ್ಮಿ ಕೂಗಿ ಕರೆದಳು.

"ನಮಸ್ಕಾರಿ ಅಕ್ಕಾವರಾ ಆರಾಮದಿರೇನು?"

"ಆನ್ನೂರಾಯ್ತು ಅಂದ್ರು. ಇನ್ನು ಇಲ್ಲೇ ಇದ್ದಿರಲ್ರೀ ಮೇಟ್ರೆ?"

"ನೋಡ್ರಿ ಅಕ್ಕಾವ್ರರ, ಟ್ರಾನ್ಸ್‌ಫರ್ ಆಗುಬೇಕಾದ್ರೆ ಹೋಗಬೇಕು, ಎಮ್ಮೆಲ್ಲೆ ಹಿಡಕೋಬೇಕು. ರೊಕ್ಕ ಕೊಡಬೇಕು. ನನ್ನ ಕೈಲದಾಗುದಿಲ್ರಿ. ನಾನೇನು ಅಸ್ಸಾಮದಾಗದೀನೊ, ಕಾಶ್ಮೀರದಾಗದೀನೊ ಹೇಳ್ರಲಾ?"

"ಅದು ನಿಜವೆ ಬುಡಿ. ಯಗ್ಗಣ ಎಲ್ಲೋದ್ರು ನ್ಯಲ ಕ್ಯರಿಯದು ತಪ್ಪತೇ. ಇಲ್ಲೇಲೊ ಪಾಠನ ನೀಮ್ಮೂರಲೂ ಹೇಳ್ತಿರಿ. ವಸಿ ದೂರ ಅನ್ನದು ಬುಟ್ರೆ ಯಲ್ಲಾ ಊರು ಒಂದೆಯಾ" ಎಂದಳು ಜುಮ್ಮಿ.

"ನನಗ ಮೊದ್ಲು ದೂರ ಅನ್ನಿಸಿರಲಿಲ್ರಿ. ಈ ಹಲಕಟ್ ಸೂಳಿಮಕ್ಕಳು ಅರ್ದ ರಾತ್ರ್ಯಾಗ ಕುತಗೊಂಡು ಹನ್ನೆಡು ರೂಪಾಯಿ ಬಸ್‌ಚಾರ್ಜು ಏರಿಸ್ಯಾರಲ್ಲಾ ಮಂದಿ ತಿರುಗಾಡುದ್ಯಂಗರಿ ಅಕ್ಕಾವ್ರರ?"

"ಅವ್ರುರೇನು ಮಾಡ್ಯರು, ಡೀಜೆಲ್ ರೇಟು ಏರಿದ್ದತಂತೇ?"

"ಡೀಜೆಲ್ ರೇಟು ಏರಿರದು ನನಗೂ ಗೊತ್ತರೀ. ಒಬ್ಬ ಪ್ರಯಾಣಿಕನ ತೆಲಿಗೆ ಒಂದ ರೂಪಾಯಿ ಏರಿಸಿರ್ಯಲ್ಲಾ, ಒಮ್ಮಿಗಲೇ ಎಂಟು ಪರಸೆಂಟು ಏರಿಸಿದ್ರೆ ನಾವು ಅಡ್ಡಾಡುದಾರ ಹ್ಯಂಗರಿ, ನೀವೇ ಹೇಳ್ರಿ ಕಾಳೇಗೌಡರೆ?"

"ನಾನೇನೇಳನ ಮೇಟ್ರೆ, ಹೇಳಿಕೇಳಿ ನಾನು ಊರುಬುಟ್ಟು ಎಲ್ಯೂ ಹೋದೋನಲ್ಲಾ. ಆ ಸರ್ಕಾರದೋರು ಯಾವ ರೇಟೇರಿಸಿದ್ರು ನನ್ನದೊಂದು ಕೂದ್ಲು ಕಿತ್ತಗಳಕಾಗಿಲ್ಲ" ಎಂದು ಕಾಳಮಾವ ಸರ್ಕಾರದ ಹಂಗಿಲ್ಲದೇ ಬದುಕಿದ ಕಣ್ಣುಬಿಟ್ಟ.

"ನೀನಂಗನ್ನಕೋಗಬ್ಯಾಡ ಕಣೊ ಕಾಳಮಾವ. ಸರ್ಕಾರ ಡೀಜೆಲು ಪೆಟ್ರೋಲ್ ರೇಟು ಏರಿಸಿರದರಿಂದ ನಿನಿಗೇನೂ ಆಗದಿಲ್ಲ ಅಂತ ತಿಳಕಂಡಿದ್ದಿಯಲ್ಲಾ, ಅದೇ ತಪ್ಪು" ಎಂದ ಉಗ್ರಿ.

"ಅದ್ಯಂಗೆ ತೆಪ್ಪಲಾ?"

"ಸಾಗಾಣಿಕೆ ಚಾರ್ಜು ಪದಾರ್ಥದ ಮ್ಯಾಲೆ ಬದ್ದಾಗ, ನಿನಿಗೆ ಗೊತ್ತಿಲ್ಲದಂಗೆ ನೀನು ತೆರಿಗೆ ಕಟ್ಟಿರತಿ."

"ಅದೆ ಯಂಗೇ ಅಂತ?"

"ಈಗ ಬೀಡಿ ಬಂಡ್ಲು, ರೇಟು ಜಾಸ್ತಿಯಾಯ್ತು ಅನ್ನು. ನೀನೊಂದು ಬೀಡಿ ಸೇತ್ತಿ, ಸೇದಿದೇಟಿಗೆ ಮೂರು ಪೈಸೆ ಮುರಕಂಡೋಗಿ ಸರ್ಕಾರದ ಖಜಾನೆವಳಿಕೆ ಬೀಳತದೆ. ಅಂಗೇ ನೋಡಿದ್ರೆ ನಿನಿಗ್ಗೊತ್ತಿಲ್ಲದಂಗೆ ನೀನು ಸರ್ಕಾರದ ಖಜಾನೆ ವಳಿಕೆ ತಲಿಮುಂದಾಗಿ ಬೀಳತಾಯಿರತಿ" ಎಂದ ಉಗ್ರಿ.

"ಹಾದ್ರಿ ಕಾಳೇಗೌಡ್ರೆ, ಹಂಗೆ ನೋಡಿದ್ರೆ ಈಗ ಪುಕ್ಕಟೆ ಸಿಗೂದು ಅಂದ್ರೆ ಬರಿ ಗಾಳಿ, ಸೂರ್ಯನ ಬೆಳಕು ಅಷ್ಟರಿ."

"ಗಾಳಿ ತಾನೆ ಎಲ್ಲಿ ಪುಗಸಟ್ಟೆ ಸಿಗತದ್ರಿ? ನಿಮ್ಮ ಸೈಕಲ್ಲಿಗೆ ಬಟ್ಟು ಗಾಳಿ ಹ್ವಡಸಿ ನೋಡನ" ಎಂದ ಉಗ್ರಿ.

"ಅಲ್ಲರಿ ನಾನೇಳಿದ್ದು ಉಸಿರಾಟಕ್ಕ. ಸೂರ್ಯನ ಬೆಳಕು, ಬೀಸೊ ಗಾಳಿ ಬಿಟ್ಟರೆ ಮನುಷ್ಯ ದರವೊಂದಕೂ ರೊಕ್ಕ ಕೊಟ್ಟು ಬದಕೂ ಸ್ಥಿತಿ ಬಂದೈತ್ರಿ ಅವುನವುನ್."

"ನೋಡಪ್ಪ ಎಲ್ಲಿಗೆ ಬಂದುಬುಡ್ತು ದೇಸ" ಎಂದ ಸೀರ.

"ಹೆದರೂದ ಬ್ಯಾಡ್ರಿ ಸೀರೆ ಗೌಡ್ರೆ, ನಿಮ್ಮ ಕತಿಯಾಗ್ನೆ ಕೊನೆ ಚಾಪ್ಟರಕ ಬಂದೈತಿ. ಆದ್ರೆ ಮುಂದು ಬರೋ ಮಂದಿ ಏನದಾರಲ್ಲ ಅವುರು ರೊಕ್ಕ ಇದ್ರ ಜೀವನ ಮಾಡಬೇಕು. ಇಲ್ಲಂದ್ರ ಮನಿಯಾಗಿರಬೇಕು. ಅಂಗಾಕೃತಿ ಗುರತೇನ."

"ಏ ತಿರಗಾಡೊ ದಾರಿಗೇ ದುಡ್ಡುಕೊಡಬೇಕಾಗ್ಯದಂತಲ್ಲ ಹೇಳು?"

"ಅದೇರಿ ಈಗ ನ್ಯಡದಿರೊ ಗದ್ಲ. ರೋಡಿನ ಮಾಲೀಕರಿಗೂ, ಮುಕ್ಯಮಂತ್ರಿಗೂ ಜಗಳ ಬದ್ದೈತಿ ಗುರುತೇನ?" ಎಂದು ಕಲಕಪ್ಪ ಹೇಳುವಾಗ ಕಾಣಿಸಿಕೊಂಡ ವಾಟಿಸ್ಸೆ,

"ಮಿಸ್ಟರ್ ಕಲಕಪ್ಪಾರೆ, ನಿಮ್ಮ ಸ್ಕೂಲಲ್ಲಿ ನನಿಗೆ ಪಾರ್ಟ್ಟೈಂ ಕೆಲಸ ಕೊಡ್ತಿರ?" ಎಂದ.

"ಎದಕ್ರಿ?"

"ಒಂದನೇ ಕ್ಲಾಸಿಂದ ಇಂಗ್ಲಿಷ್ ಹೇಳಿಕೊಡಬೇಕಂತಲ್ಲಾ, ಅದ್ಕೆ ಬೇರೆ ಅಪಾಯಿಂಟ್‌ಮೆಂಟ್ ಮಾಡಿಕೊಬ್ಯಾಡಿ. ನಾನೇ ಇದ್ದೀನಿ."

"ಬೇಪಾತು ಬಿದ್ರಿ. ಅವುನವುನ್ ಡಿಡಿಪಿಐ ಕಡಿಗೋಗಿ ಅಪಾಯಿಂಟ್ ಆರ್ಡರ್ ತಗೊಂಡು ಬಂದು ಹೇಳಿಕೊಡ್ರಲ್ಲಾ."

"ಡಿಡಿಪಿಐ ಯಾಕ್ರಿ, ಕುಮಾರಸ್ವಾಮಿಯಿಂದ್ಲೆ ಆರ್ಡರ್ ತರತಿನಿ ಗೊತ್ತೆ?"

"ಬೇಗ ತಗೊಂಬರ್‍ರೆಲ್ಲಾ ಅವ್ರುರೇನೊ ರಾಜೇನಾಮೆ ಕೊಡ್ತಿನಿ ಅಂತ ಹೆದಿರಿಸ್ಯಾರ. ಅಷ್ಟರಾಗೆ ಹೋಗಿ ಬರ್ರಿ."

"ಕುಮಾರಸ್ವಾಮಿ ರಾಜೇನಾಮೆ ಕೊಟ್ಟನೆ?" ಎಂದ ಕಾಳಮಾವ ಆಚ್ಚರಿಯಿಂದ.

"ಊ ದೊಡಪ್ಪ ಕೊಡ್ತಿನಿ ಅಂದವುನೆ."

"ಅದ್ಯಾಕ್ ಕೊಡ್ತನ್ನ?"

"ಅದೂ ಒಬ್ಬ ರಸ್ತೆ ಕಂತ್ರಾಟ್ರು ಅವುನ್ನ ಹೆದರುಸ್ತ ಅವುನೆ."

"ರಸ್ತೆ ಕಂತ್ರಾಟು ಮುಖ್ಯಮಂತ್ರಿನೆ ಹೆದುರುಸ್ತನೆ ಅಂದ್ರೆ ಏನ್ಲ?"

"ಇನ್ನು ಮುಂದ್ಯಲ್ಲ ಅಂಗೆ ದ್ವಡಪ್ಪ, ಬಳ್ಳಾರಿಲಿ ಮೈನ್ ಬಗಿಯೋ ಕಂತ್ರಾಟು ಮಾಡೋರು ಸರ್ಕಾರನೆ ಬದ್ಲಾಸ್ತರೆ. ಬೆಂಗಳೂರಲ್ಲಿರೊ ನಾರಾಯಣ ಮೂರ್ತಿ ತರದೋರು ಮುಖ್ಯಮಂತ್ರಿನೆ ಹೆದುರುಸ್ತರೆ. ಅಂಗೆ ಬೆಂಗಳೂರು ಮೈಸೂರು ರಸ್ತಿ ಮಾಡೊ ಕಂತ್ರಾಟು ಕುಮಾರಸ್ವಾಮಿನೆ ರಾಜೇನಾಮೆ ಕೊಡಂಗೆ ಮಾಡಿ ಮಡಿಗ್ಯವುನೆ. ಇನ್ನು ಮುಂದೆ ನಿಮ್ಮ ರೈತ ಚಳುವಳಿ, ಕಾರ್ಮಿಕರ ಚಳುವಳಿ ಸರ್ಕಾರ ಬದ್ಲಾಸಕ್ಯಾಗದಿಲ್ಲ, ಏನಿದ್ರು ಕಂತ್ರಾಟು ಮಾಡೋರಿಗೆ ಮಾತ್ರ ಅಂತ ಪವರ್ ಬಂದದೆ."

"ಅಂಗಂತಿಯಾ?"

"ಊ ಮತ್ತೆ, ನಾಯಿ ಬಾಲ ಅಳ್ಳಾಡಸೊ ಕಾಲ



ಹೋಯ್ತು, ಇನ್ನೇನಿದ್ರು ಬಾಲವ ನಾಯಿ ಅಳ್ಳಾಡುಸ್ತದ."

"ನೀ ಹೇಳೂ ಮಾತು ಖರೆ ವಾಟಿಸ್ಸೆ, ಯಾಕಪ್ಪ ಅಂದ್ರ, ನಾಯಿ ದುರ್ಬಲಾಕ್ಯತಲ್ಲ ಆವಾಗ ಆಟೋಮ್ಯಾಟಿಕ್ಯಾಗಿ ಬಾಲನೆ ನಾಯಿ ಅಲ್ಲಾಡುಸುದು ಖರೆರಿ" ಎಂದ ಕಲಕಪ್ಪ,

"ಕುಮಾರಸ್ವಾಮಿ ರಾಜೇನಾಮೆ ಕೊಡೊದ್ಯಾಕೆ ಗೊತ್ತೆ?" ಎಂದ ಸೀರ.

"ನೋಡು ಕುಮಾರಸ್ವಾಮಿ ರಾಜೇನಾಮೆ ಸುದ್ದಿ ನಮ್ಮ ಸೀರ ಚಿಗಪ್ಪನಿಗೂ ಗೊತ್ತಾಗ್ಯದೆ ಅಂದ್ರೆ, ಇನ್ನು ಸರ್ಕಾರಿ ಜನ ಸುಮ್ಮನಿರತರ. ಫೈಲು ಮಡಿಕಂಡು ಕುಮಾರಣ್ಣ ಹೋಗದ್ನೆ ಕಾಯ್ತ ಕುಂತಗತರೆ. ಅದರಲ್ಲೂ ಬೆಂಗಳೂರು ಮೈಸೂರು ರೋಡು ಮಾಡೊ ಕಂತ್ರಾಟಗೂ ಅದೇ ಬೇಕು."

"ಅದೇನಾಟೊತ್ತಿಂದ ಕಂತ್ರಾಟು ಕಂತ್ರಾಟು ಅಂತಿಯಲ್ಲ ಸರಿಯಾಗೇಳ್ಳ?" ಎಂದು ಕಾಳಮಾವ ರೇಗಿದ.

"ನಾನೇಳ್ತಿನಿ ಕೇಳಣ್ಣ ಅವುನ್ಯಾರೊ ಪಬ್ಬ ಕಂತ್ರಾ[…] ಬೆಂಗಳೂರಿಂದ ಮೈಸೂರಿಗೆ ರೋಡ ಮಾಡ[…] ಬಂದಿದ್ನಂತೆ" ಎಂದ ಸೀರ.

"ಯಾಕೆ ಮೈಸೂರಿಗೂ ಬೆಂಗಳೂರಿಗ[…] ರೋಡಿರಲಿಲವೆ?"

"ಇತ್ತು, ಇವುನಿನ್ನು ಅಗಲ ಮಾಡಿಕೊಡ್ತಿನಿ ಅಂ[…] ಬಂದು ದ್ಯಾವೇಗೌಡನಿಗೆ ಲಂಚ ಕೊಟ್ಟು ಕ್ಯಲಸ ಸುರ[…] ಮಾಡಿದ. ಆಟೊತ್ತಿಗೆ ಕುಮಾರಸ್ವಾಮಿನೂ ಬಂದು[…] ಅವುನೂ ಲಂಚ ಕೇಳಿದ. ಅವುನು ಅಪ್ಪನಿಗೂ ಕೊಟ್ಟ[…] ಮಗನಿಗೂ ಕೊಡಕ್ಯಾಗದಿಲ್ಲ ಅಂತ ಹೇಳಿ ಪೇಪ್ರುಗ್[…] ಹೇಳಿಕೆ ಕೊಟ್ಟಿದ್ದನಂತೆ. ಅದ್ಕೆ ಅವುಮಾನಾ[…] ಕುಮಾರಸ್ವಾಮಿ ರಾಜೇನಾಮೆ ಕ್ಯರದನಂತೆ" ಎಂದ ಸೀರ[…]

"ನೋಡ್ರಪ್ಪ ಸೀರ ಚಿಗಪ್ಪನತ್ರದಲ್ಲಿರೊ ಪೈಲ[…] ಯಂತ್ಯಂತಾ ಡಾಕ್ಯುಮೆಂಟವೆ. ಸುಳ್ಳ ಹಿಂಗೂ ಹೇಳ್[…] ಚಿಗಪ್ಪ" ಎಂದ ವಾಟಿಸ್ಸೆ.

"ಅಂಗಾದ್ರೆ ನಿಜ ಏನು ಅಂತ ನೀನೆ ಹೇಳ್ಳ[…]" ಎಂದಳು ಜುಮ್ಮಿ.

"ನೋಡಕ್ಕ ನೈಸ್ ಕಂಪ್ನಿ ಮೈಸೂರಿಂದ ಬೆಂಗಳೂರಿ[…] ಎಕ್ಸ್‌ಪ್ರೆಸ್ ಕಾರಿಡಾರ್ ರಸ್ತೆ ಮಾಡ್ತಾಯಿತ್ತು."

"ಯಪ್ರೆಸ್ ಕಾರುಡಾರ್ ಅಂದ್ರೇ ಅದ್ಯಾವು ರೋಡು?[…]"

"ಆ ರಸ್ತಿಲೋಗೂ ವೆಯಿಕಲ್ಲು ದಿನ ದುಡ್[…] ಕೊಡಬೇಕು. ದುಡ್ಡು ಕೊಡೋರು ಮಾತ್ರ ಓಡಾಡದು[…] ಅಂತ ನಯಸ್ಸಾದ ರಸ್ತೆ ಅದು. ಅಂತ ರೋಡ ಮಾಡ[…] ದ್ಯಾವೇಗೌಡ್ರು ಪರಮಿಷನ್ ಕೊಟ್ಟಿದ್ರು."

"ದ್ಯಾವೇಗೌಡ ಕೊಟ್ಟಿದ್ನೆ?" ಎಂದ ಕಾಳಮಾವ.

"ಆ ಜಾಗದಲ್ಲಿ ಯಾರೆ ಇದ್ರೂ ಕೊಡತಿದ್ರು ದ್ವಡಪ[…] ನೈಸ್ ಕಂಪನಿ ಅಂದ್ರೆ ಇಂಗ್ರೀಸ್‌ನೋರ್ ಕಂಪ[…] ಸರ್ಕಾರಿದ್ದಂಗೆ. ವಿರೋಧ ಪಕ್ಷದೋರು, ಪೇಪರ್‌ನೋರು[…] ಯಾರ್ನು ಬುಡದಂಗೆ ನಯಸ್ಸಾಗಿ ಹಿಡದಾಕ್ತರೆ. ಅಂ[…] ದ್ಯಾವೇಗೌಡುನ್ನು ಹಿಡುದ್ರು."

"ಆದ್ರೆ ಕುಮಾರಸ್ವಾಮಿ ಬಗ್ಗಿಲವಂತೆ ಕಂಡ್ಯ."

"ಅಲ್ಲಿಗೆ ಅವರಪ್ಪ ಬಗ್ಗಿದ್ದ ಅಂದಂಗಾಯ್ತಲ್ವೆ?"

"ಅಲ್ಲಿಗೇ ಬತ್ತಪ್ಪ ಇವುನಾಡೊ ಮಾತು."

"ಅಂತೂ ಅಪ್ಪ ಮಕ್ಕಳ ಟೆಕ್ನಿಕಲ್ಲು ನಯಸ್ ಕಂಪ[…] ಬಾಗಲಿಗೆ ಸಿಗಾಯ್ಕಂಡಾಗ್ಯದೆ ಬುಡಿಸಿಗಳದ್ಯಂಗೇ ಅಂತ.[…]"

"ಅದ್ಕೆ ಕಣೋ, ದ್ಯಾವೇಗೌಡ್ರು ಪೈಲು ತಗಂಡ[…] ಈ ರಸ್ತೆನೆ ಬ್ಯಾಡ ಅಂತ ಹೋರಾಡಕ್ಕೆ ಡೆಲ್ಲಿಗೋದನಂತೆ[…]" ಎಂದ ಉಗ್ರಿ ಕಾರಿಡಾರ್ ಹಗರಣವನ್ನು ವಿಸ್ತಾರವಾ[…] ಮಾತನಾಡಲು ತಯಾರಾಗುವಾಗ ಕಲಕಪ್ಪ,

"ಅಕ್ಕಾವರ ನಾ ಬರತೇನ್ರಿ. ಪೊಲಿಟಿಕ್ಸ್ ಮಾತಾಡು[…] ಮಂದಿ ಕೂಡಿ ನಾ ಟಾಳೊತ್ತು ನಿಂದರಂಗಿಲ್ಲ" ಎಂದು[…] ಹೊರಟ.

" !?"

–ಬಿ. ಚಂದ್ರೇಗೌಡ

Zero Hour ಮುನ್ನಿ

1. **ಈ ಚಿತ್ರದ ಅರ್ಥ?**



a) ಭೂರೋಗಿ ಸಚಿವ ಅಶೋಕ್ ತಾನು ನುಂಗಲಿರುವ 1200 ಕೋಟಿ ಆರಣ್ಯ ತೋರಿಸುತ್ತಿದ್ದಾನೆ

b) ಬೆಂಗಳೂರು ಅಭಿವೃದ್ಧಿಗಾಗಿ ಸಿ.ಎಂ. ಜೊತೆ ಆರ್. ಅಶೋಕ್ deep ಚರ್ಚೆಯಲ್ಲಿದ್ದಾನೆ

c) ಇಬ್ಬರು ಭೂರೋಗಿಗಳ ಮುಂದಿನ ಸ್ಕೆಚ್

d) a) ಮತ್ತು b) ಸರಿ

e) a) ಮತ್ತು c) ಸರಿ

2. **ರಾಖಿ ಸಾವಂತ್‌ಳಿಗಾಗಿ ಸೀರೆಗಳನ್ನು ಸಂಗ್ರಹಿಸುವ ಚಳವಳಿಯನ್ನು ಬಿಜೆಪಿಗಳು ಹಮ್ಮಿಕೊಂಡಿದ್ದಾರೆ. ಏಕೆ?**

a) ಚೆಡ್ಡಿಗಳ ಬುದ್ಧಿ ಮೊಣಕಾಲು ಕೆಳಗೆ

b) ರಾಖಿಗೆ ಸೀರೆ ತೊಡಿಸಿ ಹೊಕ್ಕಳು ನೋಡುವಾಸೆ ರಾಮಭಕ್ತರಿಗೆ

c) ಕೆಲಸಗೇಡಿ ಚೆಡ್ಡಿಗಳು ಇಟ್ಟಿಗೆ, ಸೀರೆ, ಬ್ರಾಗಳನ್ನು ಸಂಗ್ರಹಿಸುತ್ತ ಹಾಳಾಗಿ ಹೋಗ್ಲಿ ಬಿಡಿ

d) ಮಹಾಜನ್ ಡ್ರಗ್ಸ್‌ನಲ್ಲಿ ಮುಳುಗಿದರೂ ನಡೆಯುತ್ತೆ... ರಾಖಿ ಮಾತ್ರ ಡ್ಯಾನ್ಸ್ ಶೋ ಕೊಡಬಾರದೆಂಬ ಚೆಡ್ಡಿಗಳ ತಿಕ್ಕಲುಬುದ್ಧಿ ತೋರಿಸುತ್ತೆ

3. **"ವಾಟ್ ಎ 'ನೈಸ್' ಸ್ಟ್ರೈಟ್‌ಫೈಟ್ ಫಾರ್ ಲ್ಯಾಂಡ್ಸ್" ಎಂಬುದರ ಅರ್ಥ?**

a) ದಾಯಾದಿಗಳು ಆಸ್ತಿ ಪಾಲಿಗಾಗಿ ಬೀದಿಯಲ್ಲಿ ಬಡಿದಾಡುವುದು

b) ಭೂಮಿಗಾಗಿ ಬಕಾಸುರ ಅಶೋಕ್ ಖೇಣಿ ಜೊತೆ ಗುದ್ದಾಡಲು ಸರ್ಕಾರವನ್ನೇ ಬೀದಿಗೆ (ಕಾರಿಡಾರ್‌ಗೆ) ತಂದ ಗೌಡರು!

c) ಹೈವೆಯಲ್ಲಿ ಹಲ್ಕಟ್‌ಗಿರಿ

d) ಭೂದಾನ ಚಳವಳಿಗೆ ಮತ್ತೆ ಚಾಲನೆ!

4. **ರವಿಚಂದ್ರನ್‌ರ 'ಬ್ರಾಹ್ಮಣ' ಚಿತ್ರದಲ್ಲೇನಿರುತ್ತೆ?**

a) ಬ್ರಾಹ್ಮಣಶಾಹಿ ವಿರೋಧಿ ಭಾವನೆ

b) ಬ್ರಾಹ್ಮಣ ಭಟ್ಟಂಗಿತನ

c) ಇನ್ನೇನಿರುತ್ತೆ... ಅದೇ ಬ್ರಾ ಕೆಳಗಿನ ಸೊಂಟ ತೋರಿಸುವ ಬುದ್ಧಿ

d) ಬ್ರಾಹ್ಮಣನೊಬ್ಬನ ದುರಿಟ್ಟು ಮೀಸಲಾತಿಯಿಂದ ನಾಶವಾಯ್ತು ಎಂಬ ಸಂದೇಶ

5. **ಈ ಚಿತ್ರದಲ್ಲಿರುವವರ ಉದ್ದೇಶವಾದರೂ ಏನು?**



a) ಪೆದ್ದುಗಳ ತರಹ ನೋಡ್ತಾ ಇವೆ ಬಿಡಿ

b) ವಿಜ್ಞಾನ, ತಂತ್ರಜ್ಞಾನಕ್ಕೆ ಪ್ರಾಮುಖ್ಯತೆ ಕೊಡುವುದು

c) ಟ್ರೆಜರಿ ಕೊಳ್ಳೆ ಹೊಡೆದಾದ ಮೇಲೆ ಕರ್ನಾಟಕವನ್ನೇ ಭಸ್ಮ ಮಾಡುವ ತಯ್ಯಾರಿ

d) ಮಕ್ಕಳಾಟ


ಉತ್ತರಗಳು 1. e 2. c 3. b 4. c 5. c

ರೂಪಸಿಯಾಗಿರುವ ಕೆಲಸ ಬೇಸರವು -ಬೋದಿಲೇರ್

ಜೀವನದ ಸಂಜೆ

ಮುಪ್ಪು... ಎಲ್ಲರೂ ಭಯಪಡುವ ಮುಪ್ಪು ಮತ್ತು ಸಾವು. ಹಣ್ಣಿನಂತೆ ನೆಲಕ್ಕೆ ಉದುರಿ ನೆಲದಲ್ಲಿ ಕರಗಿ ಹೋಗಲಾರದ ಮನುಷ್ಯ ಕಳವಳಗೊಳ್ಳುತ್ತಾನೆ. ಮುಪ್ಪು ಅನೇಕರನ್ನು ಕುರೂಪಗೊಳಿಸುತ್ತದೆ. ದುರ್ಬಲಗೊಳಿಸಿ ಎಲ್ಲರ ತಾತ್ಸಾರ, ನಿರ್ಲಕ್ಷ್ಯಕ್ಕೆ ಗುರಿ ಮಾಡುತ್ತದೆ. ಆದರೆ ಎಲ್ಲೋ ಕೆಲವರು ಮುಪ್ಪನ್ನೂ ಅರಗಿಸಿಕೊಳ್ಳುತ್ತಾರೆ; ಮಧ್ಯಾಹ್ನದ ಪ್ರಖರತೆಯದು ಒಂದು ಚೆಂದವಾದರೆ, ಸಂಜೆಯ ಬಣ್ಣ, ತಂಪು, ಪ್ರಶಾಂತತೆ ಇನ್ನೊಂದು ಚೆಂದ. ಹರಯದಲ್ಲಿ ಆಕರ್ಷಕನಾಗಿದ್ದ ಮನುಷ್ಯ ಸಂಧ್ಯಾಕಾಲದಲ್ಲಿ ಇನ್ನೂ ಆಕರ್ಷಕನಾಗುತ್ತಾನೆ. ಜಾನ್ ಗಿಲ್‌ಗುಡ್ ಬಗ್ಗೆ ನೀವು ಕೇಳಿರಬಹುದು.


ಗಿಲ್‌ಗುಡ್ ಈಗ 84 ವರ್ಷದ ನಟ. ಸುಮಾರು ಎಪ್ಪತ್ತು ವರ್ಷದಿಂದ ರಂಗಭೂಮಿ, ಚಲನಚಿತ್ರಗಳಲ್ಲಿ ನಟಿಸಿದವನು. ಶೇಕ್ಸ್‌ಪಿಯರನ ಹ್ಯಾಮ್ಲೆಟ್, ಶೈಲಾಕ್ ಪಾತ್ರಗಳಿಂದ ಅತ್ಯಾಧುನಿಕ ಪಾತ್ರಗಳಲ್ಲಿ ವಿಜೃಂಭಿಸಿದ ಕಲಾವಿದ. ಈಗ ಕೂಡ ಅತ್ಯುತ್ತಮ ಪಾತ್ರ ಈತನಿಗೆ ದೊರೆಯುತ್ತಿವೆ. ಈತನ ಧ್ವನಿ ತನ್ನ ಸೆಡವು ಕಳೆದುಕೊಂಡಿದೆ; ಆದರೆ ಅದಕ್ಕೆ ವಿಚಿತ್ರ ಮಾಂತ್ರಿಕತೆ ಬಂದಿದೆ.



ಚಲನೆ ತನ್ನ ಚುರುಕು ಕಳೆದುಕೊಂಡಿದೆ; ಆದರೆ ಈತನ ಈಗಿನ ನಡಿಗೆಯಲ್ಲಿ ಪರಿಪಕ್ವತೆ ಇದೆ. ಅಭಿನಯಕ್ಕೆ ಅನುಭವದ ಪರಿಪಾಕ ಸೇರಿಕೊಂಡಿದೆ. ಪ್ರೇಕ್ಷಕರಲ್ಲಿ ಈತನ ಬಗೆಗಿನ ನೆನಪು, ಇವತ್ತಿನ ಈತನ ಕಲೆ ಎಲ್ಲವೂ ಮಿಲನಗೊಂಡು ಅಲೌಕಿಕ ಸೌಂದರ್ಯ ಈತನ ವ್ಯಕ್ತಿತ್ವದಲ್ಲಿ ಕಾಣಿಸಿಕೊಳ್ಳುತ್ತದೆ. ಕಣ್ಣು ಮಿಟುಕಿಸದೆ ಈತನನ್ನು ನೋಡಬೇಕೆನ್ನಿಸುತ್ತದೆ.

ಹಾಗೆಯೇ ಈತನ ಮುಪ್ಪಿನ ಮರೆವು ಕೂಡ. ರಿಚರ್ಡ್ ಬರ್ಟನ್ ಎಂಬ ನಟ ಪ್ರತಿಭಾವಂತನಾಗಿದ್ದರೂ ಅವಾಂತರಗಳಲ್ಲಿ ಮುಳುಗಿದ್ದ. ಇವನು ಎಲಿಜಬೆತ್ ಟೇಲರ್‌ಳನ್ನು ಪ್ರೇಮಿಸಿ, ಮದುವೆಯಾಗಿ, ಬೇರ್ಪಟ್ಟು, ಮತ್ತೆ ಒಂದಾಗಿ ಸುಟ್ಟು ಹೋಗುತ್ತಿದ್ದುದನ್ನು ಗಿಲ್‌ಗುಡ್ ಕೇಳಿದ್ದ. ಒಮ್ಮೆ ಎಲಿಜಬೆತ್ ಟೇಲರ್ ಸಿಕ್ಕಾಗ ಗಿಲ್‌ಗುಡ್ ತಾನು ಯಾರ ಹತ್ತಿರ ಮಾತಾಡುತ್ತಿದ್ದೇನೆಂಬುದನ್ನೇ ಮರೆತು ಸತ್ಯ ಹೇಳಿದ, "ಆ ಬರ್ಟನ್ ಎಂಬ ಜಾಣ ಹುಡುಗ ಅದ್ಯಾವಳೋ ನಟಿಯ ಬಲೆಗೆ ಬಿದ್ದು ಹಾಳಾಗಿ ಹೋಗ್ತಿದಾನಂತೆ...."

ಈತನಂಥವರ ಮುಪ್ಪಿನ ಮರೆವು ಕೂಡ ಸ್ವಾರಸ್ಯಕರ. ■



ಏಪ್ರಿಲ್ 28, 1985

ಮಾನವೀಯತೆ ಬೇಕೆ?

ಅದೊಂದು ಚರ್ಚೆ. ಇ.ಎಂ. ಫಾರ್‌ಸ್ಟರ್ ಹೆಸರನ್ನು ನೀವು ಕೇಳಿರಬಹುದು. 'ಪ್ಯಾಸೇಜ್ ಟು ಇಂಡಿಯಾ' ಎಂಬ ಕಾದಂಬರಿ ಬರೆದವರು. ಈತ ಪ್ರಖ್ಯಾತ ಬಿಡಿ ಮಾತುಗಾರರಾಗಿದ್ದರು ಕೂಡ. ಒಮ್ಮೆ ಇಂಗ್ಲೆಂಡಿನ ಪೋಲೀಸ್ ಅಧಿಕಾರಿಯ ಜೊತೆ ಚರ್ಚೆ ನಡೆದಿತ್ತು, ಫಾರ್‌ಸ್ಟರ್ ಮೃದುಸ್ವಭಾವದ, ಉದಾರ ರಾಜಕೀಯ ನಿಲುವಿನ ವ್ಯಕ್ತಿ, ಪೋಲೀಸರ ಗುಣ ಅವರಿಗೆ ಚೆನ್ನಾಗಿ ಗೊತ್ತಿತ್ತು. ತಮ್ಮ ಮಿತ್ರರೇ ಆಗಿದ್ದ ಪೋಲೀಸ್ ಮುಖ್ಯಸ್ಥನನ್ನು ಯಥಾಪ್ರಕಾರದ ಪ್ರಶ್ನೆ ಕೇಳಿದರು; "ನಿಮ್ಮ ಪೋಲೀಸ್ ಇಲಾಖೆ ಮಾನವೀಯವಾದೀತು ಅನ್ನಿಸುತ್ತದೆಯೇ?"



ನಿಷ್ಠುರವಾದಿಯಾದ ಪೋಲೀಸ್ ಅಧಿಕಾರಿ ಉತ್ತರಿಸಿದ, "ಇಲ್ಲ, ಮಾನವೀಯವಾಗುವುದಿಲ್ಲ, ಆಗಕೂಡದು. ಪೋಲೀಸರ ಕೆಲಸ ನಗುನಗುತ್ತ ಅಥವಾ ಕಣ್ಣೀರು ಸುರಿಸುತ್ತ ಓಡಾಡುವುದಲ್ಲ, ಕಾನೂನು ರಕ್ಷಿಸುವುದು, ಅದಷ್ಟೂ ಯಂತ್ರದಂತೆ ವಸ್ತುನಿಷ್ಠವಾಗಿರುವುದು. ಪೋಲೀಸರನ್ನು ದೊಂಬಿಯಾದರೆ ಕರೆಯುತ್ತೀರಿ; ಕಾನೂನು ಮುರಿದುಬಿದ್ದರೆ ಪೋಲೀಸ್ ನಿಮಗೆ ಬೇಕು. ಅಲ್ಲಿ ಆತ ಕತೆ ಕೇಳಲು ಹೋಗುವುದಿಲ್ಲ, ಪರ ಅಥವಾ ವಿರೋಧವಾಗಿರುವುದು ಅವನಿಗೆ ಸೇರಿದ್ದಲ್ಲ. ನಿರ್ಜೀವ ವಸ್ತು ಎಂಬಂತೆ ವರ್ತಿಸಿ ಶಾಂತಿಯನ್ನು ತರುವುದು ಅವನ ಕರ್ತವ್ಯ, ನೀವು ತಿಳಿದಿರುವಂತೆ ಮಾನವೀಯವಾಗುವುದಲ್ಲ; ಹಾಗೆ ಆಗುವುದಿಲ್ಲ ಎಂದು ಆಶಿಸುತ್ತೇನೆ!"

ಎಂಥ ಬೆಚ್ಚಿಬೀಳಿಸುವ ಉತ್ತರ! ಇಲ್ಲಿಯ ಭ್ರಷ್ಟತೆ, ಅಲ್ಲಿಯ ಪ್ರಾಮಾಣಿಕತೆ ಬಿಟ್ಟರೆ ಎಲ್ಲೆಲ್ಲೂ ಪೋಲೀಸರು ಒಂದೇ ಥರ. ಅಲ್ಲಿ ತಮ್ಮ ಕರ್ತವ್ಯ ಕುರಿತು ನಿಷ್ಠುರವಾಗಿ ಮಾತಾಡುವ ಶಕ್ತಿ ಅವರಿಗಿದೆ; ಇಲ್ಲಿ ಪೋಲೀಸರ ಮಾನವೀಯತೆಯ ಬಗ್ಗೆ ಮಾತಾಡುತ್ತಲೇ ನೀಚವಾಗಿರುವುದು ಸರ್ವೇಸಾಮಾನ್ಯವಾಗಿದೆ.

ಮೇಲಿನ ಪೋಲೀಸ್ ಉವಾಚಕ್ಕೆ ಫಾರ್‌ಸ್ಟರ್ ಅವರಲ್ಲಿ ಉತ್ತರವಿರಲಿಲ್ಲ. ✸

ದಾಕ್ಷಿಣ್ಯಕ್ಕೆ ಬಸಿರಾಗೋದು ಎಂದರೇನರ್ಥ?



ಪೂರ್ಣಿಮಾ.
ಹಗರಿಬೊಮ್ಮನಹಳ್ಳಿ
ಒಬ್ಬ ಉತ್ತಮ ಶಿಕ್ಷಕ ಸಾವಿರ ಅರ್ಚಕರಿಗೆ ಸಮವಂತೆ; ಒಬ್ಬ ಅರ್ಚಕ.....?
* ಸಾವಿರ ವಂಚಕರಿಗೆ ಸಮ.

ಕೆ. ಶ್ರೀನಿವಾಸ್. ಮಂಡ್ಯ
'ಸೆಂಟಿಮೆಂಟಲ್' ಚಿತ್ರಕ್ಕೂ 'ಮೆಂಟಲ್' ಚಿತ್ರಕ್ಕೂ ಇರುವ ವ್ಯತ್ಯಾಸ?
* 'ಸೆಂಟ್' ಪರ್‌ಸೆಂಟ್ 'ಮೆಂಟಲ್' ಆಗಿರುವ 'ಗಂಡ-ಹೆಂಡತಿ'ಯ ಸ್ತ್ರೀವತ್ಸನನ್ನು ನೋಡಿ ಉತ್ತರಾನೇ ಹೊಳೀತಿಲ್ಲ!

ಬಸವರಾಜ್ ಬೆಸ್ತರ್. ಹರಪನಹಳ್ಳಿ
ಪರೀಕ್ಷಾ ಫಲಿತಾಂಶದಲ್ಲಿ ಪ್ರತಿ ಬಾರಿಯೂ ಬಾಲಕಿಯರದೇ ಮೇಲುಗೈಯಾಗಲು ಕಾರಣ?
* ಅವರಿಗೆ 'ಬಾಲ-ಕಿ'ತ್ತಿರುವುದರಿಂದಾಗಿ ಅದನ್ನು ಬಿಚ್ಚಿಲ್ಲ ಅಲ್ವಾ, ಅದಕ್ಕೆ.

ಕೆ. ಪ್ರಾಣೇಶ್‌ರಾವ್.
ಹಗರಿಬೊಮ್ಮನಹಳ್ಳಿ
'ಫನಾ' (ನಾಶ) ಚಿತ್ರ ಗುಜರಾತಿನಲ್ಲಿ ಬಿಡುಗಡೆಯಾಗಬೇಕಾದರೆ ಅದರ ಹೆಸರನ್ನು ಏನಂತ ಬದಲಿಸಬೇಕು?
* 'ಕೇಸರಿ ನಶೆ' ಎನ್ನಬಹುದೇನೋ.

ಮಂಚಾಲಿ ಗುರುರಾಜಚಾರು.
ಬಳ್ಳಾರಿ
ಅತ್ತೆ ಸೊಸೆ ಸೇರಿದರೆ ಜಗಳ, ಮಾವ ಅಳಿಯ ಸೇರಿದರೆ?
* ಗುಂಡು ಪಾರ್ಟಿಯ ಗಂಡಾಂತರ!

ನಾರಾಯಣಜನವಾಡೆ.
ಬೆಳಗಾವಿ
ಸ್ತ್ರೀಯರಿಗೆ ಕುಂಕುಮ ಅರಿಶಿಣ ಮುಖ್ಯವೋ? ಅಥವಾ ಚಿನ್ನದ ಆಭರಣ ಮುಖ್ಯವೋ?
* ಎರಡೂ ಮುಖ್ಯವಲ್ಲ ಎಂದು ತೋರಿಸಿರುವ 'ಗಂಡ-ಹೆಂಡತಿ'ಯ ಸ್ತ್ರೀವತ್ಸನನ್ನು ಕೇಳಿ.

ಬಿ.ಎಸ್. ಇಮ್ಮಾನುವೇಲ್. ಮಸರಕಲ
ಚೆನ್ನಿಗಪ್ಪ 'ಗಣಿಗಾರಿಕೆ' ಮುಂಚೆ 'ತೋಟಗಾರಿಕೆ' ಏನಾದರೂ ಮಾಡಿದ್ದರೆ?
* ಆಡು ಗ್ರಾನೈಟ್ ತಿನ್ನುತ್ತೆ ಅಂತ ಚೆನ್ನಿ ನೋಡಿ ಗೊತ್ತಾಗುತ್ತದೆ.


ಆ.ರಾ. ಮಂಜುನಾಥ.
ಗೆದರೆ
ಪ್ರೇಮಿಗೂ, ಕಾಮಿಗೂ ಇರುವ ವ್ಯತ್ಯಾಸ?
* ಕೃಷ್ಣ ಪರಮಾತ್ಮ ಎರಡೂ ಆಗಿದ್ದಾ ಅಂತಾರಲ್ಲಾ?

ಪಿ.ಎನ್. ಶ್ರೀವತ್ಸ.
ಬೆಂಗಳೂರು
ಲತಾಂಗಿಯರು ನೆನೆದರೇ ಚೆನ್ನಿರುತ್ತಾದರೂ, ಮಲ್ಯರ ಕಿಂಗ್‌ಫಿಷರ್ ಏರ್‌ಲೈನ್ಸ್ ಮಳೆಗಾಲದಲ್ಲಿ ಪ್ರಯಾಣಿಕರಿಗೆ ಛತ್ರಿಯನ್ನು ಪುಗಸಟ್ಟೆ ಕೊಡುತ್ತದಂತಲ್ಲಾ....?!
* ಪರಮ 'ಛತ್ರಿ'ಯಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ?

ಜಿ.ಡಿ.ಎಲ್. ಲಕ್ಷ್ಮಿ. ದೊಡ್ಡಬಳ್ಳಾಪುರ
ಹೆಣ್ಣಿಗೆ ಸೋಬನ ಅಂದರೆ ಸ್ವರ್ಗಕ್ಕೆ ಸಮಾನ. ಗಂಡಿಗೆ?
* DNA ಪರೀಕ್ಷೆ ನರಕಕ್ಕೆ ಸಮಾನ.

ಕುಮಾರಸ್ವಾಮಿ. ಬಿಳಿದಾಳೆ
ಶಾಸಕ ಯೋಗೀಶ್ವರ್ ಈಗ ಉತ್ತರ ಧ್ರುವದಲ್ಲಿದ್ದಾನೋ, ದಕ್ಷಿಣ ಧ್ರುವದಲ್ಲಿದ್ದಾನೋ?
* ತ್ರಿಶಂಕು ನರಕದಲ್ಲಿರುವುದಂತೂ ಗ್ಯಾರಂಟಿ.

ರವೀಂದ್ರನಾಥ ಶಿ. ಯದಹಳ್ಳಿ, ಇಲಕಲ್ಲ
ಜೀವಿಗಳು ಬದುಕಲು ಗಾಳಿ, ನೀರು, ಆಹಾರ ಮುಖ್ಯ. ರಾಜಕೀಯ ಸೇರಲು....?
* ಅವುಗಳನ್ನು ಮಾರುವ ಕಲೆ ಗೊತ್ತಿರುವುದೇ ಅತಿಮುಖ್ಯ.



ಪುಷ್ಪ. ಬೆಂಗಳೂರು
ಚಿಲುವನ 'ರೋಡ್ ರಾಬರಿ' ನೋಡಿ, ಕುಮಾರ 'ಹೆದ್ದಾರಿ ರಾಬರಿ'ಗಿಳಿದನೇ?
* ಮಂತ್ರಿಗೂ, ಮುಖ್ಯಮಂತ್ರಿಗೂ ಅಷ್ಟು ವ್ಯತ್ಯಾಸವಾದರೂ ಬೇಡವೇ?!

ಬಿ.ಬಿ. ಶಿವರುದ್ರಪ್ಪ. ಶಿವಮೊಗ್ಗ
'ದೆವ್ವಗಳು ವಾಸಿಸುವ ಸ್ಥಳ' (DVS)ದಲ್ಲಿ ಈಗ ದೇವತೆಗಳು ವಾಸಿಸಬಹುದೇ?
* ದೇವತೆಗಳ ಬಗ್ಗೆ ಗೊತ್ತಿಲ್ಲ, ಆದರೆ ಚಿಕ್ಕ ದೆವ್ವಗಳನ್ನಂತೂ ತೊಲಗಿಸಲಾಗಿದೆ.

ಬಿ. ಚಂದ್ರೇಗೌಡ. ಬೆಂಗಳೂರು
ದಾಕ್ಷಿಣ್ಯಕ್ಕೆ ಬಸಿರಾಗೋದು ಎಂದರೇನರ್ಥ?
* NICE ಕಂಪನಿಯ ಖೇಣಿ ಪರವಾಗಿ ವಕಾಲತ್ತು ವಹಿಸಿದ ಪತ್ರಕರ್ತರನ್ನು ಕೇಳಿ.

ಬಹುಮಾನಿತ ಪ್ರಶ್ನೆ

ಧೀ ತುಂಟಿ!

ಮಹಿಳಾ ಸಂಘದಲ್ಲಿ ಗಾಢವಾದ ಚರ್ಚೆ ನಡೆಯುತ್ತಿತ್ತು. ಪುರುಷನ ದಬ್ಬಾಳಿಕೆಯನ್ನು ಮುರಿಯಲು ವಿವಿಧ ಸಲಹೆಗಳು ಬಂದವು, ಆದರೆ ಒಮ್ಮತ ಮೂಡಲಿಲ್ಲ.

ಅಧ್ಯಕ್ಷತೆ ವಹಿಸಿದ್ದ ಹೆಣ್ಣು ನುಡಿದಳು: 'ನಮ್ಮಲ್ಲಿ ಒಮ್ಮತವಿಲ್ಲ, ಒಗ್ಗಟ್ಟಿಲ್ಲ, ಎಲ್ಲಿಯವರೆಗೆ ನಮ್ಮಲ್ಲಿ ಬಿರುಕು ಇರುತ್ತೋ, ಅಲ್ಲಿಯವರೆಗೆ ಈ ಗಂಡಸು ನಮ್ಮ ಮೇಲೆ ಸವಾರಿ ಮಾಡ್ತಲೇ ಇರ್ತಾನೆ!'



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಈ ವಾರದ ಪ್ರಶ್ನೆ:

ಖೇಣಿ ಟೌನ್‌ಶಿಪ್‌ಗೂ, ಕುಮಾರಸ್ವಾಮಿ ಟೌನ್‌ಶಿಪ್‌ಗೂ ವ್ಯತ್ಯಾಸ ಏನು?

ಕಳೆದ ವಾರದ ನಮ್ಮ ಪ್ರಶ್ನೆ: ಫುಟ್‌ಬಾಲ್ ಆಟಗಾರ ರೊನಾಲ್ಡೊ ನಮ್ಮ ಸಚಿನ್‌ಗಿಂತಾ ಗ್ರೇಟಾ?
ನಿಮ್ಮ ಉತ್ತರ: "ಸ್ಟ್ರೀಕ್ ಸಿಂಡ್ರೋಮ್" ಸಚಿನ್‌ಗಿಂತಾ "ಗೋಲ್ ಸಿಂಡ್ರೋಮ್" ರೊನಾಲ್ಡೊ ಗ್ರೇಟ್.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಕೆ.ಶ್ರೀನಿವಾಸ್, ಮಂಡ್ಯ

ಸೌಂದರ್ಯ ಎನ್ನುವುದು ಕಣ್ಣಿನ ಸುತ್ತಲ್ಲ; ಕಣ್ಣಿಗೂ ಕಣ್ಣಾಗಿರುವ ಮನಸ್ಸಿನ ಸುತ್ತು -ಬೇಂದ್ರೆ



ಎಕ್ಕುಟ್ಟಿ ಗೋವಿಂದರಾಜನಗರಕ್ಕೆ ಕೌನ್ಸಿಲರ್ ಕೃಷ್ಣಪ್ಪನೇ ಕಂಟಕ



ಕೃಷ್ಣಪ್ಪನವರ ನಿರ್ಮಾಣ ಹಂತದ ಭವ್ಯ ಬಂ



ಗುಡ್ಡಣ್ಣ ಕಾಂ

ಮೊನ್ನೆ ಬಿದ್ದ ಮಾಮೂಲಿ ಮಳೆಗೆ ಮಾಗಡಿ ರೋಡ್ ರಂಗನಾಥಪುರದ ಮುನ್ನೂರು ಮನೆಗಳಿಗೆ ನೀರು ನುಗ್ಗಿ ಜನ ಗೋಳಾಡುತ್ತಿದ್ದರೆ, ಕೌನ್ಸಿಲರ್ ಜಿ. ಕೃಷ್ಣಪ್ಪ ಮಗನನ್ನು ಫಾರಿನ್ ಟೂರಿಗೆ ಏರೋಪ್ಲೇನ್ ಹತ್ತಿಸಿ ಟಾಟಾ ಮಾಡುತ್ತಿದ್ದರಂತೆ!

ಇತ್ತೀಚೆಗೆ ಸುರಿದದ್ದು ದೊಡ್ಡ ಮಳೆಯೇನಲ್ಲ, ಅಷ್ಟಕ್ಕೇ ಗೋವಿಂದರಾಜನಗರ ವಾರ್ಡಿನ ರಸ್ತೆಗಳಿಗೆ ಹಾಕಿದ್ದ ಟಾರೆಲ್ಲ ಸಾಕ್ಷಿ ಕೂಡ ಉಳಿಯದಂತೆ ಕೊಚ್ಚಿ ಹೋಗಿದೆ. ಮೋರಿ ನೀರು ಮನೆಗೆ ನುಗ್ಗಿದ್ದು, ಕೆಲ ರಸ್ತೆಗಳಂತೂ ಅಕ್ಷರಶಃ ಚರಂಡಿಯಾಗಿದ್ದು, ಸದ್ಯ ಬಾಳಯ್ಯನ ಕೆರೆ ತುಂಬ ಹಂದಿಗಳೇ ಇಟ್ಟಾಡುತ್ತಿರುವುದು ಬೆಂಗಳೂರಿನ ಮಟ್ಟಿಗೆ ಸುದ್ದಿಯಲ್ಲದಿರಬಹುದು. ಕನಿಷ್ಠ ಕೌನ್ಸಿಲರ್ ಕೃಷ್ಣಪ್ಪನಿಗಾದರೂ ನಾಚಿಕೆಯಾಗದಿದ್ದರೆ ಹೇಗೆ?

ಆದರೆ ನಾಚಿಕೆ-ಮಾನ-ಮರ್ಯಾದೆ ಎಂಬ ಮೂರನ್ನೂ ಬಿಟ್ಟೇ ಗೋವಿಂದರಾಜನಗರದ ಕೌನ್ಸಿಲರ್ ಪಟ್ಟಕ್ಕೇರಿದ ಜಿ. ಕೃಷ್ಣಪ್ಪನನ್ನು ಜನ ಕಮಿಷನ್ ಕೃಷ್ಣಪ್ಪ ಅಂತಾರೆ. ಈತನಿಗೂ ಮುನ್ನ ಗೋವಿಂದರಾಜನಗರಕ್ಕೆ ಸೋಮಣ್ಣನ ಬಂಟ ಚನ್ನಪ್ಪ ಕೌನ್ಸಿಲರ್ ಆಗಿದ್ದ. ಇವತ್ತೇನಾದರೂ ಅಲ್ಲಲ್ಲಿ ಟಾರಿನ ಪಳೆಯುಳಿಕೆಗಳಿದ್ದರೆ ಅದು ಚನ್ನಪ್ಪನ ದಯೆಯೇ ಹೊರತು ಕೃಷ್ಣಪ್ಪನದಲ್ಲ. ಇಲ್ಲಿಗೆ ಆರು ತಿಂಗಳ ಹಿಂದೆ ಕೃಷ್ಣಪ್ಪನೇ ನಿಂತು ರಂಗನಾಥಪುರದ ಎರಡನೇ ಮುಖ್ಯರಸ್ತೆಗೆ ಒಂದೂವರೆ ಕೋಟಿ ವೆಚ್ಚದಲ್ಲಿ ಟಾರ್ ಹಾಕಿಸಿದ್ದ. ಕಾವೇರಿಪುರದ ಒಂದನೇ ಮುಖ್ಯರಸ್ತೆ ಮತ್ತು ಮುನೇಶ್ವರ ಬ್ಲಾಕ್‌ನ ಐದು ಅಡ್ಡರಸ್ತೆಗಳಿಗೆ ಕೊನೆಗೂ ಟಾರ್ ಬಿದ್ದಿದ್ದನ್ನು ಕಂಡು ಜನ ಖುಷಿಪಟ್ಟಿದ್ದರು. ಅದೇನು ಕರ್ಮವೋ ಮೊನ್ನೆ ಬಿದ್ದ ಮಳೆಗೆ ಸಾರಿಸಿದ ಸಗಣಿ ತೊಳೆಕೊಂಡು ಹೋದಂತೆ ಹಾಕಿದ ಟಾರೆಲ್ಲ ಗುಡಿಸಿ ಗುಂಡಾಂತರವಾಯಿತು.

ಗೋವಿಂದಾಜನಗರವೆಂಬ ಏರಿಯಾದ ದುರಂತಕ್ಕೆ ಇದಕ್ಕಿಂತ ಬೇಕೆ? ಅಂದಹಾಗೆ ಬೆಂಗಳೂರಿನ ಕೌನ್ಸಿಲರ್ ಒಬ್ಬ ಕೇವಲ ನಾಲ್ಕೂವರೆ ವರ್ಷದಲ್ಲಿ ಎಷ್ಟು ಖಮಾಯಿಸಬಲ್ಲ?

ಹೀಗೇ ಮಳೆ ನೀರು ಮನೆಗಳಿಗೆ ನುಗ್ಗಿದ್ದಕ್ಕೂ ಕೌನ್ಸಿಲರ್ ಒಬ್ಬನ ಖಮಾಯಿಗೂ ಕೃಷ್ಣಪ್ಪನೇ ಲಾಯಕ್ಕಾದ ಉದಾಹರಣೆಯಂತಿದ್ದಾನೆ. ಕಳೆದ ಪಾಲಿಕೆ ಚುನಾವಣೆಗೂ ಮುನ್ನ ಜನತಾದಳದ ನಾಯಕ ಸಿಂಧ್ಯಾನ ಬಾಲಬಡಕನಂತಿದ್ದ ಕೃಷ್ಣಪ್ಪ ಕಂಡವರೆದುರು 'ಸಂಜೆ ಅಡಿಗೆಗೆ ಸೊಪ್ಪಿಗೇನಪ್ಪಾ ಮಾಡೋದು?' ಎಂದೇ ಹಲ್ಲುಗಿಂಜುತ್ತಿದ್ದ. ಪಾಲಿಕೆ ಚುನಾವಣೆ ಬಂದಿದ್ದೇ ತಡ ಅದೇನು ಟ್ರಿಕ್ಕು ಮಾಡಿದನೋ! ಡೀಕೇಶಿ ಪಾದಕ್ಕೆ ಬಿದ್ದು ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಬಿಟ್ಟ. ಹೇಗೂ ಸೋಮಣ್ಣನಿಗೆ ತನ್ನ ಕಾಂಗ್ರೆಸ್ ನಿಷ್ಠೆ ಮರೆಯಬೇಕಿತ್ತು. ತನ್ನ ಬಂಟ ಚನ್ನಪ್ಪನ ಬಾಯಿ ಮುಚ್ಚಿಸಿ ಗೋಸುಂಬೆ ಕೃಷ್ಣಪ್ಪನನ್ನು ಗೆಲ್ಲಿಸಿದರು.

ಸ್ಥಾನ-ಧನ ಸಿಗುತ್ತದೆಯೆಂದರೆ ಯಾರಿಗೆ ಯಾವಾಗ ಬೇಕಿದ್ದರೂ ಬೆನ್ನಿಗಿರಿಯುವುದು ಕೃಷ್ಣಪ್ಪನ ಹುಟ್ಟುಗುಣ. ಇಂಥವನು ಕೌನ್ಸಿಲರ್ ಬೇರೆ ಆಗಿಬಿಟ್ಟರೆ ಕೇಳಬೇಕೇ? ರಂಗನಾಥಪುರದ ಮಾದೇಶ್ವರ ಸ್ವಾಮಿ ರಸ್ತೆಯ ಮೋರಿ ಉಕ್ಕಿ ಇಡೀ ಏರಿಯಾದ ಮನೆಗಳಿಗೆಲ್ಲ ನೀರು ನುಗ್ಗುತ್ತಿದ್ದದ್ದನ್ನು ಕಂಡೇ ಚನ್ನಪ್ಪ ಮೇಯರ್ ಫಂಡ್‌ನಿಂದ ಎಂಬತ್ತು ಲಕ್ಷ ಮಂಜೂರು ಮಾಡಿಸಿದ್ದ. ಇನ್ನೇನು ಕಾಮಗಾರಿಗೆ ಟೆಂಡರ್ ಕರೆಯಬೇಕೆನ್ನುವಾಗಲೇ ಚುನಾವಣೆ ಬಂತು. ಗೆದ್ದು ಬಂದ ಕೃಷ್ಣಪ್ಪ ಯಾರೋ ಕಳ್ಳ ಕಂಟ್ರಾಕ್ಟರ್ ಒಬ್ಬನಿಗೆ ಕೆಲಸ ಕೊಡಿಸಿ ಅರ್ಧಕ್ಕರ್ಧ ನುಂಗಿಬಿಟ್ಟ. ಮಳೆ ಬಂದಿದ್ದೇ ತಡ ಮತ್ತಷ್ಟು ಅಧ್ವಾನವಾಗಿ ಕಳ್ಳ ಕಾಮಗಾರಿಯೆಲ್ಲ ಕೊಚ್ಚಿ ಹೋಯಿತು. ಇಡೀ ಏರಿಯಾದ ಮನೆಗಳಿಗೆ ಮತ್ತೆ ನೀರು ನುಗ್ಗಿತು.





ಬಹುಶಃ ಪಾಲಿಕೆ, ಲೋಕಾಯುಕ್ತ ಅಥವಾ ಸರ್ಕಾರದ ಗಮನಕ್ಕಿದು ಬಂದಿದ್ದರೆ ಇಂಜಿನಿಯರ್ ಮತ್ತು ಕಂಟ್ರಾಕ್ಟರ್ ಇಬ್ಬರೂ ಜೈಲು ಪಾಲಾಗಬೇಕಿತ್ತು. ಹೇಗೂ ಕಾಂಗ್ರೆಸ್ ಸರ್ಕಾರವಿತ್ತಾದ್ದರಿಂದ ಅದೇ ಮೋರಿ ಕಾಮಗಾರಿಗೆ ಕೃಷ್ಣಪ್ಪ ಮತ್ತೊಮ್ಮೆ ಒಂದೂಕಾಲು ಕೋಟಿಯ ಎಸ್ಟಿಮೇಟ್ ಮಾಡಿಸಿ ದುಡ್ಡು ಬಿಡುಗಡೆ ಮಾಡಿಸಿದ. ಒಂದೇ ಕಾಮಗಾರಿಗೆ ಎರಡೆರಡು ಬಾರಿ ದುಡ್ಡು ಮಂಜೂರಾಗಿ, ಪದೇಪದೇ ಕಾಮಗಾರಿ ನಡೆದ ಮೇಲಾದರೂ ಮೋರಿ ನೀರು ಮನೆಗಳಿಗೆ ನುಗ್ಗುವುದು ನಿಲ್ಲಬೇಕಿತ್ತು. ದುರಂತವೆಂದರೆ ಮೊನ್ನೆ ಸುರಿದ ಮಳೆಗೆ ಮತ್ತೆ ಇಡೀ ಏರಿಯಾ ಜಲಾವೃತಗೊಂಡಿದೆ. ಕೌನ್ಸಿಲರ್ ಕೃಷ್ಣಪ್ಪ ಹೊಟ್ಟೆಗೇನು ತಿನ್ನುತ್ತಾನೆ?

ಮಿಕ್ಕೆಲ್ಲಾ ಕೌನ್ಸಿಲರ್‌ಗಳು ಕಾಮಗಾರಿಯಲ್ಲಿ ಕಮಿಷನ್ ಹೊಡೆದರೆ, ಕೃಷ್ಣಪ್ಪ ಅವರೆಲ್ಲರೂ ನಾಚುವಂತೆ ತಾನೇ ಬೇನಾಮಿ ಕಾಂಟ್ರಾಕ್ಟ್ ಮಾಡುತ್ತಾನೆ. ಹಾಗೇ ಕೌನ್ಸಿಲರ್‌ನ ಬೇನಾಮಿ ಕಾಮಗಾರಿಗೆ ನಾಮಕಾವಸ್ತೆ ಕಂಟ್ರಾಕ್ಟರ್‌ಗಳಂತೆ ಬಳಕೆಯಾಗುವವನು ಕುಡುಕಾ ಮಾದೇವ. ಈತ ಕೃಷ್ಣಪ್ಪನ ಕಜ್ಜಿನ್. ಮತ್ತೊಬ್ಬ ಬೇನಾಮಿ ಕಂಟ್ರಾಕ್ಟರ್ ಗಣೇಶನೂ ಕೃಷ್ಣಪ್ಪನ ಬಂಟನೆ. ಎಚ್. ಕುಮಾರ ಎಂಬ ಇನ್ನೊಬ್ಬ ಛೇಲನ ಹೆಸರಲ್ಲೂ ಕೃಷ್ಣಪ್ಪ ಕಂಟ್ರಾಕ್ಟರಿಕೆ ನಡೆಸುತ್ತಾನೆ. ಹೆಸರು ಇವರದಾದರೂ ಬಸಿರು ಕೃಷ್ಣಪ್ಪಂದೆ.

ಈ ರೀತಿ ಬೇನಾಮಿಗಳಾಗಿ ತಲೆ ಎತ್ತಿದ ಕುಡುಕಾ ಮಾದೇವ, ಗಣೇಶ ಮತ್ತು ಕುಮಾರ ಎಂಥಾ ಜನಕಂಟರೆಂದರೆ, ಏರಿಯಾದಲ್ಲಿ ಯಾರೇ ಹೊಸ ಮನೆ ಕಟ್ಟಿಸಲಾರಂಭಿಸಿದರೆಂದರೆ ಅಲ್ಲಿಗೆ ಕುಮಾರ ನುಗ್ಗುತ್ತಾನೆ. ಪ್ಲಾನ್ ಪ್ರಕಾರ ಇಲ್ಲ, ರೋಡಿಗೆ ಕಿಟಕಿ ಬಂದಿದೆ ಎಂದು ಸುಲಿಗೆ ಮಾಡುತ್ತಾನೆ. ಆದರೆ ತಾನೇ ಗೋಮಾಳ ಕಬಳಿಸಿ, ಮೋರಿಯನ್ನೂ ಒತ್ತರಿಸಿ ಮನೆ ಕಟ್ಟಿಸಿದ್ದಾನೆ. ಕುಡುಕಾ ಮಾದೇವ ಮತ್ತು ಗಣೇಶ ಕಳ್ಳ ಕಂಟ್ರಾಕ್ಟು ಮಾಡಿಯೇ ಬಂಗಲೆಯೆಬ್ಬಿಸಿದ್ದಾರೆ.

ಇನ್ನು ಇವರೆಲ್ಲರ ಅನ್ನದಾತ ಕೌನ್ಸಿಲರ್ ಕೃಷ್ಣಪ್ಪನ ಖಮಾಯಿ ಇನ್ನೆಷ್ಟಿರಬೇಡ?

ಕಾಮಾಕ್ಷಿಪಾಳ್ಯದ ಬಸ್‌ಸ್ಟಾಂಡಿಗೆ ಹೊಂದಿಕೊಂಡಂತೆ ಅಪ್ಪ ಗುಡ್ಡಣ್ಣನ ಹೆಸರಲ್ಲಿ ಒಂದು ಕಾಂಪ್ಲೆಕ್ಸ್, ವಿಜಯನಗರದಲ್ಲಿ ಮತ್ತೊಂದು ಕಾಂಪ್ಲೆಕ್ಸ್, ಬಿ.ಟಿ.ಎಂ. ಲೇಔಟನಲ್ಲಿ ಒಂದೂವರೆ ಕೋಟಿ ಮೌಲ್ಯದ ಜಿ. ಕೃಷ್ಣಪ್ಪ ಕಾಂಪ್ಲೆಕ್ಸ್, ದೇವನಹಳ್ಳಿ ಏರ್‌ಪೋರ್ಟ್ ಪಕ್ಕ ಎಕರೆಗೆ ಒಂದು ಕೋಟಿ ಬೆಲೆಬಾಳುವ ಆರೆಕರೆ ಜಮೀನು, ರಂಗನಾಥಪುರದ 2 ನೇ ಮುಖ್ಯರಸ್ತೆಯಲ್ಲಿ ಒಂದೂವರೆ ಕೋಟಿಯ ನಿರ್ಮಾಣ ಹಂತದ ಬಂಗಲೆ ಮತ್ತು ಸಿ.ವಿ. ರಾಮನ್‌ನಗರದಲ್ಲಿ ಮತ್ತೊಂದು ಬಂಗಲೆ. ಇದಿಷ್ಟನ್ನೇ ಲೆಕ್ಕ ಹಾಕಿದರೆ ಅದೇ ಹದಿನೈದು ಕೋಟಿಯ ಸೊತ್ತಾಗುತ್ತದೆ. ಸಾಲದ್ದಕ್ಕೆ ತನ್ನ ಮಗ ಹೇಮಂತನನ್ನು ಒಂದೂವರೆ ಕೋಟಿ ಸುರಿದು ಅಮೆರಿಕದಲ್ಲಿಟ್ಟು ಓದಿಸುತ್ತಿದ್ದಾನೆ.

ಇದು ಕೌನ್ಸಿಲರ್ ಕೃಷ್ಣಪ್ಪನ ಕೇವಲ ನಾಲ್ಕೂವರೆ ವರ್ಷದ ಖಮಾಯಿ. ಇನ್ನು ಮನೆಗಳಿಗೆ ಮೋರಿ ನೀರು ನುಗ್ಗಬಾರದೆಂದರೆ ಹೇಗೆ? ಕೃಷ್ಣಪ್ಪ ಕೇವಲ ಟೆಂಡರು ನುಂಗಿ ಈ ಪಾಟಿ ಆಸ್ತಿ ಮಾಡಿಲ್ಲ, ರಂಗನಾಥಪುರದ ಬಡಪಾಯಿ ರಫೀಕ್ ಎಂಬಾತನ ಮನೆ ಧ್ವಂಸ ಮಾಡುತ್ತೇನೆಂದು ಹೆದರಿಸಿ ಆತನಿಂದ ನಾಲ್ಕು ಲ[illegible] ಕಿತ್ತಿದ್ದಾನೆ. ಬಾಳಯ್ಯನಕೆರೆ ಸಂಪಿಗೆ ಲೇಔಟನ 80x35[illegible] ಅಡಿ ವಿಶಾಲವಾದ ಅರಣ್ಯ ಭೂಮಿಗೆ ಕಾಂಪೌಂಡು ಹಾಕಿಸಿ ಕಂಡೋರಿಗೆ ಮಾರಿದ್ದಾನೆ. ಇಡೀ ಏರಿಯಾ[illegible] ತುಂಬ ಅರವತ್ತು ಅನಧಿಕೃತ ಅಪಾರ್ಟ್‌ಮೆಂಟುಗಳನ್ನು ಕಟ್ಟಲು ಬಿಟ್ಟು ಖದೀಮ ಇಂಜಿನಿಯರ್ ರಮೇಶ[illegible] ಮೂಲಕ ಲಕ್ಷಗಟ್ಟಲೇ ದೋಚಿದ್ದಾನೆ. ಇಂಥ ಅಕ್ರಮ ಅಪಾರ್ಟ್‌ಮೆಂಟುಗಳ ಪೈಕಿ ಹತ್ತರಲ್ಲಿ ಕೃಷ್ಣಪ್ಪನಿಗೆ ಗಿಫ್ಟ್ ಅಂತಲೇ ತಲಾ ಒಂದೊಂದು ಫ್ಲಾಟ್ ಬಳುವಳಿಯಾ[illegible] ಬಂದಿದೆ.

ಎಕ್ಕುಟ್ಟ ಗೋವಿಂದರಾಜನಗರಕ್ಕೆ, ಕೌನ್ಸಿಲರ್ ಕೃಷ್ಣಪ್ಪನಿಗಿಂತ ಶತ್ರು ಬೇಕೆ?

-ವರದಿಗಾ[illegible]



ರೋಣದ ಪಾಟೀಲರ ದೌಲತ್ತು ದಲಿತರ 120 ಎಕರೆ ಭೂಮಿಗೆ ಕುತ್ತು!

ಆರೋಗ್ಯ ಮಂತ್ರಿ ಆರ್. ಅಶೋಕ್‌ನ 'ಭೂ ರೋಗ'ಕ್ಕೆ ಚಿಕಿತ್ಸೆ ಕೊಡಿಸಬಹುದೇನೋ?

ರೇಷ್ಮೆ ಸಚಿವ ಕಟ್ಟಾನ ಲ್ಯಾಂಡ್ ಮಾಫಿಯಾಕ್ಕೆ ಚಟ್ಟಾ ಕಟ್ಟಬಹುದೇನೋ?

ಆದರೆ ರೋಣದ ಕೋಣಗಳೆಂದೇ ಕುಖ್ಯಾತರಾಗಿರುವ ಪಾಟೀಲ್ ಬ್ರದರ್ಸ್‌ಗಳ 'ಭೂರೋಗ'ಕ್ಕೆ ಚಿಕಿತ್ಸೆ ಇದ್ದಂತಿಲ್ಲ... ಏಕೆಂದರೆ ಈ ರೋಗ 'ಪಾಳೆಗಾರಿ' ಎಂಬ ಜೀನ್ ಮೂಲಕ ಹರಿದು ಬಂದಿದ್ದು!

'ಚೀಪ್' ಸೆಕ್ರೆಟರಿಯಾಗಿ ನಿವೃತ್ತಿಯಾಗಿ ಧಾರವಾಡ (ಉತ್ತರ) ಎಂ.ಪಿ. ಕ್ಷೇತ್ರದಲ್ಲಿ ಪಲ್ಟಿ ಹೊಡೆದ ಬಿ.ಎಸ್. ಪಾಟೀಲ್ (ಬಸನಗೌಡ), ಬಾಗಲಕೋಟೆ ಎಂ.ಪಿ. ಕ್ಷೇತ್ರದಲ್ಲಿ ಲಗಾಟಿ ಹೊಡೆದ ಆರ್.ಎಸ್. ಪಾಟೀಲ್ (ರುದ್ರಗೌಡ), ರೋಣ ತಾಲ್ಲೂಕು ಎಂಎಲ್‌ಎ ಎಲೆಕ್ಷನ್ನಿನಲ್ಲಿ ಮಣ್ಣು ಮುಕ್ಕಿದ ಜಿ.ಎಸ್. ಪಾಟೀಲ್ (ಗುರುಪಾದಗೌಡ) ಈ ಮೂವರು ಸಹೋದರರ ಆಸೆ ಅತಿಯಾದದ್ದು, ಇವರಿಗೆ ಬಿಪಿಎಲ್, ಇಸ್ನೋಸಿಸ್‌ಗಳ ಷೇರುಗಳು ಬೇಕು! ಬಳ್ಳಾರಿಯ ಅದಿರಿನ ಗಣಿಗಳಲ್ಲೂ ಪಾಲು ಬೇಕು! ಇಡೀ ರೋಣ ತಾಲ್ಲೂಕಿನ ಜಮೀನೆಲ್ಲ ಈ ಫ್ಯಾಮಿಲಿಯ ಹೆಸರಿಗೆ ಬರೆದುಕೊಡಬೇಕಂತೆ!


ಇವತ್ತು ಇಡೀ ರೋಣ ತಾಲ್ಲೂಕು ಬರ್ಬಾದ್ ಆಗಿದೆ ಎಂದರೆ ಈ ಪಾಟೀಲ್ ಕುಟುಂಬ ಸಮೃದ್ಧವಾಗಿದೆ ಎಂದೇ ಅರ್ಥ. ಮೊನ್ನೆ ಎಲೆಕ್ಷನ್ನಿನಲ್ಲಿ ಜಿ.ಎಸ್. ಪಾಟೀಲ್‌ನನ್ನು ಜನ ಮನೆಗೆ ಕಳಿಸಿದರು. ಆದರೆ ಬಿಜೆಪಿಯಿಂದ ಗೆದ್ದು ಬಂದ ಕಳಕಪ್ಪ ಬಂಡಿ ಎನ್ನುವವನು ಉಂಡಾಡಿಗುಂಡ ಎಂಬುದು ಈಗ ಗೊತ್ತಾಗುತ್ತಿದೆ. ಕಾಂಗ್ರೆಸ್ ಪಾಟೀಲರ ಮಾತು ಕೇಳಿಕೊಂಡು ಪಾಲಿಟಿಕ್ಸ್ ಮಾಡುತ್ತಿದೆ ಈ ಬಿಜೆಪಿಯ ಮಿಕ ಕಳಕಪ್ಪ ಬಂಡಿ ಎಂಬ ಭಂಡ.

ಈಗ ನಾವು ಹೇಳುತ್ತಿರುವದು ಪಾಟೀಲರ ಲೇಟೆಸ್ಟ್ ಕಬಳಿಕೆ ಕುರಿತು. ದಲಿತರ, ಮುಸ್ಲಿಮರ 120 ಎಕರೆಯನ್ನು ಆನಾಮತ್ತು ನುಂಗಲು ಹೊರಟಿದೆ ಈ ಗ್ಯಾಂಗ್!

ದೌಲತ್‌ಗೌಡನ ದೌಲತ್ತು!

ಈ ದೌಲತ್‌ಗೌಡ ಎಂಬ ನಾಲಾಯಕ್ ಹೈಕೋರ್ಟ್ ಆದೇಶಕ್ಕೆ ಕ್ಯಾರೆ ಎನ್ನುವುದಿಲ್ಲ, ಏಕೆಂದರೆ ಈತ ಪಾಳೆಗಾರ ಪಾಟೀಲ್ ಕುಟುಂಬದ ಅಳಿಯ!

30 ವರ್ಷಗಳಿಂದ ಸರ್ಕಾರದ ಅನುಮತಿಯೊಂದಿಗೆ 120 ಎಕರೆಯಲ್ಲಿ ಬಿತ್ತನೆ ಮಾಡಿಕೊಂಡು ಬಂದಿದ್ದ 27 ಕುಟುಂಬಗಳನ್ನು ತನ್ನ ರೌಡಿಸಂನಿಂದ ಬೆದರಿಸಿ ಬೀದಿಪಾಲು ಮಾಡಿದ್ದಾನೆ ಈ ದೌಲತ್‌ಗೌಡ. ಎಐಎಸ್‌ಎಫ್‌ನವರ ಬೆಂಬಲದೊಂದಿಗೆ ಎಲ್ಲ 27 ಕುಟುಂಬಗಳು ಗದಗಿನ ಡಿ.ಸಿ. ಕಚೇರಿ ಮುಂದೆ ಪ್ರತಿಭಟನೆ ಆರಂಭಿಸಿದಾಗ ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಡಿಎಸ್‌ಎಸ್ (ಅಂಬೇಡ್ಕರ್ ವಾದ) ಮತ್ತಿತರ ಪ್ರಗತಿಪರ ಸಂಘಟನೆಗಳೆಲ್ಲ ಜೊತೆಗೂಡಿದ್ದರಿಂದ ಬೆದರಿದ ಜಿಲ್ಲಾಡಳಿತ ಹೈಕೋರ್ಟ್ ಹೇಳುವಂತೆ status-co ಮೆಂಟೇನ್ ಮಾಡಿ, 27 ಕುಟುಂಬಗಳಿಗೆ ಅಲ್ಲಿ ಬಿತ್ತನೆ ಮಾಡಲು ಆದೇಶ ಹೊರಡಿಸಿಬಿಟ್ಟಿತು. ಇವತ್ತು (ರವಿವಾರ) ರೈತರೊಂದಿಗೆ ಸೇರಿ ಪ್ರಗತಿಪರ ಸಂಘಟನೆಗಳು ರೋಣದ 120 ಎಕರೆ ಜಮೀನಿನಲ್ಲಿ ಸಾಮೂಹಿಕ ಬಿತ್ತನೆ ಮಾಡಿದ್ದಾರೆ. ದೌಲತ್‌ಗೌಡನ ಗೂಂಡಾಪಡೆ ಇದಕ್ಕೆ ಅಡ್ಡಿಪಡಿಸಲು ಯತ್ನಿಸಿದೆ. ಶನಿವಾರ ಗದಗಿಗೆ ಬಂದಿದ್ದ ಕಂದಾಯ ಸಚಿವ ಜಗದೀಶ್ ಶೆಟ್ಟರ್ ತನಗೇನೂ ಗೊತ್ತೇ ಇಲ್ಲ ಎಂಬಂತೆ ಡ್ರಾಮಾ ಮಾಡಿ ಹೋಗಿದ್ದಾನೆ.




ಭೂಸಂಧಾರಣೆ ಕಾಯ್ದೆಗೆ ಅನುಗುಣವಾಗಿ ಅಂದಾನಗೌಡ ಪಾಟೀಲ್ ಎಂಬತನಿಗೆ ಸೇರಿದ್ದ ರೋಣದ ಸರ್ವೆ ನಂ 789, 791, 792 ರಲ್ಲಿನ 120 ಎಕರೆ ಜಮೀನನ್ನು 27 ದಲಿತ, ಮುಸ್ಲಿಮ್ ಕುಟುಂಬಗಳಿಗೆ 26.10.1977 ರಂದು ಹಂಚಲಾಗಿತ್ತು, ಈ ಕುಟುಂಬಗಳು ಸರ್ಕಾರ ನಿಗದಿಪಡಿಸಿದ ಹಣವನ್ನು ರೋಣದ ಸಬ್ ಟ್ರೆಜರಿ ಆಫೀಸಿನಲ್ಲಿ ಮಾರ್ಚ್ 26, 1981 ರಂದು ಪಾವತಿ ಮಾಡಿವೆ. ನಂತರ ಈ ಜಮೀನಿನ ಮೇಲೆ ಹಲವಾರು ಸಲ ಸಾಲ ಪಡೆದಿವೆ.

ಯಾವಾಗ ಮಲಪ್ರಭೆಯ ಕಾಲುವೆ ರೋಣದ ಸಮೀ[illegible] ಬಂತೋ ಅಂದೇ ದೌಲತ್‌ಗೌಡನಿಗೆ ಈ ಭೂಮಿ ಮೇ[illegible] ಕಣ್ಣು ಬಿತ್ತು. ಈತ ಜಮೀನಿನ ಮೂಲ ಒಡೆ[illegible] ಅಂದಾನಗೌಡನ ತಂಗಿ ಚನ್ನಮ್ಮನ ಮಗ. ಅಂದಾನಗೌ[illegible] ಸತ್ತ ಮೇಲೆ ತಾನು ಆ ಕುಟುಂಬಕ್ಕೆ ದತ್ತು ಹೋಗಿದ[illegible] ಈ ದೌಲತ್‌ಗೌಡ ಬೊಗಳುತ್ತಿದ್ದಾನೆ. ಮಾವ ಬಿ.ಎಸ್. ಪಾಟೀಲ್ ಚೀಫ್ ಸೆಕ್ರೆಟರಿಯಾಗಿದ್ದಾಗ, ಇನ್ನೊಬ್ಬ ಮಾ[illegible] ಆರ್.ಎಸ್. ಪಾಟೀಲ್ ಬಾಗಲಕೋಟೆ ಎಂಪಿ ಆಗಿದ್ದಾ[illegible] ಮೂರನೆ ಮಾವ ಜಿ.ಎಸ್. ಪಾಟೀಲ್ ಶಾಸಕನಾಗಿದ್ದಾ[illegible] ಈ ದೌಲತ್‌ಗೌಡ ಕಾಗದ ಪತ್ರಗಳನ್ನ[illegible] ಸೃಷ್ಟಿಸಿಕೊಂಡುಬಿಟ್ಟಿದ್ದ. ಈಗ ಎತ್ತಂಗಡಿಯಾಗಿರು[illegible] ತಹಶೀಲ್ದಾರ್ ಸಿ.ಎಂ. ಹಿರೇಮಠ ದೌಲತ್‌ಗೌಡನ[illegible] ಎಲ್ಲ ವ್ಯವಸ್ಥೆ ಮಾಡಿಕೊಟ್ಟು ಹೋಗಿದ್ದಾನೆ. ಲಾಕಪ್‌ಡೆ[illegible] ಪ್ರವೀಣ ರೋಣದ ಸಿಪಿಐ ವೀರನಗೌಡ ಪಾಟೀ[illegible] ಹೇಳಿಕೇಳಿ ದೌಲತ್‌ಗೌಡನ ಸಂಬಂಧಿ[illegible]

ಭೂನ್ಯಾಯ ಮಂಡಳಿಯೂ ಪಾಟೀ[illegible] ಕುಟುಂಬದ ಪಾದದ ಅಡಿಬಿದ್ದಿದೆ. ಇಷ[illegible] ಇರುವಾಗ 120 ಎಕರೆಯನ್ನು [illegible] ಮಾಡಿಕೊಳ್ಳದೆ ಬಿಟ್ಟಾರೆಯೇ ಈ ಪಾಳೇಗಾ[illegible] ಪಾಟೀಲರು?


ಭೂಮಿ ಕಳೆದುಕೊಂಡ ಯಮ[illegible] ಪೂಜಾರ, ಗಾಳವ್ವ ಮಾದರ, ಖಾದರಸಾ[illegible] ಕಲಾದಗಿ ಮುಂತಾದವರು ಹೈಕೋರ್ಟ್[illegible] ರಿಟ್ (3947/2006) ಹೂಡಿದ್ದರ[illegible] ಮಾರ್ಚ್ 15, 2006 ರಂದು ಮೊದಲಿನ[illegible] ಯಥಾಸ್ಥಿತಿ ಕಾಪಾಡಲು ಹೈಕೋರ್ಟ್ ಹ[illegible] ದೌಲತ್‌ಗೌಡನ ದೌಲತ್ತಿಗೆ ಪಾಠ ಹೇ[illegible] ಎ.ಸಿ. ಸಹ ರೈತರಿಗೆ ರಕ್ಷಣೆ ಕೊಡುವಂತೆ ಎಸ್.ಪಿ[illegible] ಕೇಳಿದ್ದಾರೆ. ಆದರೆ ಗೂಂಡಾಗಳ ಪಡೆಯಂತಿರುವ ಪಾಟೀ[illegible] ಕುಟುಂಬ ಜಿದ್ದಾಜಿದ್ದಿಗೆ ಬಿದ್ದಿದೆ. ಈ ದೌಲತ್‌ಗೌ[illegible] 'ದತ್ತು ಅಪ್ಪ' ಅಂದಾನಗೌಡನಿಗೆ 360 ಎಕರೆ ಜಮೀ[illegible] ಎಂದರೆ ಅದೆಂತಹಾ ಭೀಕರ ಪಾಳೆಗಾರರು

...ಮೇಯರ್ ಆಗುವುದಿರಲಿ ...ಮೊದಲು ಠೇವಣಿ ಬರಲಿ!



"ಇನ್ನೇನು ಪಾಲಿಕೆ ಚುನಾವಣೆ ಸಮೀಪಿಸುತ್ತಿದ್ದಂತೆ ಕೃಷ್ಣಪ್ಪನ ಸವಾರಿ ಬನ್ನಿಪೇಟೆ ಶಾಸಕ ಸೋಮಣ್ಣನ ಮನೆ ಮುಂದಿರುತ್ತದೆ. ಕೃಷ್ಣಪ್ಪ ನಿಯತ್ತುಗೆಟ್ಟವನು ಅಂತ ಸೋಮಣ್ಣನಿಗೂ ಗೊತ್ತು, ಹಾಗಂಥ ದೂರವಿಟ್ಟರೆ ಕೃಷ್ಣಪ್ಪ ಇನ್ನಷ್ಟು ಅನಾಹುತಕಾರಿ. ಕಳೆದ ...ತ್ತಿಕ ಚುನಾವಣೆಯಲ್ಲಿ ಲೋಕಸಭಾ ಅಭ್ಯರ್ಥಿಯಾಗಿದ್ದ ...ಟ್ ಕೃಷ್ಣಪ್ಪ ತುಂಬಾ ನಂಬಿಕೆಯಿಟ್ಟುಕೊಂಡೇ ದುಡ್ಡುಕಾಸಿನ ...ವಾಡೆಯನ್ನೆಲ್ಲ ಈತನಿಗೆ ವಹಿಸಿಕೊಟ್ಟರು. ಕೊಟ್ಟ ದುಡ್ಡಲ್ಲಿ ...ತ್ತೈದು ಲಕ್ಷ ನಾಪತ್ತೆ! ಹೋಗಲಿ ಓಟನ್ನಾದರೂ ಹಾಕಿಸಿದನಾ? ...ಸುಮಾರು ಇಪ್ಪತ್ತೈದು ಸಾವಿರದಷ್ಟು ಓಟಿದ್ದ ಗೋವಿಂದ ...ನಗರ ವಾರ್ಡಿನಿಂದ ಲೇಔಟ್ ಕೃಷ್ಣಪ್ಪನವರಿಗೆ ಅಂತ ...ದ್ದು ಬರೇ ಒಂದೂಕಾಲು ಸಾವಿರ. ಕೊನೇತನಕ ಲೇಔಟ್ ...ಾಗೇ ಇದ್ದಂತೆ ನಟಿಸಿದ ಕೌನ್ಸಿಲರ್ ಕೃಷ್ಣಪ್ಪ ಸೋಮಣ್ಣ ...ತ್ತ ಮಾಜಿ ಉಪಮೇಯರ್ ಪುಟ್ಟರಾಜು ಬಂದು ಹತ್ತು ...ರ ಗಂಟಿಕ್ಕಿದ್ದೇ ಉಲ್ಟಾ ಹೊಡೆದಿದ್ದ.

...ಇಂಥವರನ್ನು ನಂಬಿ ಯಾವಾರುವಷ್ಟು ದಡ್ಡತನ ...ಮಣ್ಣನಿಗಿಲ್ಲ. ಈ ಬಾರಿ ಮತ್ತೆ ಟಿಕೆಟ್ ಗಿಟ್ಟಿಸಿ ಮೇಯರ್ ...ಗುತ್ತೇನೆಂದು ಕೃಷ್ಣಪ್ಪ ಅದೆಷ್ಟೇ ರೈಲು ಬಿಟ್ಟರೂ ಸೋಮಣ್ಣ ...ಹಿಡಿಯುವುದು ಕಷ್ಟ. ಏಕೆಂದರೆ ಮಾಜಿ ಕೌನ್ಸಿಲರ್ ...ಪ್ಪನಿಗೆ ಮಾತು ಕೊಟ್ಟಂತೆ ಈ ಬಾರಿ ಚನ್ನಪ್ಪನಿಗೇ ...ಕೊಡಬೇಕು. ಡೀಕೇಶಿ ಕೂಡ ಈ ಬಾರಿ ಕೃಷ್ಣಪ್ಪನನ್ನು ...ಲಿಸಲಾರ. ಏಕೆಂದರೆ ಡೀಕೇಶಿಯ ಅಧಿಕಾರವಿದ್ದಷ್ಟೂ ...ತಮ ಮೇಲಿದ್ದ ನಿಷ್ಠೆ ಡೀಕೇಶಿಯ ಅಧಿಕಾರ ಹೋಗಿದ್ದೇ ...ಪ್ಪನಿಯತ್ತ ಉರುಳಿದೆ. ದುರಾದೃಷ್ಟವಶಾತ್ ಕೃಷ್ಣಪ್ಪನೇ ಮತ್ತೆ ...ಸ್ ಅಭ್ಯರ್ಥಿಯಾದರೆ ಜನ ಓಟು ಕೊಡುವುದು ಕಷ್ಟ. ...ದರೆ ಕಳೆದ ಬಾರಿ ಕೃಷ್ಣಪ್ಪನಿಗೆ ನೀರು ಕುಡಿಸಿದ ಜೆಡಿ(ಎಸ್) ...ರ್ಥಿ ಆರ್. ಪ್ರಕಾಶ್ ಕೆಲವೇ ಮತಗಳ ಅಂತರದಿಂದ ...ಿದ್ದ. ಆಗಿನ್ನೂ ಕಾಂಗ್ರೆಸ್‌ನ ಅಧಿಕಾರವಿತ್ತು, ಡೀಕೇಶಿ-...ಮಣ್ಣ ಕೃಷ್ಣಪ್ಪನ ಬೆನ್ನಿಗಿದ್ದರು. ಸದ್ಯ ಇದ್ಯಾವುದೂ ಆತನ ...ಗಿಲ್ಲ. ಜನಕ್ಕಂತೂ ಕೃಷ್ಣಪ್ಪನ ತಲೆ ಕಂಡರಾಗುವುದಿಲ್ಲ. ...ಯರ್ ಆಗುವುದು ಹಾಳಾಗಲಿ, ಕೃಷ್ಣಪ್ಪನಿಗೆ ಠೇವಣಿ ...ವುದೇ ಕಷ್ಟ!



Received Rupees ... (vide Item No. ... of Subsidiary ... Register for ... Treasury ... Date ... 19 ... Sub-Treasury Officer 20 MAR 1981 ... Initials of ... Head Accountant Nagadi Gumastha ... Initials of Treasury Officer

ರೈತರಿಂದ ಖಜಾನೆಗೆ ಹಣ ಕಟ್ಟಿದ ಪಾವತಿ

...ಭಾಗದಲ್ಲಿದ್ದಾರೆಂದು ಗೊತ್ತಾಗುತ್ತದೆ. ಈ ಅಂದಾನಗೌಡನ ...ಅಪ್ಪ ವೀರನಗೌಡನಿಗೆ ದೊಡ್ಡದ್ಯಾಮವ್ವಾ, ಸಣ್ಣದ್ಯಾಮವ್ವಾ ...ಎಂಬಿಬ್ಬರು ಹೆಂಡತಿಯರು. ಇಲ್ಲೆಲ್ಲಾ ಪಾಳೆಗಾರ ರೆಡ್ಡಿಗಳಿಗೆ ...ಒಂದು ಹೆಂಡತಿ ಸಾಲೊದಿಲ್ಲವಂತೆ! ತನ್ನಪ್ಪನ ಜೀನ್ ...ಪಡೆದ ಅಂದಾನಗೌಡ ಬಸಲಿಂಗಮ್ಮ, ಗಿರಿಜಮ್ಮ ...ಎಂಬಿಬ್ಬರನ್ನು ಮದುವೆಯಾಗಿದ್ದ. ಮಕ್ಕಳಾಗದೇ ಕೊರಗಿ ...ಸತ್ತ. ನಂತರ ಅಂದಾನಗೌಡನ ತಂಗಿ ಚನ್ನಮ್ಮಳ ಮಗ, ...ಈ ಸ್ಟೋರಿಯ ವಿಲನ್ ದೌಲತ್‌ಗೌಡ ಅಂದಾನಗೌಡನ ...ಕುಟುಂಬಕ್ಕೆ ದತ್ತು ಹೋದನಂತೆ. ಈ ದತ್ತು ಪ್ರಕ್ರಿಯೆ ...ಕೂಡಾ ಕಾನೂನು ಬದ್ಧವಾಗಿಲ್ಲ, ಇಲ್ಲೂ ನಕಲಿ ...ದಾಖಲೆಗಳನ್ನು ಸೃಷ್ಟಿಸಿದ ವಾಸನೆ ಹೊಡೆಯುತ್ತಿದೆ. ಹಾಳಾಗಿ ...ಹೋಯಲಿ, ಇವನು ದತ್ತುಪುತ್ರನೇ ಅಂತಾ ಇಟ್ಟುಕೊಳ್ಳೋಣ. ...ದರೆ ಸರ್ಕಾರವೇ 30 ವರ್ಷಗಳ ಹಿಂದೆ ರೈತರಿಗೆ ...ಕಾನೂನುಬದ್ಧವಾಗಿ ಹಂಚಿದ್ದ ಇವನಪ್ಪನ ಭೂಮಿಯನ್ನು ...ಈಗ ಇವನಿಗೇಕೆ ಬಿಟ್ಟುಕೊಡಬೇಕು? ಗದಗ ಜಿಲ್ಲಾದಳಿತ ...ಪಾಟೀಲರ ಕುಟುಂಬದ ಅಂಗರಕ್ಷಕನೆ? ರೋಣದ ...ಶಿದ್ದಿ ಶಾಸಕ ಕಳಕಪ್ಪ ಬಂಡಿ ರೈತರ ಹತ್ತಿರಕ್ಕೂ ಬರದೇ ...ಪಾಟೀಲರೊಂದಿಗೆ ಶಾಮೀಲಾಗಿ ಓಡಾಡುತ್ತಿದ್ದಾನೆ. ...ಂದಾಯ ಸಚಿವ ಶೆಟ್ಟರ್ ಸಹ ಪಾಟೀಲ್ ಕುಟುಂಬದ ...ಲೀಸ್... ಪ್ರಗತಿಪರ ಸಂಘಟನೆಗಳು ಈ ಎಲ್ಲ ಸವಾಲು ...ಮರಿಸಿ ರೈತರ ಪರ ಹೋರಾಡುತ್ತಿವೆ, ಯಶಸ್ಸು ಸಿಗುವ ...ಕ್ಷಣಗಳೂ ಗೋಚರಿಸಿವೆ.

ಪಾಳೆಗಾರ ಪಾಟೀಲ್ ರೆಡ್ಡಿಗಳಾದ ಪಾಟೀಲರಿಗೆ ...ಬುದ್ಧಿ ಕಲಿಸಲು ಇದು ಸಕಾಲವಲ್ಲವೆ?

—ದೇವಾನಂದ ಜಗಾಪುರ


ದರಿದ್ರ ನಾರಾಯಣರತ್ರ ಹೋಗೋ ಟೈಮು ಇದಲ್ಲ



ಕೋ-ಜಾ ಸರ್ಕಾರದಲ್ಲಿ ನಡೆದ ಪೋಲಿಸ್ ಪೇದೆಗಳ ವರ್ಗಾವಣೆಯಲ್ಲಿ ಬಲೇ ಸ್ವಾರಸ್ಯಕರವಾದ ಪ್ರಸಂಗಗಳು ಜರುಗಿವೆಯಂತಲ್ಲಾ, ಬೆಳಿಗ್ಗೆ ಬಂದು ಕರ್ತವ್ಯದ ಮೇಲೆ ಹಾಜರಾದ ಪೋಲೀಸ್ ಪೇದೆ ಸಂಜೆಯೊತ್ತಿಗೆ ನಿವೃತ್ತನಾಗಿ ತರಾತುರಿಯಿಂದ ಹೂವಿನ್ಹಾರ ಹಾಕಿಸಿಕೊಂಡು ಬೀಳ್ಕೊಡುಗೆ ಪಡೆದನಂತಲ್ಲಾ, ಹೀಗೆ ಬೀಳ್ಕೊಡುಗೆ ಪಡೆದ ಪೇದೆಯ ಮುಂದಿನ ಕಾರ್ಯಭಾರವೇನು ಎಂದು ಪ್ರಶ್ನಿಸಿದರೆ, "ನಾನು, ನನ್ನ ಮಕ್ಕಳು, ಹೆಂಡತಿ, ಮತ್ತವರ ಸಂಬಂಧಿಗಳೆಲ್ಲಾ ಮುಂದೆ ಈ ಸರ್ಕಾರಕ್ಕೆ ನಮ್ಮ ಕಡೆಯಿಂದ ಒಂದೂ ಓಟು ಬೀಳದಂತೆ ನೋಡಿಕೊಳ್ಳುತ್ತೇವೆ" ಎಂದನಂತಲ್ಲಾ, ಹೀಗೆ ತೊಂದರೆಗೊಳಗಾದ ಪೋಲೀಸ್, ಫಾರೆಸ್ಟ್, ಶಿಕ್ಷಣ ಇಲಾಖೆಯ ನೌಕರರು ಗಂಟುಮೂಟೆಯೊಂದಿಗೆ ಗುಡಾರ ಬದಲಿಸುತ್ತಿದ್ದಾರಂತಲ್ಲಾ, "ಬಹಳ ಹಿಂದೆ ಭಾರತದಲ್ಲಿ ಮೊಹಮದ್ ತುಘಲಕ್ ಎಂಬ ರಾಜನಿದ್ದನಂತೆ. ಆತನ ಕಾಲದಲ್ಲೂ ಹೀಗೆಯೇ ಊರಿಗೆ ಊರನ್ನೇ ವರ್ಗ ಮಾಡುತ್ತಿದ್ದನಂತೆ. ಚರಿತ್ರೆಯಲ್ಲಿ ಸಿಕ್ಕುವ ಅಂತಹ ಅಪರೂಪದ ತಿಕ್ಕಲು ಈ ಪ್ರಜಾಪ್ರಭುತ್ವದಲ್ಲೂ ಪ್ರತ್ಯಕ್ಷವಾಗಿ ನಮ್ಮ ಪ್ರಾಣ ತಿನ್ನುತ್ತಿದೆಯಲ್ಲಾ" ಎಂದು ಇವರೆಲ್ಲ ಮಾತನಾಡಿಕೊಳ್ಳುತ್ತಿದ್ದಾರಂತಲ್ಲಾ. ವರ್ಗಾವಣೆಗೊಂಡ ಸರ್ಕಾರಿ ಕರ್ಮಚಾರಿಗಳಿಗೆ ಸರ್ಕಾರ ಟಿಎ, ಡಿಎ ಭರಿಸಿದ ಫಲವಾಗಿ ಖಜಾನೆಯೆಲ್ಲಾ ಖಾಲಿಯಾಗಿ ನೈಸ್ ಕಂಪನಿಗೆ ಕೊಟ್ಟ ಚೆಕ್ ಬೌನ್ಸ್ ಆಗಿ ಹೋಗಿದೆಯಂತಲ್ಲಾ, ಥೂತ್ತೇರಿ!

* * * * * * * * * * * * *

ಚೆಕ್ ಬೌನ್ಸ್ ಆಗಿರುದವುಕ್ಕೆ ದೇಶಾವರಿ ನಗೆ ನಕ್ಕ ಎಡೂರಪ್ಪ "ದೇವರ ದಯದಿಂದ ಸರ್ಕಾರದ ಬೊಕ್ಕಸದಲ್ಲಿ ಹಣ ತುಂಬಿ ತುಳುಕುತ್ತಿದೆ. ಅಷ್ಟೇ ಏಕೆ, ಈ ಸರ್ಕಾರದ ಎಲ್ಲಾ ಮಂತ್ರಿಗಳ ಜೇಬುಗಳಲ್ಲದೆ, ಅವರ ಸಂಬಂಧಿಗಳ ಜೇಬುಗಳೂ ತುಂಬಿ ಇಟ್ಟಾಡುತ್ತಿರುವಾಗ, ಜುಜುಬಿ ಐದು ಲಕ್ಷ ರೂ.ಗಳ ಚೆಕ್ ಬೌನ್ಸಾಗಿದೆ ಎಂಬುದು ಶುದ್ಧ ಸುಳ್ಳು" ಎಂದು ಬಿಟ್ಟರಂತಲ್ಲಾ, ಈ ನಡುವೆ ಚೆಕ್ ಬೌನ್ಸಾಗಬೇಕಾದರೆ ಅದೆಲ್ಲೋ ಸೇಡಿನ ರಾಜಕಾರಣಕ್ಕೆ ತುತ್ತಾಗಿರಬೇಕು; ಸೇಡು ಒಮ್ಮೊಮ್ಮೆ ಕಿಚ್ಚಾಗಿ, ಹೊಟ್ಟೆಕಿಚ್ಚಾಗಿ ಸಂಬಂಧಿಸಿದವರನ್ನೇ ದಹಿಸಿಬಿಡುವಂತೆ, ಚೆಕ್ಕನ್ನು ಬೌನ್ಸ್ ಮಾಡಲು ಆದೇಶವಿತ್ತವರನ್ನೇ ಹರಾಜು ಹಾಕಿದೆಯಂತಲ್ಲಾ, ಈ ನಡುವೆ "ಖೇಣಿ ಚೆಕ್ ಬೌನ್ಸಾಗಬೇಕಾದರೆ, ಅದರ ಹಿಂದೆ ಯಾವ ಪಿತೂರಿಯೂ ಇಲ್ಲ, ಈ ಹಾಳು ಎರಡನೇ ದರ್ಜೆ ಕಂಪ್ಯೂಟರ್‌ದೇ ಇದೆಲ್ಲ ರಾದ್ಧಾಂತ. ತನ್ನಲ್ಲಿರುವ ತಾಂತ್ರಿಕ ದೋಷವನ್ನು ಬ್ಯಾಂಕಿನ ಸಿಬ್ಬಂದಿಗೆ ಹೇಳದೇ ತನ್ನಲ್ಲೇ ಇಟ್ಟುಕೊಂಡ ಪ್ರಮಾದದಿಂದಾಗಿ ಸರ್ಕಾರದ ಮಾನ ಹರಾಜಾಗಿ ಹೋಯ್ತು" ಎಂದು ಬ್ಯಾಂಕಿನ ಅಧಿಕಾರಿಗಳು ತುಂಬಾ ತಡವಾಗಿ ಬೊಬ್ಬೆ ಹೊಡೆಯುತ್ತಿದ್ದಾರಂತಲ್ಲಾ, ಬೌನ್ಸಾಗಿರುವ ಚೆಕ್ಕನ್ನು ಕೈಲಿಡಿದು ಖೇಣಿ "ಈಗ ನಿಮ್ಗೆ ಗೊತ್ತಾಗಿರಬೇಕು: ಐದು ಲಕ್ಷ ಇಲ್ಲದ ಸರ್ಕಾರ ಐದು ಅಡಿ ರಸ್ತೆ ಮಾಡುತ್ತಾ?" ಎಂದು ಡಿಕೆಶಿ ಜೊತೆ ನಿಂತು ಡಿಕಾವಾಗಿ ನಗುತ್ತಿದ್ದಾನಂತಲ್ಲಾ, ಥೂತ್ತೇರಿ!!



* * * * * * * * * * * * *

"ಅಮ್ಮಮ್ಮ ಎಂದರೆ ಇನ್ನು ಹದಿನೈದು ದಿನ ಇರಬಲ್ಲೆ" ಎಂದು ಬಹಿರಂಗವಾಗಿಯೇ ಘೋಷಣೆ ಮಾಡಿದ ಮುಖ್ಯಮಂತ್ರಿ ಕುಮಾರಸ್ವಾಮಿಯವರನ್ನು ಅಷ್ಟರಲ್ಲೇ ಮಾತನಾಡಿಸಬೇಕೆನಿಸಿತಲ್ಲಾ, ಕರ್ನಾಟಕದಷ್ಟಗಲದ ಕನಸು ಹೊತ್ತು ಮುಖ್ಯಮಂತ್ರಿಯಾದ ಕುಮಾರಣ್ಣ, ನೆಮ್ಮದಿಯಾಗಿ ಆಡಳಿತ ನಡೆಸಲು ಬಿಡದೆ ಅವರನ್ನು ಮನೆಗೆ ಕಳುಹಿಸುವಂತೆ ಷಡ್ಯಂತ್ರ ಹೂಡಿದವರಾರೆಂದು ತಿಳಿದುಕೊಳ್ಳಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು:

"ಹಲೋ ಸಾರ್, ನಾನು ಯಾಹೂ ಸಾರ್."

"ಯಾವ್ರೂ ಅಂದ್ರೆ ಯಾರ ಕಡಿಯೊರ್ರಿ ನೀವು?"

"ಗೌರಿ ಲಂಕೇಶ್ ಕಡೆಯವನು. ಇದ್ಯಾಕ್ ಸಾರ್ ಮರತುಬುಟ್ರಾ?"

"ನಿಮ್ಮನ್ನೆಂಗರಿ ಮರಿಯಕ್ಕಾಯ್ತದೆ? ನಮ್ಮಪ್ಪ ಇರೋವರಿಗೂ ಅವರ ಮೇಲೆ ಬರದು ಬರುದು ಸೇಡು ತೀರಿಸಿಕೊಂಡ್ರಿ. ಅವುರು ಸತ್ತ ಮೇಲೆ ಈಗ ನಮ್ಮ ಮೇಲೆ ಬರಿಯಕ್ಕೆ ಶುರು ಮಾಡಿದ್ದಿರಿ."

"ಇದೇನ್ ಸಾರ್ ಹಿಂಗಂತಿರಿ? ಬೆಳಿಗ್ಗೆ ತಾನೆ ದೇವೇಗೌಡ್ರು ನೋಡಿದ್ದಿನಿ."

"ರಿ ನಾನು ಭೋಜೇಗೌಡ ಕಂಡ್ರಿ, ಲಕ್ಷ್ಮಯ್ಯನೋರ ಮಗ."

"ಮೊದ್ಲೆ ಹೇಳದಲವೇನ್ರಿ? ಕುಮಾರಣ್ಣನಿಗೆ ಫೋನ್ ಕೊಡಿ."

"ಕುಮಾರಣ್ಣ ಯಾವುದೊ ಬ್ಯಾಂಕಿನೋರ ಜೊತೆ ಮಾತಾಡ್ತಯಿದ್ರು, ಕೊಟ್ಟೆ ಇರಿ."

"ಹಲೋ ಸಾರ್, ನಾನು ಯಾಹೂ."

"ಸಾರಿ ಯಾಹೂ ಅವ್ರೆ, ನಂತರ ಫೋನ್ ಮಾಡ್ತಿರ?"

"ಐದೇ ನಿಮಿಷ ಸಾರ್. ಕ್ಷಣ ಕ್ಷಣಕ್ಕೂ ಏನೇನೊ ಬದಲಾವಣೆ ಆಗ್ತಾಯಿವೆ. ಒಂದೇ ಒಂದು ಪ್ರಶ್ನೆಗೆ ಉತ್ತರ ಕೊಟ್ಟುಬಿಡಿ ಸಾರ್."

"ಅದೇನು ಕೇಳಿ?"

"ಇನ್ನ ಹದಿನೈದು ದಿನಕ್ಕೆ ನಾನು ಇರತಿನೊ ಇಲ್ಲನ್ರೊ ಅಂದಿದ್ದಿರಲ್ಲಾ, ಇನ್ನು ಹತ್ತು ದಿನ ಬಾಕಿ ಇದೆ. ನೆನೆಸಿಕೊಂಡ್ರೆ ಬೇಜಾರಾಗುತ್ತಲ್ಲ ಸಾರ್?"

"ಹೆದ್ರಿಕೊಬೇಡಿ ಹಾಗೇನೂ ಆಗಲ್ಲ."

"ಅಂಗರೆ ತಮಾಷಿನ ಸಾರ್?"

"ಒಂದು ತರ ತಮಾಷಿನೆ. ಆದ್ರು ಸೀರಿಯಸ್ಸಾಗೆ ಹೇಳಿದ್ದಿ."

"ಯಾಕ್ ಸಾರ್ ಹೇಳಿದ್ರಿ, ಅಷ್ಟೊಂದು ಬೇಜಾರಾಗಿದೆಯಾ ಸಾರ್?"

"ಬೇಜಾರೇನೂ ಆಗಿಲ್ಲ, ಏನು ನಾವು ಸಮ್ಮಿಶ್ರ ಸರ್ಕಾರ ಅಂತ ರಚನೆ ಮಾಡಿ, ಕರ್ನಾಟಕ ಅಭಿವೃದ್ಧಿ ರಂಗ ಅಂತ ಏನು ವೇದಿಕೆ ಮಾಡಿಕೊಂಡೆವೊ, ಆ ತರ ಒಂದು ಪರಿಸ್ಥಿತಿ ಅನಿವಾರ್ಯತೆಯಲ್ಲಿ ಅಭಿವೃದ್ಧಿ ಕಾರ್ಯಗಳನ್ನ ಮಾಡ್ತ ಹೋಗುವಾಗ, ಏನು ನಮಗೆ ಸಹಕಾರ ಕೊಟ್ಟಂತ ಬಿಜೆಪಿ ಜನ, ನಾವು ಏನಾದ್ರು ಹೇಳಿದ್ರೆ ಒಪ್ಪಿಗೆ ಕೊಡಕ್ಕೆ ತಡಮಾಡ್ತಯಿದಾರೆ..."

"ಯಾವ ಒಪ್ಪಿಗೆ ಕೇಳಿದ್ರಿ, ಸಾರ್?"

"ಅಲ್ರಿ ಒಬ್ಬ ರೋಡ್ ಕಂಟ್ರಾಕ್ಟರ್‌ಗೆ ಹೆದರೋದೇನ್ರಿ?"

"ಹೆದರಬಾರದು ಸಾರ್. ನೀವು ಕರ್ನಾಟಕದಲ್ಲಿ ಈವರಿಗೂ ಯಾರಿಗೂ ಹೆದರಿಲ್ಲ ಅಂತ ದೇವೇಗೌಡರಿಗೇ ಹೆದರಲಿಲ್ಲ ಇವ್ರುಯಾವ ಲೆಕ್ಕ ಸಾರ್?"

"ತಂದೆಯವರಿಗೆ ಹೆದರತಿನಿ ಕಂಡ್ರಿ, ಇವತ್ತಿಗೂ ಅವರೆದ್ರಿಗೇ ಕೂತುಗೊಳೋದಿಲ್ಲ ನಾನು. ಅವುರು ಹಾಕಿದ ಗೆರೆ ದಾಟದಂಗೆ ನಡಕೊಂಡು ಹೋಗ್ತಾಯಿದಿನಿ ಗೊತ್ತಾ?"

"ಈ ಹದಿನೈದು ದಿನದ ಗಡುವು ಗೌಡ್ರು ಹೇಳಿಕೊಟ್ಟದ್ದೆಯ ಸಾರ್?"

"ಹೌದು ಕಂಡ್ರಿ, ಹಾಗಂದ್ರೂ ಈ ಬಿಜೆಪಿಗಳು ಹೆದರದೆ ರಾಜೀನಾಮೆ ಕೊಡದು ನಿಮಗೆ ಬಿಟ್ಟ ವಿಚಾರ ಅಂತರಲ್ರಿ? ಇವರ ಜೀವಮಾನದಲ್ಲಿ ಅಧಿಕಾರವೇ ಇಲ್ದೆ ಸತ್ತೇ ಹೋಗತಿದ್ರು. ಅದನ್ನ ನೋಡಕ್ಕಾಗದೆ ಗೌಡ್ರು ಅವುರಿಗೂ ಒಂದು ಅವಕಾಶ ಕೊಟ್ರೇ, ಒಂದಿಷ್ಟು ಕೃತಜ್ಞತೆ ಬೇಡವೆ?"

"ನೀವು ಏನೇ ಹೇಳಿ ಸಾರ್ ಈ ಬಿಜೆಪಿ ಜನ ಖೇಣಿ ಜೊತೆಲೂ ಅವ್ರೆ ಸಾರ್."

"ಹೌದು ಕಂಡ್ರಿ. ಇದು ನನಿಗೆ ಗೊತ್ತೇಯಿರಲಿಲ್ಲ, ಇವ್ರುನ್ಯಾರೊ ಉತ್ತರ ಕರ್ನಾಟಕದ ಕಡೆ ಲಿಂಗಾಯಿತ್ರೊನಂತೆ. ಅದಕ್ಕೆ ಶೆಟ್ಟರ್, ಎಡೂರಪ್ಪ ಇವರೆಲ್ಲಾ ನನ್ನ ಜೊತೆ ಮುಖ ಕೊಟ್ಟು ಮಾತಾಡ್ತಯಿಲ್ಲ."

"ಏನೇ ಆಗ್ಲಿ ಸಾರ್, ಸರ್ಕಾರ ನಡಸೋರು ಸರ್ಕಾರದೊಳಗೆ ಇರಬಾರ್ದು ಸಾರ್."

"ಏನ್ರಿ ನೀವೇಳ್ತಾಯಿರೋದು?"

"ಈಗ ನೋಡಿ ಖೇಣಿ ರಸ್ತೆ ಮಾಡೊ ಜಾಗದಲ್ಲಿ ನಿಮ್ಮ ಜಮೀನಿದೆ ಅಂತ ಪ್ರಜಾವಾಣಿಯವರು ಪಹಣಿನೆ ತೋರಿಸಿಬುಟ್ಟವ್ರೆ!"

"ರೀ, ಆ ಜುಜುಬಿ ನಲವತ್ತಾರೆಕರೆ ಇವತ್ತೆ ಕೊಡ್ತಿನಿ ತಗೊಳ್ತೀರೇನ್ರಿ?"

"ತಗೊಳೊದಲ್ಲ ಸಾರ್, ನಮ್ಮ ಜಮೀನೇನಾದ್ರು ಈ ಕಾರಿಡಾರ್ ರಸ್ತೆಲಿದ್ರೆ ಕುತ್ತಿಗೆ ಕುಯ್ಕಳ್ತಿನಿ ಅಂತ ದೇವೇಗೌಡ್ರು ಯಾಕ್ ಸಾರ್ ಹೇಳಬೇಕಾಗಿತ್ತು?"

"ಸರಿಯಾಗೆ ಹೇಳ್ಯವ್ರೆ ಕಂಡ್ರಿ. ಅಲ್ಲಿ ತಂದೆಯವರ ಹೆಸರಲ್ಲಿ ಒಂದು ಗುಂಟೆನೂ ಇಲ್ಲ. ಇರೋದೆಲ್ಲಾ ನಮ್ಮ ಜಮೀನು. ಮಣ್ಣಿನ ಮಗನ ಮಕ್ಕಳಿಗೆ ಜಮೀನು ಇರಬಾರ್ದು ಅಂತ ಎಲ್ಲೇಳದೆ?"

"ಎಲ್ಲೂ ಹೇಳಿಲ್ಲ ಸಾರ್. ಕಲ್ಲಿನ ಮಕ್ಕಳಿಗೆ ಹೇಗೆ ಹರೆಬಂಡೆ ಇರತದೊ ಹಾಗೆ ಮಣ್ಣಿನ ಮಕ್ಕಳಿಗೂ ಮಣ್ಣಿರಲೇಬೇಕು."

"ತಮಾಸಿ ಮಾಡ್ತಿರಲ್ರಿ? ಇವತ್ತು ಭೂಮಿ ಇಲ್ದೆಯಿರೊ ರಾಜಕಾರಣಿ ಯಾರವ್ನೆ ತೋರ್ಸಿ? ಆ ಶಿವಕುಮಾರನ ಭೂಮಿ ಎಷ್ಟದೆ ಗೊತ್ತೆ? ಒಂದು ಸಾವಿರ ಕೋಟಿಯಾಯ್ತದೆ ಅವ್ನ ಭೂಮಿ. ಆ ದೇಶಪಾಂಡೆ ತೋಟ ನೋಡಿದ್ದಿರಾ? ಇದೇ ಖರ್ಗೆ, ಧರ್ಮಸಿಂಗ್ ಜಮೀನೆಷ್ಟಿದೆ ಅಂತ ಗೊತ್ತೇನ್ರಿ ನಿಮಗೆ? ಆ ಸಿಂಧ್ಯಾ ಪ್ರಾಪರ್ಟಿ ಎಷ್ಟಿದೆ ಗೊತ್ತ? ಯಾರ್ಯಾರಿಗೆ ಎಷ್ಟೆಷ್ಟು ಜಮೀನಿದೆ ಅಂತ ನಮ್ಮ ತಂದೆಯವರಿಗೆ ಚೆನ್ನಾಗಿ ಗೊತ್ತಿದೆ. ಅಂತದ್ರಲ್ಲಿ ನನ್ನತ್ರ ಇರೊ ನಲವತ್ತೆಕರೆದೆ ದೊಡ್ಡ ಸುದ್ದಿಯಾಗಿದೆ."

"ಅವುರದ್ಯಾವುದೂ ಕಾರಿಡಾರ್ ರಸ್ತೆ ಆಸುಪಾಸಿನಲ್ಲಿಲ್ಲವಲ್ಲ ಸಾರ್?"

"ಅದೇ ಕಂಡ್ರಿ ಈಗ ಬಂದಿರೊ ಸಮಸ್ಯೆ."

"ಅಂಗಾದ್ರೆ ಹೊರಟೇಬಿಟ್ರಾ ಸಾರ್? ಕರ್ನಾಟಕದ ಪ್ರತೀ ಕುಟುಂಬಕ್ಕೂ ಸಹಾಯ ಮಾಡ್ತಿನಿ ಅಂದಿದ್ರಿ. ಆ ನಿಮ್ಮ ಕನಸು ಈಡೇರಲೇ ಇಲ್ಲವಲ್ಲ ಸಾರ್?"

"ಹೌದು ಕಂಡ್ರಿ."

"ಸಾರ್ ಹೋಗೋ ಮುನ್ನ ಒಂದು ರಿಕ್ವೆಸ್ಟು."

"ಏನೇಳ್ರಿ?"

"ಆ ಮಾಗಡಿ ರೋಡಲ್ಲಿ ನಮ್ಮ ಕಡೆ ಜನಗಳೆಲ್ಲಾ ಹೋಗಿ ಗುಡುಸ್ಲಾಕ್ಕೊಂಡಿದ್ರು. ಸುಮಾರು ಮುನ್ನೂರು ಕುಟುಂಬ ಇತ್ತಲ್ಲಿ, ಈ ಕಾರ್ಪೋರೇಷನ್ ಬಿಬಿಎಂಪಿ ಹೋಗಿ ಎಲ್ಲಾರ ಮನೆನೂ ಕೆಡವಾಕಿ ಅವರೆಲ್ಲಾ ಬೀದಿಲಿ ಬಿದ್ದವ್ರೆ. ಅವ್ರುರಿಗೇನಾದ ಸಹಾಯ ಮಾಡ್ತಿರ?"

"ಅದು ಕಾರ್ಪೋರೇಷನ್ ಕೆಲಸ ಕಂಡ್ರಿ, ನನ್ನ ಕೆಲಸಲ್ಲ."

"ಅವ್ರುರು ದರಿದ್ರ ನಾರಾಯಣರಲ್ವೆ ಸಾರ್?"

"ದರಿದ್ರ ನಾರಾಯಣರತ್ರ ಹೋಗೊ ಟೈಮು ಇದಲ್ಲ."

"ಥೂತ್ತೇರಿ!!!"

—ಯಾಹೂ

ಬಹುಶಃ ಬೆಂಗಳೂರಿನ ಸದ್ಯದ ಇತಿಹಾಸದಲ್ಲೇ ಅತ್ಯಂತ ದುಬಾರಿ ಬೆಲೆಯ ಭೂಕಬಳಿಕೆಯ ವೃತ್ತಾಂತ ಇದು. ಅಷ್ಟೇ ಉದ್ವೇಗಕಾರಿ ಘಟನೆಗಳ, ರೋಮಾಂಚಕ ತಿರುವುಗಳನ್ನು ಕಾಣುತ್ತಿರುವ ಕೇಸ್ ಇದಾಗಿದೆ.

ಒಂದು ಕಡೆ 'ಸಮಾಜ ಸುಧಾರಕ' ಡಾನ್ ಮುತ್ತಪ್ಪ ರೈನ ನೆರಳು, ಇನ್ನೊಂದು ಕಡೆಯಿಂದ ಸಮಾಜ ಕಂಟಕ ಜಾಯಿಂಟ್ ಕಮಿಷನರ್ ಆಫ್ ಪೋಲೀಸ್ ನಾರಾಯಣ ಗೌಡನ ಕೈವಾಡಗಳ ಸಾಧ್ಯತೆಯಿರುವ, ಖದೀಮ ರಾಜಕಾರಣಿಗಳು, ನ್ಯಾಯಾಲ್‌ಗಳು, ಪೋರ್ಜರಿ ಪ್ರವೀಣರೆಲ್ಲಾ ಒಟ್ಟಿಗೆ ಸೇರಿಕೊಂಡು ಒಂದು ನೂರು ಕೋಟಿ ರೂಪಾಯಿ ಬೆಲೆ ಬಾಳುವ ಆಸ್ತಿಯೊಂದನ್ನು ಕಬಳಿಸಲು ರಣಹದ್ದುಗಳಂತೆ ಎರಗಿದ್ದಾರೆ.

ಇವರೆಲ್ಲರ ಕಾಕದೃಷ್ಟಿ, ಪಿಶಾಚಿ ಕೈಗಳು ಯಾರ ವಿರುದ್ಧ ಮಸಲತ್ತು ನಡೆಸುತ್ತಿವೆ ಗೊತ್ತೆ?

ಅವರಲ್ಲೊಬ್ಬ ಟೆನಿಸನ್ ಈ ಭೂಮಿ ವಶಪಡಿಸಿಕೊಳ್ಳಲು ಮುತ್ತಪ್ಪ ರೈನಿಂದ ಸಮಾಜ ಸೇವೆಯ ನೆರವು ಪಡೆಯಲು ಹೋಗಿದ್ದರೆ ಇನ್ನೊಬ್ಬ ಪೋಲೀಸ್ ಆಫೀಸರ್‌ಗಳ ಕೈಗೊಂಬೆಯಾಗಿದ್ದಾನೆ.

ಒಟ್ಟಿನಲ್ಲಿ ಇಡೀ ಬೆಂಗಳೂರಿನ ಅಂಡರ್‌ವರ್ಲ್ಡ್, ರಿಯಲ್ ಎಸ್ಟೇಟ್ ದಂಧೆಕೋರರ ಪೋಲೀಸರು, ಖದೀಮ ರಾಜಕಾರಣಿಗಳ ಗಮನವೆಲ್ಲಾ ಈಗ ಡಿವೈನ್ ಸ್ಕೂಲ್‌ನ ಆಸ್ತಿಯ ಮೇಲಿದೆ.


ಫಾದರ್ ಅಬ್ರಹಾಂ

ಯುದ್ಧಕ್ಕಿಳಿದಿದ್ದಾರೆ. ಇವರೊಂದಿಗೆ ಹಾಲಿ ಟ್ರಸ್ಟ್ ಮೆಂಬರ್‌ಗಳಾದ ಥಾಮಸ್, ರವೀಂದ್ರ ಮುಂತಾದವರೂ ಹೋರಾಟಕ್ಕೆ ನಿಂತಿದ್ದಾರೆ. ನಗರದ ಹಿರಿಯ ವಕೀಲ ಸಿ.ವಿ. ಸುಧೀಂದ್ರ ಈ ಕೇಸ್ ಕೈಗೆತ್ತಿಕೊಂಡಿದ್ದು ನಿತ್ಯ ಹತ್ಯಾ ಬೆದರಿಕೆಗಳು ಬಂದರೂ ಕೇರ್ ಮಾಡದೆ, ಆಮಿಷಗಳಿಗೆ ಬಲಿಯಾಗದೆ ಮಕ್ಕಳ ಪರವಾಗಿ ಮುನ್ನುಗ್ಗುತ್ತಿದ್ದಾರೆ.

ಈ ಎಲ್ಲಾ ಕಾರಣಗಳಿಂದಾಗಿ ಇದೊಂದು ಹೈ ಪ್ರೊಫೈಲ್ ಕೇಸ್ ಆಗಿಬಿಟ್ಟಿದೆ.


ಇಳಿದಿದ್ದಾಗ ಅವರಿಗೆ ಸಿಕ್ಕವರೆ ಈಗಿನ ಜರ್ಮನ್ ಹಣಕಾಸು ಸಚಿವ ಮಾರ್ಟಿನ್ ಫಫ್. ಆಗಿನ್ನೂ ಹದಿನೇಳರ ವಿದ್ಯಾರ್ಥಿಯಾಗಿದ್ದ ಮಾರ್ಟಿನ್ ಅಬ್ರಹಾಂರವರ ಮಾತು ಹಾಗೂ ವ್ಯಕ್ತಿತ್ವದ ಪ್ರಭೆ ಕಂಡು ನಿಂತ ಹೆಜ್ಜೆಯಲ್ಲೇ ಜೊತೆಗೂಡಿ ಬೆಂಗಳೂರಿಗೆ ಬಂದಿಳಿದರು. ಇವರಿಗೆ ಬೆಂಗಳೂರಿನಲ್ಲಿ ಮಿಲಿಟರಿ ಅಧಿಕಾರಿ ಮೇರಿ ಫರ್ನಾಂಡೀಸ್ ಎಂಬಾಕೆಯ ನೆರವೂ ಸಿಕ್ಕಿತು. ಈ ಗುಂಪು 1958 ರಲ್ಲಿ ವೈಟ್‌ಫೀಲ್ಡ್ ಹತ್ತಿರದ ಪಟ್ಟಂದೂರು ಗ್ರಾಮದಲ್ಲಿ ಮಿಸಸ್ ಯೋಲ್ ಎಂಬುವಳಿಂದ ಒಂಭತ್ತು ಎಕರೆ ಜಮೀನನ್ನು ಲೀಸ್‌ಗೆ ಪಡೆದು ಅಲ್ಲೇ ಡಿವೈನ್ ಲೈಟ್ ಶಾಲೆ ಆರಂಭಿಸಿತ್ತು, ನಂತರ 1959 ರಲ್ಲಿ 4 ಎಕರೆಯನ್ನು ಟ್ರಸ್ಟ್ ಹೆಸರಿನಲ್ಲೂ ಉಳಿದ ಐದೆಕರೆಯನ್ನೂ ಸ್ಥಾಪಕ ಟ್ರಸ್ಟೀ ಮೇರಿ ಫರ್ನಾಂಡೀಸ್ ಹೆಸರಲ್ಲೂ ಖರೀದಿಸಲಾಗಿತ್ತು, ಮುಂದೆ ಈ ಶಾಲೆ ಬೆಂಗಳೂರಿನ ಸಹೃದಯವಂತ ದಾನಿಗಳ ನೆರವಿನಿಂದ ಬೆಳೆದು ಸ್ವಾವಲಂಬಿಯಾಗುತ್ತಾ ಹೋಯಿತು. ನೆಹರು, ಸರ್ವಪಲ್ಲಿ ರಾಧಾಕೃಷ್ಣನ್‌ವರೆಗೂ ಈ ಶಾಲೆ ಪರಿಚಿತವಾಗಿತ್ತು, ಹೀಗಿರುವಾಗ ಮೇರಿ ಪ್ರಮೋಷನ್ ಪಡೆದು ಗೋವಾಗೆ ಹೋದರು. ಆಕೆಗೆ ಮೆಬಲ್ ಎಂಬ ಮಗಳಿದ್ದಳು. ಆದರೆ ಮೆಬಲ್ ಮತ್ತು ಅವಳ ಪತಿ ಜಾಲಿಗೆ ಅಂಧ ಫಾದರ್ ಅಬ್ರಹಾಂ ಬಗ್ಗೆ ಸ್ವಲ್ಪ ಅಸಹನೆ ಹುಟ್ಟಿಕೊಂಡಿತ್ತು, ಅವತ್ತಿನ ಬೆಂಗಳೂರು ಕ್ರಿಶ್ಚಿಯನ್ನರ ಮೆಚ್ಚಿನ ಧರ್ಮಗುರು ಆರ್ಚ್ ಬಿಷಪ್ ಲೂರ್ದುಸ್ವಾಮಿಗೂ ಫಾದರ್ ಅಬ್ರಹಾಂ ಮಾಡುತ್ತಿರುವ ಕೆಲಸ ಹಾಗೂ ಗಳಿಸುತ್ತಿರುವ ಕೀರ್ತಿಯ ಬಗ್ಗೆ ಹೊಟ್ಟೆಕಿಚ್ಚಾಗಿ ಈ ಮೆಬಲ್-ಜಾಲಿಯ ತಲೆ ಕೆಡಿಸಿಬಿಟ್ಟ. ಈ ಲೂರ್ದುಸ್ವಾಮಿ ನಿಷ್ಪಾಪಿ ಅಂಧರ ಸೇವಕ ಫಾದರ್ ಅಬ್ರಹಾಂರ ಮೇಲೆ ಮಾದಕ ವಸ್ತು ಸಾಗಾಣಿಕೆಯ ಒಂದು ಸುಳ್ಳು ಕೇಸ್ ಸೃಷ್ಟಿಸಿ ಜೈಲಿಗೆ ಕಳಿಸಿ ಇಡೀ ಟ್ರಸ್ಟನ್ನು ತಮ್ಮ

ಅಂಧ ಮಕ್ಕಳ ಆಸ್ತಿ ಕಬಳಿಕೆಗೆ

ಸ್ಕೆಚ್!

ನೂರು ಕೋಟಿ ಡೀಲ್


ಪೋಲೀಸ್ ನಾರಾಯಣ ಗೌಡ


ಡಾನ್ ಮುತ್ತಪ್ಪ ರೈ

ಅಂಧ ಮಕ್ಕಳ ಅರ್ಥಾತ್ ಕಣ್ಣು ಕಾಣದ ಅಸಹಾಯಕ ಶಾಲಾ ಮಕ್ಕಳ ವಿರುದ್ಧ!

ಬೆಂಗಳೂರಿನ ವೈಟ್‌ಫೀಲ್ಡ್ ಏರಿಯಾದ ಪಟ್ಟಂದೂರು ಅಗ್ರಹಾರದ ಸರ್ವೆ ನಂಬರ್ 33 ಹಾಗೂ 34 ರಲ್ಲಿರುವ ಒಂಭತ್ತು ಎಕರೆ ಜಮೀನಿನಲ್ಲಿ ದಿವೈನ್ ಲೈಟ್ ಸ್ಕೂಲ್ ಫಾರ್ ಬ್ಲೈಂಡ್ ಎಂಬ ಶಾಲೆಯಿದೆ.

1958 ರಲ್ಲಿ ಈ ಜಾಗ ಖರೀದಿಸಿ ಅಲ್ಲಿ ಅಂಧ ಮಕ್ಕಳಿಗಾಗಿ ವಸತಿ ಶಾಲೆ ಶುರು ಮಾಡಿದ್ದು ರೆವರೆಂಡ್ ಫಾದರ್ ಅಬ್ರಹಾಂ ಎಂಬ ಅಂಧ ವ್ಯಕ್ತಿ. 1973 ರಲ್ಲಿ ಈ ಅಬ್ರಹಾಂ ವೈಟ್‌ಫೀಲ್ಡ್‌ನ ಅಂಧರ ಶಾಲೆಯಲ್ಲೇ ಸತ್ತರೆಂದು, ಅವರ ಅಂತ್ಯಸಂಸ್ಕಾರವೂ ಅಲ್ಲೇ ಆಗಿದೆಯೆಂದು ಬಿಂಬಿಸಲಾಗಿದೆ. ಆದರೆ ಇವರ ಸಮಾಧಿ ಕೇರಳದಲ್ಲಿ ಪತ್ತೆಯಾಗಿದೆ. ಇದನ್ನು 2002 ರಲ್ಲಿ ಕಂಡು ಹಿಡಿದಿದ್ದು ಜರ್ಮನಿ ದೇಶದ ಈಗಿನ ಹಣಕಾಸು ಮಂತ್ರಿ ಮಾರ್ಟಿನ್ ಫಫ್. ಈ ಫಫ್ ದೂರದ ಯೂರೋಪ್‌ನ ವಿಯನ್ನಾ ನಗರದಿಂದ ಹದಿನೇಳನೇ ವಯಸ್ಸಿನಲ್ಲಿ ಬೆಂಗಳೂರಿಗೆ ಬಂದು ಅಬ್ರಹಾಂ ಜೊತೆ ಸೇರಿ ಅಂಧರ ಶಾಲೆ ಸ್ಥಾಪಿಸಿ ಅಬ್ರಹಾಂರ ಡ್ರೈವರ್ ಆಗಿ ಕೆಲಸ ಮಾಡಿದ್ದವರು. ಅಂದ ಹಾಗೆ ಈ ಫಫ್ ಮದುವೆಯಾಗಿರುವ ಅನಿತಾ ಬೋಸ್ ನಮ್ಮ ಸ್ವಾತಂತ್ರ್ಯ ಸೇನಾನಿ ಸುಭಾಷ್ ಚಂದ್ರ ಬೋಸರ ಮಗಳು!

ಈ ಶಾಲೆ ಸ್ಥಾಪನೆಗೆ ಅಬ್ರಹಾಂರಿಗೆ ನೆರವಾಗಿದ್ದ ಅವರ ನಂಬಿಕಸ್ತ ಗೆಳತಿ ಹಾಗೂ ಶಾಲಾ ಟ್ರಸ್ಟಿಯಾಗಿದ್ದ ಮೇರಿ ಫರ್ನಾಂಡೀಸ್ ಇಂಡಿಯನ್ ಆರ್ಮಿಯಲ್ಲಿ ಮೇಜರ್ ಹುದ್ದೆಯಲ್ಲಿದ್ದವರು. ಈಗ ಆಕೆಯ ದತ್ತು ಮಗನ ಮಕ್ಕಳೆಂದು ಹೇಳಿಕೊಂಡು ಟೆನಿಸನ್ ಫರ್ನಾಂಡೀಸ್ ಸೋದರರು ಕಾಣಿಸಿಕೊಂಡಿದ್ದಾರೆ.

ವೈಟ್‌ಫೀಲ್ಡ್‌ನ ಅಂಧ ಮಕ್ಕಳ ಡಿವೈನ್ ಸ್ಕೂಲ್‌ಗೆ ಸೇರಿರುವ ಒಂಭತ್ತೆಕರೆ ಭೂಮಿಗಾಗಿ ಭೂಗಳ್ಳರು ಒಂದು ಸ್ಕೆಚ್ ಹಾಕಿದ್ದಾರೆ. ನೂರು ಕೋಟಿಯ ಆಸ್ತಿ ಇದು. ಡಾನ್ ಮುತ್ತಪ್ಪ ರೈ, ಪೋಲೀಸ್ ನಾರಾಯಣಗೌಡ ಕೈ ಹಾಕಿರುವ ಈ ಡೀಲ್ ವಿರುದ್ಧ ಸೆಣಸಾಡಲು ಜರ್ಮನ್ ಸಚಿವ ಮಾರ್ಟಿನ್ ಫಫ್, ನೇತಾಜಿ ಸುಭಾಷ್ ಚಂದ್ರ ಬೋಸರ ಮಗಳು ಅನಿತಾ ಬೋಸ್ ಬಂದು ಹೋಗಿದ್ದಾರೆ. ಅಸಲಿ ಹಕ್ಕುದಾರರು-ನಕಲಿ ವಾರಸುದಾರರ ಈ ಕದನ ಒಂದು ರೋಮಾಂಚನಕಾರಿ ಪತ್ತೇದಾರಿ ಸಿನಿಮಾದಂತಿದೆ.

ಹತ್ತು ರೂಪಾಯಿ ನೋಟು ಹೇಗಿರುತ್ತೆ ಎಂಬುದನ್ನು ಅರಿಯದ ಒಂದು ನೂರಾ ನಲವತ್ತು ಅಂಧ ಮಕ್ಕಳು ಈ ನೆಲಗಳ್ಳ ದುಷ್ಟ ಸೈನ್ಯದ ವಿರುದ್ಧ

ಅಬ್ರಹಾಂ ದಿ ಗ್ರೇಟ್

ಈ ಡಿವೈನ್ ಲೈಟ್ ಅಂಧ ಮಕ್ಕಳ ಶಾಲೆ ಸ್ಥಾಪಿಸಿದ ರೆವರೆಂಡ್ ಫಾದರ್ ಅಬ್ರಹಾಂ ಹುಟ್ಟು ಕುರುಡರಲ್ಲ. ಉತ್ತಮ ವಾಗ್ಮಿ, ಬೋಧಕರೆಂದೇ ಖ್ಯಾತರಾಗಿದ್ದ ಈ ಸುರದ್ರೂಪಿ ಅಬ್ರಹಾಂ ಮಧ್ಯ ವಯಸ್ಸಿನಲ್ಲಿ ಕಣ್ಣು ಕಳೆದುಕೊಂಡವರು. ಅವರೊಮ್ಮೆ ಭಾಷಣಕ್ಕೆಂದು ಅಮೆರಿಕೆಗೆ ಹೋದವರು ಬೆಂಗಳೂರಿನಲ್ಲೊಂದು ಅಂಧ ಮಕ್ಕಳ ವಸತಿ ಶಾಲೆ ಕಟ್ಟುವ ಕನಸಿನೊಂದಿಗೆ ವಾಪಸ್ ಹೊರಟರು. ಮಾರ್ಗ ಮಧ್ಯೆ ವಿಯೆನ್ನಾ ನಗರದಲ್ಲಿ

ಬಿಳಿದಾಳಿ ಈಕ್ಷ

ವಶಕ್ಕೆ ತೆಗೆದುಕೊಂಡರು. ಇದೆಲ್ಲದರಿಂದ ನೊಂದ ಅಂಧ ಫಾದರ್ ಅಬ್ರಹಾಂ ಕೇರಳಕ್ಕೆ ಹೋದರು. ಈ ನಡುವೆ 1973 ರಲ್ಲಿ ಪೂನಾದಲ್ಲೇ ಚಿಕ್ಕವಯಸ್ಸಿನ ಮೇರಿ ಫರ್ನಾಂಡೀಸ್ ನಿಗೂಢವಾಗಿ ಸತ್ತರು. ಈ ಸುದ್ದಿ ಕೇಳಿಯೇ ಫಾದರ್ ಅಬ್ರಹಾಂ ಹೃದಯಾಘಾತದಿಂದ ಕೇರಳದಲ್ಲೇ ಪ್ರಾಣ ಬಿಟ್ಟರು. ಅಷ್ಟರಲ್ಲಾಗಲೇ ಮಾರ್ಟಿನ್ ಫಫ್ ಜರ್ಮನಿಗೆ ವಾಪಸ್ ಹೋಗಿಯಾಗಿತ್ತು. ಅಲ್ಲಿಗೆ ಒಂಭತ್ತೆಕರೆ ಆಸ್ತಿ, ಅಂಧರ ಶಾಲೆ ಹಾಗೂ ಇಡೀ ಟ್ರಸ್ಟ್ ಏಸುವಿನ ಸೇವಕ ಲೂರ್ದುಸ್ವಾಮಿಗಳ ಕಂಟ್ರೋಲಿಗೆ ಬಂದಂತಾಯಿತು. ಟ್ರಸ್ಟಿನ ಸಮಸ್ತ ಆಸ್ತಿ ದಾಖಲೆಗಳು ಅವರ ಕೈ ಸೇರಿದ್ದವು.

ದತ್ತು ಮಕ್ಕಳೂ-ನಲ್ಲಿ ರಿಹೇರಿಯುವನೂ

ಇನ್ನೇನು ಟ್ರಸ್ಟ್‌ನ ಸಮಸ್ತವೂ ಲೂರ್ದುಸ್ವಾಮಿಯ ಕೈ ಸೇರಿತೆನ್ನುವಷ್ಟರಲ್ಲಿ ಈ ಪುಣ್ಯಾತ್ಮನಿಗೆ ವ್ಯಾಟಿಕನ್‌ನ ಪೋಪ್ ಜಾನ್ ಪಾಲ್‌ರಿಂದಲೇ ಕರೆ ಬಂತು. ಲೂರ್ದುಸ್ವಾಮಿ ಅಲ್ಲಿ ಕಾರ್ಡಿನಲ್ ಹುದ್ದೆಗೆ ನೇಮಕಗೊಂಡಿದ್ದ. "ದೇವರೇ ನನ್ನನ್ನು ಕ್ಷಮಿಸು, ಬೆಂಗಳೂರಿನಲ್ಲಿ ನಾನೇನು ಮಾಡಿದ್ದೇನೆಂಬುದು ವ್ಯಾಟಿಕನ್‌ಗಾಗಲಿ,

ನಾರಾಯಣ ಗೌಡರ ರಿಯಲ್ ಎಸ್ಟೇಟ್ ಪೋಲೀಸ್ ಏಜನ್ಸಿ

ನಗರದ ಜಾಯಿಂಟ್ ಕಮಿಷನರ್ ಆಫ್ ಪೋಲೀಸ್ ನಾರಾಯಣಗೌಡರಿಗೆ ಪೋಲೀಸ್ ಕೆಲಸಕ್ಕಿಂತಾ ಲ್ಯಾಂಡ್ ಡೀಲ್‌ಗಳಲ್ಲೇ ಜಾಸ್ತಿ ಆಸಕ್ತಿ, ರಕ್ಷಣಾ ವೇದಿಕೆಯ ನಾರಾಯಣಗೌಡ, ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರನ ಚಿಕ್ಕ ಸೈಟ್ ಡೀಲುಗಳಿಂದ ಹಿಡಿದು ದೊಡ್ಡಬಳ್ಳಾಪುರ ಡಿವೈಎಸ್ಪಿಯಾಗಿದ್ದ ಕೃಷ್ಣಪ್ಪನ ಜೊತೆ ಕೋಗಿಲು ಗ್ರಾಮದ ಎಂಟಕರೆ ಜಮೀನಿನ ಜಗಳದ ತನಕ ಯಾವುದೇ ಡೀಲ್ ಬರಲಿ ಐಪಿಎಸ್‌ನಾ ಗೌಡರು 'ನೋ' ಅಂದವರೇ ಅಲ್ಲ, ಮೂಲತಃ ಕೆಎಸ್‌ಆರ್‌ಪಿಯಿಂದ ಬಂದಿದ್ದರೂ ದೇವೇಗೌಡರ ಕೃಪೆಯಿಂದ ಐಪಿಎಸ್ ಎನಿಸಿಕೊಂಡ ನಾರಾಯಣಗೌಡರಿಗೆ ಬೆಂಗಳೂರಿನ ತುಂಬಾ ವಿವಾದಿತ ಭೂ ವ್ಯವಹಾರಗಳ ನಂಟಿದೆ.

ಈ ದಿವೈನ್ ಲೈಟ್ ಸ್ಕೂಲಿನ ಗಲಾಟೆಗಳಲ್ಲೂ ನಾರಾಯಣ ಗೌಡರ ಕೈವಾಡವಿರುವ ಬಗ್ಗೆ ರೂಮರ್‌ಗಳಿವೆ. ಕಂತೆಗೆ ತಕ್ಕ ಬೊಂತೆ ಎಂದು ಇದರಲ್ಲಿ ಈಗ ಮುತ್ತಪ್ಪ ರೈ ಕೂಡ ಮೂಗು ತೂರಿಸಿದ್ದಾನೆ. ಕಿರಿ ಟೆನಿಸನ್ ಯಾರ ಮೂಲಕವೋ ರೈನ ಖಾಸಗಿ ಕೋರ್ಟಿಗೆ ಈ ಕೇಸ್ ಒಪ್ಪಿಸಿದ್ದಾನೆ. ಸಂಯುಕ್ತ ಜನತಾ ದಳದ ನಾಯಕ ಶ್ರೀಪತಿಯವರನ್ನೂ ಕೂಡಾ ಒಮ್ಮೆ ರೈ ಬಿಡದಿಗೆ ಕರೆಸಿಕೊಂಡು ಅವರ ವಕೀಲ ಮಿತ್ರ ಸುಧೀಂದ್ರರಿಗೆ ಫೋನ್‌ನಲ್ಲಿ ಕೇಸ್‌ನಿಂದ ಹಿಂದೆ ಸರಿಯುವಂತೆ ಹಿತವಚನ ರವಾನಿಸಿದ್ದಾನೆ.

ಒಂದು ನೂರು ಕೋಟಿಯ ಆಸ್ತಿಯ ಪ್ರಭೆ ಎಂತಾ ಸಮಾಜ ಸುಧಾರಕರನ, ಕಾನೂನು ಪಾಲಕನ ಕಣ್ಣನ್ನು ಕುರುಡಾಗಿಸಿ ಬಿಡುತ್ತದೆ ಅಲ್ಲವೇ!


ಜರ್ಮನ್ ಸಚಿವ ಮಾರ್ಟಿನ್ ಫಫ್ ಹಾಗೂ ಪತ್ನಿ ಸುಭಾಷ್ ಚಂದ್ರ ಬೋಸ್ ಮಗಳು ಅನಿತಾ ಬೋಸ್


ಸೌಂದರ್ಯ ಸೂರ್ಯಾಸ್ತದ ಅಂಚಿನ ಪ್ರಭೆ -ಬ್ಲಿಸ್ ಕಾರ್ಮನ್



ಡಿವೈನ್ ಸ್ಕೂಲ್‌ನ ಅಂಧ ಮಕ್ಕಳು

ಡಿವೈನ್ ಸ್ಕೂಲ್ ಯಾರಿಗಾಗಿ

ಬೆಂಗಳೂರಿನ ವೈಟ್‌ಫೀಲ್ಡ್ ಹೆಸರಿಗೆ ತಕ್ಕಂತೆ ಮೊದಲಿನಿಂದಲೂ ಯುರೋಪಿಯನ್ನರ ತಾಣವಾಗಿದ್ದ ಏರಿಯಾ. ಜಾಗತೀಕರಣದ ಯುಗದಲ್ಲಂತೂ ಸಾಫ್ಟ್‌ವೇರ್ ಕಂಪನಿಗಳು, ವಿದೇಶಿ ವ್ಯಾಪಾರಿಗಳ ಅಡ್ಡೆಯಾಗಿಹೋಗಿದೆ ಇದು. ಈಗ ITPL ಕಂಪನಿಯ ಎದುರಿಗೆ ಇರುವ ಡಿವೈನ್ ಲೈಟ್ ಸ್ಕೂಲ್ ಫಾರ್ ಬ್ಲೈಂಡ್‌ನ ಒಂಭತ್ತೆಕರೆ ಜಮೀನಿಗೆ ಅನಾಮತ್ತು ಒಂದು ನೂರು ಕೋಟಿ ಬೆಲೆಯಿದೆ. 1958 ರಲ್ಲಿ ಇಲ್ಲಿ ಅಂಧ ಮಕ್ಕಳ ಶಾಲೆ ಸ್ಥಾಪಿಸುವಾಗ ಫಾದರ್ ಅಬ್ರಹಾಂಗೆ ಇದ್ಯಾವ ಲೆಕ್ಕಾಚಾರಗಳೂ ಇರಲಿಲ್ಲ. ನಡುವಯಸ್ಸಿನಲ್ಲಿ ಕಣ್ಣು ಕಳೆದುಕೊಂಡ ಅಬ್ರಹಾಂರವರಿಗೆ ಅಂಧರಿಗಾಗಿಯೇ ಒಂದು ಶಾಲೆ ಸ್ಥಾಪಿಸಿ ಅವರು ಯಾವ ರೀತಿಯಲ್ಲೂ ಕೀಳರಿಮೆ ಅನುಭವಿಸದಂತೆ ಬಾಳಿ ಬದುಕಲೆಂಬ ಗುರಿಯಿತ್ತು. ಅಂಧರಿಗೆ ಕೇವಲ ವಿದ್ಯೆ ನೀಡುವುದರ ಬದಲಾಗಿ ಅವರ ಸ್ವಯಂ ಉದ್ಯೋಗ ಮಾಡಿ ಸ್ವಾವಲಂಬಿಗಳಾಗಿ ಬದುಕುವ ಸ್ಕಿಲ್‌ಗಳನ್ನು ಕಲಿಸಲು ಅವರು ಏರ್ಪಾಡು ಮಾಡಿದ್ದರು.



ಸುಧೀಂದ್ರ

ಅಂತಹ ಹಂಬಲ್ ಮನುಷ್ಯನ ಮೇಲೆ ಮಾದಕ ವಸ್ತು ಸಾಗಾಣಿಕೆಯ ಆರೋಪ ಹೋರಿಸಿ ಜೈಲಿಗೆ ಹಾಕಿಸಿ ಮೀಸೆ ತಿರುವಿಕೊಂಡಿದ್ದು ಆರ್ಚ್‌ಬಿಷಪ್ ಲೂರ್ದುಸ್ವಾಮಿ. ಫಾದರ್ ಅಬ್ರಹಾಂ ಮೃತಪಟ್ಟ ನಂತರವೂ ಡಿವೈನ್ ಶಾಲೆ ಬೆಳೆಯಿತು. ಜೊತೆಗೆ ಬೆಂಗಳೂರೂ ಬೆಳೆದು ಇಡೀ ವೈಟ್‌ಫೀಲ್ಡ್ ಶ್ರೀಮಂತ ಕುಳಗಳ ವಶವಾಯಿತು. ಎಕರೆ ಭೂಮಿ ಬೆಲೆ ಕೋಟಿಗೇರಿತು. ಆಗಲೇ ದಿಕ್ಕು ದೆಸೆ ಇರದಿದ್ದ ಡಿವೈನ್ ಸ್ಕೂಲ್ ಮೇಲೆ ಭೂಗಳ್ಳ ಮಾಫಿಯಾಗಳ ಕಣ್ಣು ಬಿತ್ತು. ನಕಲಿ ದಾಖಲೆಗಳು, ವಾರಸುದಾರರು ಹುಟ್ಟಿಕೊಂಡರು. ಈ ಟೆನಿಸನ್ ಬ್ರದರ್ಸ್ ಎಂತಾ ಖನಾತಿಗಳೆಂದರೆ ಅವರ ತಂದೆ ಟೆನಿಸನ್ ಫರ್ನಾಂಡೀಸ್ ಎಂಬುವನು ಟ್ರಸ್ಟೀ ಮೇರಿ ಫರ್ನಾಂಡೀಸ್‌ರ ದತ್ತು ಪುತ್ರ ಎಂದು ಹೇಳಿಕೊಂಡು ಈ ಆಸ್ತಿ ಮೇಲೆ ಹಕ್ಕು ಚಲಾಯಿಸಲು ಹೊರಟಿದ್ದಾರಷ್ಟೇ. ಆದರೆ ಪ್ರಕರಣ ಕೋರ್ಟಿಗೆ ಹೋದಾಗ ವಕಾಲತ್‌ಗೆ ಈ ದಿವಂಗತ ಟೆನಿಸನ್‌ನ ಪತ್ನಿ ಊರ್ಸಿಲಾಳ ಸಹಿಯೇ ಇರಲಿಲ್ಲ. ಅವಳು ಮಾನಸಿಕ ಅಸ್ವಸ್ಥಳೆಂಬುದೂ ನಂತರ ಪತ್ತೆಯಾಯಿತು. ಈ ವಿಚಾರ ಕೋರ್ಟಿಗೆ ಹೇಳದೆ ಮುಚ್ಚಿಡಲಾಗಿತ್ತು. ಮೇರಿ ಪೂನಾದಲ್ಲಿ ಸತ್ತಿದ್ದರೆ ತಿರುವನಂತಪುರದಲ್ಲಿ ಸತ್ತ ದಾಖಲೆ ಸೃಷ್ಟಿಸಿದ್ದರು.



ಜೂನಿಯರ್ ವಕೀಲರುಗಳಾದ ಹೇಮಂತ್, ನರೇಂದ್ರ ಮತ್ತು ವಿಜಯ್‌ಕುಮಾರ್

ಇದನ್ನೆಲ್ಲಾ ಪತ್ತೆ ಹಚ್ಚಿದ್ದು ವಕೀಲ ಸಿ.ವಿ. ಸುಧೀಂದ್ರ ಮತ್ತವರ ಜೂನಿಯರ್‌ಗಳಾಗ ನರೇಂದ್ರ, ವಿಜಯ್‌ಕುಮಾರ್ ಹಾಗೂ ಹೇಮಂತ್.

ಅಂಧ ಮಕ್ಕಳ ಶಾಲೆಗೆ ಸೇರಬೇಕಾದ ಈ ನೂರು ಕೋಟಿ ಬೆಲೆಯ ಆಸ್ತಿ ಕಾಪಾಡಲು ಕಾನೂನು ಹೋರಾಟ ನಡೆಸುತ್ತಿರುವ ಹಿರಿಯ ವಕೀಲ ಸಿ.ವಿ. ಸುಧೀಂದ್ರ ಆದಕ್ಕಾಗಿ ನಯಾಪೈಸೆ ಫೀಸ್ ಕೂಡ ಕೇಳಿಲ್ಲ. ಸುಮ್ಮನಾಗುವಂತೆ ಫೋನ್ ಮೂಲಕ ಆದೇಶಿಸಿದ ಸಮಾಜಸೇವಕ ಮುತ್ತಪ್ಪ ರೈಗೂ ಕವಡೆ ಕಾಸಿನ ಬೆಲೆ ನೀಡಿಲ್ಲ. ಕೋಟ್ಯಂತರ ರೂ ಹಣದ ಆಮಿಷ ಒಡ್ಡಿದವರಿಗೂ ಶರಣಾಗಿಲ್ಲ. ಸುಧೀಂದ್ರರಿಗೆ ಈಗಲೂ ನಿತ್ಯ ಬೆದರಿಕೆಯ ಫೋನ್ ಕರೆಗಳು ಬರುತ್ತಲೇ ಇವೆ. ಆದರೂ ಅಂಧ ಮಕ್ಕಳ ಪರವಾದ ಅವರ ಕಮಿಟ್‌ಮೆಂಟ್ ಚೂರೂ ಕದಲಿಲ್ಲ.

ಸದ್ಯದ ಪರಿಸ್ಥಿತಿಯಲ್ಲಿ ನೂರಾ ನಲವತ್ತು ಅಂಧ ಮಕ್ಕಳಿರುವ ಶಾಲೆಗೆ ನೆರವು ಬೇಕಿದೆ. ಊಟ-ಬಟ್ಟೆ-ನಗದು ರೂಪದಲ್ಲಿ ಯಾರಾದರೂ ನೆರವಾದರೆ ಅವರೂ ನಿಮ್ಮನ್ನು ನೆನೆದುಕೊಂಡಾರು.

ಪ್‌ಗಾಗಲಿ ಗೊತ್ತಿಲ್ಲ" ಎಂದು ಜಪಿಸುತ್ತಾ ಲೂರ್ದು
ಟ ಇಟಲಿಗೆ ಹಾರಿ ಹೋದ. ಆದರೆ ಹಾಗೆ
ಲಗುವ ಮುನ್ನ ಅಂಧರ ಶಾಲಾ ಕಟ್ಟಡದ ಮೇಸ್ತ್ರಿ
ಗಿದ್ದ ಥಾಮಸ್‌ನನ್ನು ಟ್ರಸ್ಟಿನ ಅಧ್ಯಕ್ಷನನ್ನಾಗಿಯೂ,
ಟರ್ ರವೀಂದ್ರರನ್ನು ಸೆಕ್ರೆಟರಿಯಾಗಿಯೂ, ಅಂಧ
ಳ ನರ್ಸ್ ಕಾಂತಿಯನ್ನು ಟ್ರಸ್ಟಿಯಾಗಿಯೂ ಕೂರಿಸಿ
ರಟ. ಆಶ್ಚರ್ಯವೆಂದರೆ ಇವರ್‍ಯಾರಿಗೂ ಯಾವುದೇ
ತ್ಮಿಕ ಹಿನ್ನೆಲೆಯಾಗಲಿ, ಸಮಾಜ ಸೇವೆಯ ತುಡಿತ
ಲಿ ಇರಲಿಲ್ಲ. ಈ ಲೂರ್ದುಸ್ವಾಮಿಗೆ ತನ್ನ ಗೈರು
ರಿಯಲ್ಲೂ ಟ್ರಸ್ಟನ ಮೇಲೊಂದು ಕಂಟ್ರೋಲಿರ
ತ್ತಷ್ಟೇ. ಈ ಮಧ್ಯೆ ಫೌಂಡರ್ ಟ್ರಸ್ಟಿ ದಿವಂಗತ
ರಿಯ ಮಗಳು ಮೆಬಲ್ ಹಾಗೂ ಗಂಡ ಜಾಲಿಗೆ
ಮೇಲೆ ಹತೋಟಿ ಸಿಗದೆ, ಯಾವ ಲಾಭವೂ
ದೇ ಕೇರಳಕ್ಕೆ ಹೋದರು. ಹಿಂದೆ ಇವರಿಬ್ಬರ
ುವೆ ಮಾಡಿಸಿದ್ದ ಫಾದರ್ ಅಬ್ರಹಾಂ ಮುಂದಿನ
ಗಳಲ್ಲಿ ಕೇರಳಕ್ಕೆ ಹೋಗಿ ಪ್ರಾಣ ಬಿಟ್ಟಾಗ ಮೆಬಲ್
ೂ ಜಾಲಿ ಎದುರಿಗಿದ್ದರು.

ಇದೆಲ್ಲ ಘಟಿಸಿದ ನಂತರ 1997 ರಲ್ಲಿ ಏಕಾಏಕಿ
ಸನ್ ಬ್ರದರ್ಸ್‌ಗಳೆಂಬ ನಾಲ್ಕು ಮಂದಿ ಈ ಟ್ರಸ್ಟ್
ೂ ಒಂಭತ್ತೆಕರೆ ಜಾಗ ತಮ್ಮದೆಂದು ಪ್ರತ್ಯಕ್ಷವಾದರು.
ರ ಪ್ರಕಾರ ಫೌಂಡರ್ ಟ್ರಸ್ಟಿ ಮಿಲಿಟರಿ ಆಫೀಸರ್
ರಿ ಫರ್ನಾಂಡೀಸರ ದತ್ತು ಮಗ ಟೆನಿಸನ್ ಫರ್ನಾಂ
ಹಾಗೂ ಆತನ ಪತ್ನಿ ಊರ್ಸಿಲಾ ಟೆನಿಸನ್‌ರ
ಳಾಗಿದ್ದರು ಅವರು. ಆದರೆ ಕ್ರಿಶ್ಚಿಯನ್ ಪರ್ಸನಲ್
ಪ್ರಕಾರ ಯಾರನ್ನೇ ಆಗಲಿ ದತ್ತು ಮಕ್ಕಳನ್ನು
ದು ಆಸ್ತಿಗೆ ಉತ್ತರಾಧಿಕಾರಿಯಾಗಿಸಲು ಅವಕಾಶ
ಲ್ಲ...... ಕೋರ್ಟು ಪ್ರಕ್ರಿಯೆ ಹೊರತುಪಡಿಸಿ.

ವಕೀಲರಾದ ಸಿ.ವಿ. ಸುಧೀಂದ್ರ ಈ ಪಾಯಿಂಟ್
ದು ಈ ಟೆನಿಸನ್ ಬ್ರದರ್ಸ್ bother ಆಗುವಂತೆ
ಡಿದ್ದಾರೆ.

ಈ ಮಧ್ಯೆ ಕೇರಳದ ತಿರುವನಂತಪುರ ಸಿವಿಲ್
ರ್ಟಿನಲ್ಲಿ ಸ್ಥಳೀಯ ಸಣ್ಣ ವಿಷಯವೊಂದರ ನೆಪದಲ್ಲಿ
ಸನ್ ಬ್ರದರ್ಸ್‌ಗಳು ತಾವೇ ಅಂಧ ಶಾಲೆಯ ಟ್ರಸ್ಟಿ
ರಿಯ ಉತ್ತರಾಧಿಕಾರಿಗಳೆಂಬ ಮಾನ್ಯತೆ ಪಡೆದಿದ್ದರು.
ಂಜರಾಪೋಲು ದಾಖಲ್ ಹಿಡಿದೇ ಬೆಂಗಳೂರಿಗೆ
ದ ಟೆನಿಸನ್ ಬ್ರದರ್ಸ್ ಅಸಿಸ್ಟೆಂಟ್ ಕಮಿಷನರ್
ದಿಷ್ಟು ಲಂಚ, ಸ್ಪೆಷಲ್ ಡಿಸಿ ರಾಮೇಗೌಡನಿ
ದಿಷ್ಟು ಲದ್ದಿ ತಿನ್ನಿಸಿ ಟ್ರಸ್ಟಿನ ದಾಖಲೆಗಳಿಗೆ ತಾವೇ
ಸುದಾರರೆಂಬ ಮಾನ್ಯತೆ ಗಿಟ್ಟಿಸಿದರು. ಪೋಲೀಸ್

ಬೆಂಬಲ ಪಡೆದು ಶಾಲೆ ಮೇಲೆ ದಾಳಿ ಮಾಡಿದರು. ಅಷ್ಟೇ ಅರ್ಜೆಂಟಾಗಿ ಯಾರಿಗೂ ಹೇಳದೆ ಕೇಳದೆ ಇಡೀ ಆಸ್ತಿಯನ್ನು ಎಚ್.ಎಚ್. ರುಸ್ತುಂಜಿ ಎಂಬುವನಿಗೆ ಮಾರಿದರು. ಈ ರುಸ್ತುಂಜಿ ಅದೇ ಆಸ್ತಿಯನ್ನು ತಿರುಗಾ ಟೆನಿಸನ್ ಬ್ರದರ್ಸ್ ಹತ್ತಿರ ಒತ್ತೆಯಿಟ್ಟು ಹಣ ಪಡೆದಂತೆ ದಾಖಲೆ ಸೃಷ್ಟಿಸಲಾಯಿತು. ಏಸು ಸ್ವಾಮಿಯ ಪವಾಡ ಹೇಗಿತ್ತೆಂದರೆ ಈ ದೈವಭಕ್ತ ಟೆನಿಸನ್‌ಗಳಿಂದ ಕೋಟ್ಯಾಂ



ಜಾಲಿ ಹಾಗೂ ಮೆಬಿಲ್

ತರ ಬೆಲೆಬಾಳುವ ಆಸ್ತಿ ಖರೀದಿಸಿದ ರುಸ್ತುಂಜಿ ಅಗರ್ಭ ಶ್ರೀಮಂತನಾ ಗಿರಲಿಲ್ಲ. ಬದಲಾಗಿ ಅದೇ ಅಂಧರ ಶಾಲೆಯಲ್ಲಿ ನಲ್ಲಿ ರಿಪೇರಿ ಕೆಲಸ ಮಾಡಿಕೊಂಡಿದ್ದಾತ.

ಇಂತಾ ಪವಾಡ ಪುರುಷ ರುಸ್ತುಂಜಿ ಆಸ್ತಿ ಮಾರಾಟ ಮಾಡಿದಂತೆ ಹಾಗೂ ಮತ್ತೆ ಅವನಿಂದ ಭೋಗ್ಯ (ಮಾರ್ಟಗೇಜ್) ಹಾಕಿದಂತೆ ದಾಖಲೆ ಸೃಷ್ಟಿಸಿದ್ದ ಟೆನಿಸನ್ ಬ್ರದರ್ಸ್ ದುರುದ್ದೇಶ ಒಂದೇ ಆಗಿತ್ತು. ಅದು ಈ ಆಸ್ತಿ ತಮ್ಮದೇ, ತಾವದನ್ನು ಇಷ್ಟ ಬಂದಂತೆ ವಿಲೇವಾರಿ ಮಾಡಬಲ್ಲವೆಂಬುದನ್ನು ತೋರಿಸಬೇಕಿತ್ತು.

ಬಂದ ರೈ-ಗೌಡನೂ ಸೈ

ಈ ಮಧ್ಯೆ 2002 ರ ಸುಮಾರಿನಲ್ಲಿ ಎಸ್.ಎಂ. ಕೃಷ್ಣ ಸರ್ಕಾರವಿದ್ದಾಗ ಜರ್ಮನ್ ಹಣಕಾಸು ಸಚಿವ ಮಾರ್ಟಿನ್ ಪಫ್ ಬೆಂಗಳೂರಿಗೆ ಬಂದರು. ತಮ್ಮ ಅಧಿಕೃತ ಕಾರ್ಯಭಾರ ಮುಗಿದ ನಂತರ ಪತ್ನಿ ಅನಿತಾ ಬೋಸ್‌ರೊಂದಿಗೆ ತಾವೇ ಕಟ್ಟದ ಅಂಧರ ಶಾಲೆ, ಡ್ರೈವರಾಗಿ ಓಡಾಡಿದ ವೈಟ್‌ಫೀಲ್ಡಿನ ಡಿವೈನ್ ಲೈಟ್ ಶಾಲೆಗೆ ಹೋದರು. ಅಲ್ಲಿ ಅವರಿಗೆ ಗಿಡದ ಬೊಡ್ಡೆಯೊಂದನ್ನು ತೋರಿಸಿ ಫಾದರ್ ಅಬ್ರಹಾಂರ ಸಮಾಧಿ ಎಂದು ತೋರಲಾಯಿತು. ನಂತರ ಮೇರಿ ಮಗಳು




ಮೆಬಿಲ್ ಹಾಗೂ ಜಾಲಿ ನೋಡಲು ಮಾರ್ಟಿನ್ ಕೇರಳಕ್ಕೆ ಹೋದಾಗ ಅಬ್ರಹಾಂರ ಸಮಾಧಿ ಬೆಂಗಳೂರಿನಲ್ಲಿಲ್ಲ ಕೇರಳದ ತ್ರಿಶೂರ್‌ನಲ್ಲಿದೆ ಎಂಬ ಸತ್ಯ ಬಯಲಿಗೆ ಬಂತು.

ಬೆಂಗಳೂರಿನ ಟ್ರಸ್ಟಿಗಳು ಮಾರ್ಟಿನ್‌ರನ್ನು ಹೇಗೋ ಸಾಗಹಾಕಲು ಯಾವುದೋ ಗಿಡದ ಬುಡ ತೋರಿಸಿ ಅದೇ ಅಬ್ರಹಾಂರ ಸಮಾಧಿ ಎಂದು ಬೂಸಿ ಬಿಟ್ಟಿದ್ದರು.

ಈ ಮಧ್ಯೆ ಟೆನಿಸನ್ ಬ್ರದರ್ಸ್‌ಗಳಾದ ಮಾರ್ಕೋಸ್, ಜಾನ್ ಜೇಫ್ರಿ ಹಾಗೂ ಕೇನಿ ಟೆನಿಸನ್ ಚುರುಕಾಗಿ ಓಡಾಡಿ ಟ್ರಸ್ಟ್ ಜಮೀನನ್ನು ಮಾರಲು ಸಿಕ್ಕಸಿಕ್ಕವರ ಜೊತೆಗೆಲ್ಲಾ ಜಿಪಿಎ ಮಾಡಿಕೊಂಡು ಹಣ ಕಿತ್ತಿದ್ದಾರೆ. ಎಸಿ, ಡಿಸಿಗಳೆಲ್ಲಾ ಇವರ ಪರವಾಗೇ ಶಾಮೀಲಾಗಿದ್ದ ಕಾರಣ ಡಿವೈನ್ ಸ್ಕೂಲಿನವರು ದಿನಾಂಕ 19.9.2005 ರಲ್ಲಿ ಆಗಿನ ರೆವಿನ್ಯೂ ಸೆಕ್ರೆಟರಿ ಜಾಮ್‌ದಾರ್‌ಗೆ ಹಾಗೂ ರಾಷ್ಟ್ರಪತಿಗೂ ದೂರಿ ತನಿಖೆಗೆ ಒತ್ತಾಯಿಸಿದ್ದರು.

ವಕೀಲ ಸುಧೀಂದ್ರರ ಪ್ರವೇಶವಾಗಿದ್ದೇ ಈ ಹಂತದಲ್ಲಿ. ಇನ್ನೇನು ಡಿವೈನ್ ಸ್ಕೂಲಿನ ಅಂಧ ಮಕ್ಕಳ ಕತೆ ಮುಗಿದಂತೆಯೇ ಎಂಬ ಹಂತ ತಲುಪಿದ್ದ ಈ ಕೇಸ್‌ನ ಬೆನ್ನು ಹತ್ತಿದ ಸುಧೀಂದ್ರರ ಟೀಂ ಕೇರಳಕ್ಕೆ ಹೋಗಿ ಮೇರಿ ಫರ್ನಾಂ [illegible]



ನಲ್ಲಿ ರಿಪೇರಿ ರುಸ್ತುಂಜಿ



ನಿರ್ಧಾರಗಳನ್ನು ಸಾಬೀತು ಮಾಡುವ, ಟೆನಿಸನ್ ಬ್ರದರ್ಸ್ ಮೇರಿಯ ಅಧಿಕೃತ ವಾರಸುದಾರರಲ್ಲವೆಂಬ ವಾದ ಮಂಡಿಸಿ ಇಡೀ ಪ್ರಕರಣಕ್ಕೆ ಪತ್ತೇದಾರಿ ಶೈಲಿಯ ರೋಮಾಂಚಕ ತಿರುವು ತಂದಿದ್ದಾರೆ. ಇದರಿಂದ ಗಾಬರಿಯಾದ ಟೆನಿಸನ್ ಮುತ್ತಪ್ಪ ರೈ ನೆರವು ಕೇಳಿದಂತಿದೆ. ಈ ರೈಗೂ ತನ್ನ ಹೆಸರು ಕೇಳಿದರೆ ಜನ ನಡುಗಿ ಹೋಗುತ್ತಾರೆಂಬ ಭ್ರಮೆ ಇರುವಂತಿದೆ. ಸಂಯುಕ್ತ ಜನತಾದಳದ ನಾಯಕರೊಬ್ಬರ ಸಮಕ್ಷಮದಲ್ಲಿ ಅಂಧರ ಶಾಲೆಯ ಪರವಾಗಿ ಬಡಿದಾಡುತ್ತಿರುವ ಕೆಲವರಿಗೆ ಫೋನ್ ಮಾಡಿ ಹಿಂದೆ ಸರಿಯುವಂತೆ 'ಮನವಿ' ಮಾಡಿ 'ನೋ' ಅನ್ನಿಸಿಕೊಂಡಿದ್ದಾನೆ. ಮತ್ತೊಂದೆಡೆ ಟೆನಿಸನ್ ಬ್ರದರ್ಸ್ ಈ ಆಸ್ತಿಯನ್ನು, ನೌಶಾದ್, ವಿನ್ಸೆಂಟ್... ಹೀಗೆ ಹಲವರ ಹೆಸರಲ್ಲಿ ಜಿಪಿಎ ಮಾಡಿದ್ದಾರೆ. ಪೋಲೀಸ್ ನಾರಾಯಣ ಗೌಡ ಈ ಬೃಹತ್ ಡೀಲಿನ ಹಿಂದೆ ಇರುವ ಬಗ್ಗೆ ಎಲ್ಲರಿಗೂ ಅನುಮಾನಗಳಿವೆ.

[illegible] ಸುಧಾರಕರಾಗಲು ಹೊರಟಿರುವವರು, ಲಾ ಅಂಡ್ ಆರ್ಡರ್ ನೋಡಿಕೊಳ್ಳಬೇಕಾದವರೆಲ್ಲಾ ಸೇರಿ ಈ ಅಂಧ ಮಕ್ಕಳ ಕುತ್ತಿಗೆಗೆ ಕೈ [illegible]


ಗೆಡ್ಡಾ ಹೊರಬಂದಿದ್ದಾನೆ!

ಆತನ ಜೊತೆ ಸುನೀಲನ ಶಿಷ್ಯ ...ವೇದಿಗೂ ...ನಾಗಿನೆ!

ಇವರಿಬ್ಬರ ಜೊತೆ ಜೈಲಿಂದ ಹೊರಬಿದ್ದ ಮತ್ತೊಬ್ಬನ ಹೆಸರು ಅನಾಲಿ. ಆತ ಕೂಡ ಸುನೀಲನ ಬಂಟನೆ!

ಅಲ್ಲಿಗೆ ಚಿಕ್ಕನ ಕಣ್ ರಾಜೇಂದ್ರನ ಕೊಲೆ ಕೇಸು ಬಿದ್ದು ಹೋದಂತಾಯ್ತು. ಅಣ್ಣನ ಹತ್ಯೆಗೆ ಪ್ರತೀಕಾರ ಕೈಗೊಳ್ಳುವ ತಾಕತ್ತು ಮತ್ತು ಹುಮ್ಮಸ್ಸು ಚಿತ್ರ ನಿರ್ಮಾಪಕ ರಮೇಶ್ ಯಾದವನಿಗಿಲ್ಲ ಎಂಬುದು ಒಂದು ಲೆಕ್ಕಾಚಾರವಾದರೆ, ಆತ ಗೆಡ್ಡನನ್ನು ಸುಮ್ಮನೇ ಬಿಡಲಾರ ಅಂತ ಕೆಲವರು ಹುಯಿಲೆಬ್ಬಿಸಿದ್ದಾರೆ. ಜೈಲಿಂದ ಹೊರಬಿದ್ದ ಗೆಡ್ಡಾ ತನ್ನ ಅಲ್ಲಾಳಸಂದ್ರದ ಮನೆ ಖಾಲಿ ಮಾಡಿ ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದು ಪ್ರಾಣ ಭೀತಿಯಿಂದಲೆ?

ಅಧೋಜಗತ್ತಿನಲ್ಲಿ ... ಗೆಡ್ಡಾ ಸೈಲೆಂಟ್ ಸುನೀಲ ಮತ್ತು ಕೊರಂಗು ನೇತೃತ್ವದಲ್ಲಿ ಒಂದು ಪಡೆಯಾದರೆ ಅದಕ್ಕೆ ವ್ಯತಿರಿಕ್ತವಾಗಿ ಜೇಡರಹಳ್ಳಿ, ಮುಲಾಮು, ಶಿವಮೊಗ್ಗ ನಾಗ, ಬನಶಂಕರಿ ಅರಸಯ್ಯನ ಹಂತಕ ಒಕ್ಕೂಟ. ಎಲ್ಲರ ಕಣ್ಣು ಸುನೀಲನ ಮೇಲೆ. ಆತ ಸದ್ಯದ ಬೆಂಗಳೂರು ಅಂಡರ್‌ವರ್ಲ್ಡ್‌ನ ರೈಸಿಂಗ್ ಸ್ಟಾರ್. ಹಿಂದೆ ಡೆಡ್ಲಿ



ಗೆಡ್ಡಾ ನಾಗ

ಜೈಲಿಂದ ಹೊರಬಿದ್ದದ್ದೇ ಒಂದು ರೌಂಡ್ ಶ್ರೀರಾಂಪುರ, ಪ್ರಕಾಶ್ ನಗರ, ಲಕ್ಷ್ಮಿನಾರಾಯಣಪುರ, ಗಾಯಿತ್ರಿನಗರ, ಮರಿಯಪ್ಪನ ಪಾಳ್ಯ, ಹರಿಶ್ಚಂದ್ರ ಘಾಟ್ ಅಂತ ಸುತ್ತು ಹಾಕಿ ತನ್ನ ಹಳೇ ಶಿಷ್ಯರನ್ನು ಮಾತಾಡಿಸಿ ಎರಡೂ ಕಡೆ ಫಿಟ್ಟಿಂಗ್ ಇಡಬಲ್ಲ ಆಳ್ಗಳಿಗೆ 'ಚಮಕ್' ಕೊಟ್ಟು ಹೋಗುವುದು ಆತನ ಹಳೇ ಚಾಳಿ. ಈ ಬಾರಿ ಹಾಗಾಗಿಲ್ಲ.

ಚಿಕ್ಕನಕಣ್ ರಾಜೇಂದ್ರನ ಕೊಲೆ ಆರೋಪ ಹೊತ್ತು ಜೈಲು ಪಾಲಾದ ಗೆಡ್ಡ ಇಲ್ಲಿಗೆ ಎರಡು

ನನ್ನು ಕೊಂದನೋ ಅದೇ ಕಾರಣಕ್ಕೆ ಬೇರೆ ಯಾರಾ... ತನಗೆ ಮುಹೂರ್ತವಿಟ್ಟರೆ?

ಬಹುಶಃ ಇದೊಂದೇ ಕಾರಣಕ್ಕಾಗಿದ್ದರೆ ಗೆಡ್ಡ ಕೆದಿಸಿಕೊಳ್ಳುತ್ತಿರಲಿಲ್ಲ. ತನ್ನ ಪ್ರಾಣಕ್ಕೇನಾದರೂ ಸಂ... ಕುತ್ತಿದ್ದರೆ ಅದು ಸುನೀಲನ ಕಾರಣಕ್ಕೆ ಎಂಬುದು ಆ... ಚೆನ್ನಾಗಿ ಗೊತ್ತು. ಸದ್ಯ ಸುನೀಲನ ಸುತ್ತ ಜಮೆಗೊ... ಹಂತಕರ್‍ಯಾರೂ ಕಮ್ಮಿಯ ತಾಕತ್ತಿನವರಲ್ಲ. ಈ ... ಗಾಯಿತ್ರಿನಗರದ ಜಗ್ಗನ ಹೆಸರೇ ಮೊದಲಿನದು. ತಮ್ಮ ಪ್ರಸಾದಿಯನ್ನು ಕುಣಿಗಲ್‌ನ ಹಳ್ಳಿಯೊಂದ... ಕೊಂದು ಹಾಕಿದ ಗಾಯಿತ್ರಿನಗರ ಲಕ್ಕಿ ಮತ್ತು ಕ್ಯಾಪ... ರಾಜರ ವಿರುದ್ಧ ಜಗ್ಗನಿಗೆ ಎಂಥಾ ಸಿಟ್ಟಿದೆಯೋ ಅ... ಸಿಟ್ಟು ಸುನೀಲನ ಮೇಲೂ ಇದೆ. ಏಕೆಂದರೆ ... ಕಾಲದಿಂದಲೂ ಲಕ್ಕಿ-ಕ್ಯಾಪ್ಟನ್ ರಾಜರಿಗೆ ಕುಮ್ಮ... ಕೊಟ್ಟುಕೊಂಡೇ ಬ... ವನು ಸುನೀಲ.

ಜೈಲಿಂದ ಔಟ್... ಮನೆಯಿಂದ ನಾಪತ್ತೆ!

ಗೆಡ್ಡನ ಬಲಿಗೆ ಖೆಡ್ಡ?

ಶಿಷ್ಯ ಸುನೀಲನ ಅಸಂಖ್ಯಾತ ದುಷ್ಮನ್‌ಗಳ ಪೈಕಿ ಗೆಡ್ಡಾ ಯಾರಿಗೆ ಟಾರ್ಗೆಟ್? ಗೆಡ್ಡನನ್ನು ಮುಗಿಸಿಬಿಟ್ಟರೆ ಸುನೀಲನ ಅರ್ಧ ಅಟ್ಟಹಾಸ ಅಡಗುತ್ತದೆಯೆಂದು ನಿದ್ದೆಗೆಡಿಸಿಕೊಂಡ ಗ್ಯಾಂಗ್ ಯಾವುದು?

ಜೈಲಿಂದ ಹೊರಬಿದ್ದ ಗೆಡ್ಡನಿಗೆ ಪೋಲೀಸ್ ಭೀತಿಯೆ?

ನಿಜಕ್ಕೂ ರಾಜೇಂದ್ರನ ಕೊಲೆಯಲ್ಲಿ ಆತ ಭಾಗೀದಾರನೆ?

ಹೀಗೆ ಯಾರ ಕಣ್ಣಿಗೂ ಬೀಳದೇ ತನ್ನ ಅಲ್ಲಾಳಸಂದ್ರದ ಮನೆಯನ್ನೂ ಖಾಲಿ ಮಾಡಿದ ಗೆಡ್ಡನ ಅಸಲೀ ಹುನ್ನಾರವೇನು?

ಹೀಗೇ ಹುಟ್ಟಿಕೊಳ್ಳುವ ಗುಲ್ಲು-ಗುಮಾನಿಗಳು ಬೆಂಗಳೂರಿನ ಇಡೀ



ಸುನೀಲ್, ಚಿಕ್ಕನ ಕಣ್ ರಾಜೇಂದ್ರ ಮತ್ತು ...

ಸೋಮನಿಗೆ ಎಂಥಾ ಫಾಲೋಅಪ್ ಇತ್ತೋ ಅದಕ್ಕಿಂತಲೂ ದೊಡ್ಡ ಮಟ್ಟದ ಪಡ್ಡೆ ಹುಡುಗರ ಬೆಂಬಲ ಸುನೀಲನಿಗಿದೆ. ಬೆಂಗಳೂರಿನ ಕೆಲ ಕಾಲೇಜು ಕ್ಯಾಂಪಸ್ಸುಗಳಂತೂ ಸಾರಾಸಗಟಾಗಿ ಸುನೀಲನ ವಶವಾಗಿವೆ. ಸದ್ಯ ಆತ ಜೈಲಿಂದ ಹೊರಬರಲಾರ. ಜೈಲೇ ಆತನ ತಾಕತ್ತು ಮತ್ತು ಸೇಫೆಸ್ಟ್ **hide out.** ಸಾಲದ್ದಕ್ಕೆ ಅನಾಹುತಕಾರಿ ಕೊರಂಗು ಬೇರೆ ಆತನ ಬೆನ್ನಿಗಿದ್ದಾನೆ. ಅವರಿಬ್ಬರೂ ಸದ್ಯ ದುಷ್ಮನ್‌ಗಳ ಕೈಗೆ ಸಿಗುವುದು ದುಸ್ಸಾಧ್ಯ. ಇಂಥಾದ್ದರಲ್ಲಿ ಸಲೀಸಾಗಿ ಕೈಗೆ ಸಿಗುವವನು, ವಯಸ್ಸಾದವನು ಮತ್ತು ಹುಂಬ ಧೈರ್ಯಕ್ಕೆ ಬಿದ್ದು ಎಲ್ಲೆಂದರಲ್ಲಿ ನುಗ್ಗುವ ಖಯಾಲಿ ಇರುವವನು ಗೆಡ್ಡಾ ನಾಗನೆ.

ಅವನನ್ನೇ ಮುಗಿಸಿಬಿಟ್ಟರೆ?

ಅಲ್ಲಿಗೆ ಸುನೀಲನ ಅರ್ಧ ಮೀಟರ್ ಉಡುಗುತ್ತದೆ. ಚಿಕ್ಕನಕಣ್ ರಾಜೇಂದ್ರನ ಹತ್ಯೆಗೂ ಪ್ರತೀಕಾರ ಕೈಗೊಂಡತಾಗುತ್ತದೆ. ಜೊತೆಗೆ ದೀಲುಗಳೂ ಸಲೀಸು, ಕೊಂದವನಿಗೂ ಶ್ರೇಯಸ್ಸು!

ಇದು ಮಿಕ್ಕೆಲ್ಲರಿಗಿಂತಲೂ ಸ್ವತಃ ಗೆಡ್ಡನಿಗೇ ಚೆನ್ನಾಗಿ ಗೊತ್ತಾಗಿದೆ. ಹಿಂದ್ಯಾವತ್ತೂ ಆತ ಈ ರೀತಿ ಕದ್ದೂಮುಚ್ಚಿ ಓಡಾಡಿದವನಲ್ಲ. ಅವನದು ಹುಂಬ ಧೈರ್ಯ. ವಾರಗಳ ಹಿಂದೆ ಬಿಡುಗಡೆಯಾದ ಅಂತ ಸುದ್ದಿಯಾದದ್ದು ಬಿಟ್ಟರೆ ಆತನನ್ನು ನೋಡಿದವರಿಲ್ಲ. ಬಿಡುಗಡೆಯಾದ ಸುದ್ದಿ ಕೇಳಿ ಯಲಹಂಕದ ಅಲ್ಲಾಳಸಂದ್ರದ ಡೊಮಿನಿಯನ್ ಕ್ಲಬ್ ಹಿಂಭಾಗದಲ್ಲಿದ್ದ ಆತನ ಮನೆಗೆ ಮಾತಾಡಿಸಲೆಂದೇ ಬಂದಿದ್ದ ಆತನ ಚಡ್ಡಿ ದೋಸ್ತ್‌ಗಳಿಗೂ ನಿರಾಶೆ ಕಾದಿತ್ತು. ಗೆಡ್ಡನ ಮನೆಗೆ ಬೀಗ ಹಾಕಿತ್ತು. ಅಕ್ಕಪಕ್ಕದವರಿಂದ ಮನೆ ಖಾಲಿ ಮಾಡಿಕೊಂಡು ಹೋದರೆಂಬ ಮಾಹಿತಿ ಬಿಟ್ಟರೆ, ಗೆಡ್ಡ ಏನಾದ? ಎಲ್ಲಿಗೆ ಹೋದ? ಎಂಬುದಕ್ಕೆ ಯಾರಲ್ಲೂ ನಿಖರತೆಯಿಲ್ಲ. ಹಂತಕ ಮನಸ್ಸೇ ಅಂಥಾದ್ದು. ಒಂದು ಹತ್ಯೆಯ ನಂತರ ಕೊಲೆಗಾರನಿಗೆ ಅಂಥಾದ್ದೊಂದು ಫೋಬಿಯಾ ಕಾಡುತ್ತದೆ. ಮನೋಶಾಸ್ತ್ರೀಯ ಪರಿಭಾಷೆಯಲ್ಲಿ ಅದನ್ನು **paronoid psychosis** ಅನ್ನುತ್ತಾರೆ. ತನ್ನನ್ನು ಇಷ್ಟರಲ್ಲೇ ಯಾರೋ ಕೊಲ್ಲಲಿದ್ದಾರೆ ಅನ್ನಿಸಿ ಪಾತಕಿ ವಿಪರೀತ **cautious** ಆಗಿಬಿಡುತ್ತಾನೆ.

ಸದ್ಯ ಗೆಡ್ಡನದೂ ಅದೇ ಸ್ಥಿತಿ. ಚಿಕ್ಕನಕಣ್ ಹತ್ಯೆಗೆ ಇಲ್ಲದಿರಬಹುದು. ಆತ ನೇರಾನೇರ ಕಾರಣನಲ್ಲದಿರಬಹುದು. ಜಿದ್ದಿಗೆ ಬಿದ್ದು ಪ್ರತೀಕಾರಕ್ಕಿಳಿಯಬಲ್ಲ ನಿಯತ್ತಿನ ಶಿಷ್ಯರ್‍ಯಾರೂ ರಾಜೇಂದ್ರನಿಗೆ ಇಲ್ಲದಿರಬಹುದು. ಆದರೆ ಯಾವ ಖ್ಯಾತಿಯ ಹುಚ್ಚಿಗೆ ಬಿದ್ದು ಸುನೀಲ ರಾಜೇಂದ್ರ



ಗಾಯಿತ್ರಿನಗರದ... ಮಗ್ಗುಲಿಗೇ ಇರುವ... ಪ್ರಕಾಶ್ ನಗರ ಹೇ... ಚಿಕ್ಕನಕಣ್ ರಾಜೇಂ... ಅಡ್ಡೆಯಾಗಿತ್ತೋ ಹಾಗೇ ಗೆಡ್ಡ ಮತ್ತು... ಪೋಲೀಸ್ ಎನ್‌ಕೌಂಟರ್‌ನಲ್ಲಿ ಹತನಾ... ಆತನ ತಮ್ಮ ಕಿಟ್ಟಿಗ... ಅಡ್ಡೆಯಾಗಿತ್ತು. ಸುನೀಲನಿಗೂ ಅದು... ತವರೂರು. ಪ್ರಸ್ತುತ... ರಕ್ತಪಾತದ ಬೀಜ ವಿರುವುದೇ ಈ ಪ್ರಕಾಶ್‌ನಗರದಲ್ಲಿ. ಇಲ್ಲಿಗೆ ಇಪ್ಪತ್ತು ವರ್ಷದ ಹಿಂದೆ ಗೆ... ತಂದೆ ಮೇಲೇಗೌಡ... ಇದೇ ಪ್ರಕಾಶ್‌ನಗರ... ನಾಲ್ಕನೇ ಕ್ರಾಸಿನಲ್ಲಿ ಹಸು ಕಟ್ಟಿಕೊಂಡಿದ್ದರು. ಗೆಡ್ಡ ಹಸು ತೊಳೆಯುತ್ತಿದ್ದರೆ ರಾಜೇಂದ್ರ ಬಕೀಟಿನ... ನೀರು ತುಂಬಿಸಿಕೊಡು... ತ್ತಿದ್ದ. ಆ ಕಾಲಕ್ಕೆ ರಾಜೇಂದ್ರನಿಗೆ ಗೆಡ್ಡ... ಗುರು.

ಮುಂದೆ ತನ್ನ ಮತ್ತೊಬ್ಬ ಗುರು ಕಿಳ್ಳಿ ರಾಮಕೃಷ್ಣ... ಮುಗಿಸಿದ ರಾಜೇಂದ್ರ ಕ್ರಮೇಣ ಗುರು ಗೆಡ್ಡನ... ಕತ್ತರಿಸಿದ. ಆತನ ಕೈಯೊಂದು ಶಾಶ್ವತವಾಗಿ ಲಾ... ಆಯಿತು. ಹಾಗೆ ಬೆಳೆದ ಗುರು ಶಿಷ್ಯರ ನಡು... ಜಿದ್ದು ಗೆಡ್ಡನ ತಮ್ಮ ಕಿಟ್ಟಿಯನ್ನು ಬಲಿತೆಗೆದುಕೊಂಡಿ... ಕಿಟ್ಟಿಯ ಶಿಷ್ಯ ಸುನೀಲ. ಇನ್ಯಾವುದೋ ಕಾ... ರಾಜೇಂದ್ರನನ್ನು ಕೊಚ್ಚಿ ಹಾಕಿದ್ದ. ಹಾಗೇ ರಾಜೇಂ... ಹತ್ಯೆಗೂ ಆರು ತಿಂಗಳ ಮುನ್ನ ಗೆಡ್ಡ ಎದ್ದು ನಿಂತ...

ಅದು ಕೇಬಲ್ ವಾರ್!

ಪ್ರಕಾಶ್‌ನಗರದ ಐದನೇ ಕ್ರಾಸಿನಲ್ಲಿ ರಾಜೇಂ... ತಮ್ಮ ಚಿತ್ರ ನಿರ್ಮಾಪಕ ರಮೇಶ್ ಯಾದವನಿಗೊಂ... ಕೇಬಲ್ ಇತ್ತು. ಅದರ ಹೆಸರು ಧನಲಕ್ಷ್ಮಿ ಕೇಬ... ಸರಿಸುಮಾರು ಸಾವಿರದ ಇನ್ನೂರು ಮನೆಗಳಿಗೆ ಕೇಬ... ಕಲ್ಪಿಸಿದ್ದ ರಮೇಶ್ ಯಾದವ್ ತನ್ನ ಅಣ್ಣ ರಾಜೇಂ... ಹೆಸರಲ್ಲೇ ಸಾಕಷ್ಟು ಬೆಳೆದಿದ್ದ.

ಅದೇ ಹೊತ್ತಿಗೆ ಮತ್ತೊಬ್ಬ ತಮಿಳು ರ... ಮಣಿಭಾರತಿ ಕೂಡ ಕೇಬಲ್ ದಂಧೆಗೆ ಕೈಯಿ... ಮಲ್ಲೇಶ್ವರದ ಮಹಮ್ಮದನ್ ಬ್ಲಾಕ್‌ನ ರಾಜಾಮಿ... ಕ್ವಾರ್ಟ್ರಸ್ಸಿನಲ್ಲಿ ಮಣಿಭಾರತಿಯ ತಮ್ಮ ಆಮುರ್ಗ... ಕೇಬಲ್ ಎಳೆದಿದ್ದಕ್ಕೆ ಅಲ್ಲಿ ಮೊದಲೇ ಕೇಬಲ್ ಎಳೆ... ಪ್ರಕಾಶ್ ಎಂಬಾತ ತಿರುಗಿಬಿದ್ದ. ಆತನನ್ನು ರಾಜೇಂದ್ರ... ಎತ್ತಿ ಕಟ್ಟಿದ್ದಾನೆಂಬ ಗುಮಾನಿ ಮಣಿಭಾರತಿಗೆ. ಅ... ಹೊತ್ತಿಗೆ ಮಲ್ಲೇಶ್ವರಂಗೆ ಪೋಲೀಸ್ ಇನ್ಸ್‌ಪೆಕ್ಟರ್ ಆ... ಪ್ರದೀಪ್ ಕುಮಾರ್ ಮಣಿಭಾರತಿಯನ್ನು ಜೈ... ದಬ್ಬಿ ಆತನ ಕೇಬಲ್ ಅಡ್ಡೆಯನ್ನು ರಾಜಾ ಮಿ... ಕ್ವಾರ್ಟ್ರಸ್ಸಿನಿಂದ ಖಾಲಿ ಮಾಡಿಸಿಬಿಟ್ಟರು.

ಅಲ್ಲಿಗೆ ತಮಿಳು ರೌಡಿಗಳ ಪೈಕಿ ಮಣಿಭಾ... ಕಾಲಾಪತ್ಥರ್ ಮತ್ತು ಚಕ್ರೆಯದೇ ಒಂದು ಕೂಟವಾ... ಅದರ ವಿರುದ್ಧ ರಾಜೇಂದ್ರನದೇ ಮತ್ತೊಂ... ಗ್ಯಾಂಗಾಯಿತು. ರಾಜೇಂದ್ರನನ್ನು ಶತಾಯಗತಾ... ಕೇಬಲ್ ಮೂಲಕವೇ ಹಣಿಯಲು ಮಣಿಭಾ... ಕಾಲಾಪತ್ಥರ್ ಗ್ಯಾಂಗ್ ಸಜ್ಜಾಯಿತು. ಈ ಬಾರಿ ಭಾ... ಸರ್ಕಲ್ಲಿನಲ್ಲೊಂದು ಕೇಬಲ್ ಅಡ್ಡೆ ತೆರೆದ ಮಣಿಭಾ... ತಮ್ಮ ಆಮುರ್ಗಂ ಮಿಕ್ಕೆಲ್ಲರೂ ತಿಂಗಳಿಗೆ ನೂ...

▸▸

ಸೈಲೆಂಟ್ ಸುನೀಲನೆಂಬ ಕಾಮನ್ ಎನಿಮಿ!

ಸದ್ಯದ ಜಿದ್ದಾಜಿದ್ದಿಗೆ ಚಿಕ್ಕನ ಕಣ್ ರಾಜೇಂದ್ರನ ಕೊಲೆಯೊಂದೇ ಕಾರಣವಾಗಿದ್ದರೆ ಗೆಡ್ಡ ಅದನ್ನು ಸಲೀಸಾಗಿ ನಿಭಾಯಿಸುತ್ತಿದ್ದ. ಕೊರಂಗು ಎದುರಾಳಿಗಳಾದ ಜೇಡರಹಳ್ಳಿ ಕೃಷ್ಣಪ್ಪನ ಜೊತೆಗಾಗಲಿ, ಮುಲಾಮನ ಜೊತೆಗಾಗಲಿ ಆತನಿಗೆ ಹಗೆಯಿಲ್ಲ. ಜೇಡರಹಳ್ಳಿಯ ಶಿಷ್ಯ ಗಾಯತ್ರಿನಗರದ ಜಗ್ಗನಿಗೂ ಗೆಡ್ಡನ ವಿರುದ್ಧ ತಕರಾರಿಲ್ಲ.

ಆದರೆ ಇವರೆಲ್ಲರಿಗೂ ಸುನೀಲ ಕಾಮನ್ ದುಷ್ಮನ್. ಯಾರ ಕುಚೋದ್ಯವೋ ಗೊತ್ತಿಲ್ಲ, ಕೃಷ್ಣಪ್ಪನ್ನೇ ತೆಗೀತಿನಿ ಎಂದು ಸುನೀಲ ಜೈಲಲ್ಲಿ ಯಾರ ಜೊತೆಗೋ ಹೇಳಿಕೊಂಡಿದ್ದಾನೆಂದು ಸುನೀಲನಿಗಾಗದವರು ಸುದ್ದಿ ಹಬ್ಬಿಸುತ್ತಿದ್ದಾರೆ. ಅಷ್ಟಕ್ಕೂ ಸುನೀಲನಿಗೂ ಜೇಡರಹಳ್ಳಿಗೂ ಏನಕೇನ ಸಂಬಂಧವಿಲ್ಲ. ಸದ್ಯ ಜೇಡರಹಳ್ಳಿ ಸಿಂಡಿಕೇಟಿನಲ್ಲಿ ಗುರುತಿಸಿಕೊಳ್ಳುವ ಮುಲಾಮನನ್ನು 'ತಗೆದೇ ತೆಗೀತಿನಿ' ಅಂತ ಕೊರಂಗು ಇನ್ನೆಲ್ಲೋ ರೈಲು ಬಿಟ್ಟಿದ್ದಾನಂತೆ. ಮಚ್ಚನ ಹತ್ಯೆಯ ನಂತರ ಕೊರಂಗು ಮತ್ತು ಮುಲಾಮನ ಮಧ್ಯೆ ದ್ವೇಷದ ಬೆಂಕಿಬಿದ್ದಿದೆ. ಮಚ್ಚನ ಬಂಟನಾಗಿದ್ದ ಕೋತಿರಾಮ ಸದ್ಯಕ್ಕೆ ಕೊರಂಗು ಜೊತೆಗಿದ್ದಾನೆ. ಇಡೀ ಮಚ್ಚನ ಟೀಮನ್ನು ಈಗ ಲೀಡ್ ಮಾಡುತ್ತಿರುವುದೇ ಕೊರಂಗು. ಇದೇ ಕೊರಂಗು ಗೆಡ್ಡ-ಸುನೀಲನಿಗೂ ಆತ್ಮೀಯನಾದ್ದರಿಂದ ಸದ್ಯ ಬೆಂಗಳೂರಿನ ಮಟ್ಟಿಗೆ ಗೆಡ್ಡಾ ಕೊರಂಗು, ಸುನೀಲರ ಕೂಟಕ್ಕೇ 'ಮೋಸ್ಟ್ ಆಗ್ರೆಸ್ಸೀವ್' ಎಂಬ ಹಣೆಪಟ್ಟಿ ಪ್ರಾಪ್ತಿಯಾಗಿದೆ.

ಇದು ಮಚ್ಚನ ಹತ್ಯೆಯ ನಂತರ ಭುಗಿಲೆದ್ದ ದಾವಾನಲ. ವಿಚಿತ್ರವೆಂದರೆ ಕೊರಂಗು ಎದುರಾಳಿ ಜೇಕೆ-ಗೋಪಾಲಯ್ಯ ಗುಂಪೂ, ಗೆಡ್ಡನ ಎದುರಾಳಿ ಚಿಕ್ಕನ ಕಣ್ ರಾಜೇಂದ್ರನ ಪಳೆಯುಳಿಕೆಗಳೂ ಸುನೀಲನನ್ನು ತಮ್ಮ ಕಾಮನ್ ಎನಿಮಿ ಎಂದೇ ಬಗೆಯುತ್ತಾರೆ. ಮಚ್ಚ ಬದುಕಿದ್ದಷ್ಟೂ ದಿನ ಸುನೀಲನಿಗೆ ಆತ್ಮೀಯನಾಗಿದ್ದ ಆತನ ಟಾರ್ಗೆಟ್ ಅಂತ ಇದದ್ದು ಕಡಬಗೆರೆಯ ಪಾಯ್ಸನ್ ರಾಮು, ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಆತನ ತಮ್ಮ ಬಸವ ಮತ್ತು ತಿಮ್ಮೇನಹಳ್ಳಿಯ ಗೋವಿಂದ. ದುಡುಕಿಗೆ ಬಿದ್ದು ಜೇಕೆಯ ತಂಟೆಗೆ ಕೈಯಿಟ್ಟ. ಅದಕ್ಕೆ ಕಾರಣರಾಗಿದ್ದು ಮಾಗಡಿ ಶಾಸಕ ಬಾಲಕೃಷ್ಣ. ಮಾಗಡಿಯಲ್ಲಿ ತನ್ನ ರಾಜಕೀಯ ವೈರಿಯಾದ ಜೇಕೆ ವಿರುದ್ಧ ಮಚ್ಚನನ್ನು ಇನ್ನಿಲ್ಲದಂತೆ ಬಳಸಿಕೊಂಡ ಎಮ್ಮೆಲ್ಲೇ ಬಾಲಕೃಷ್ಣ ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಕೂಡ ಜೆಡಿ(ಎಸ್)ಎಂಬ ಒಂದೇ ಕಾರಣಕ್ಕೆ ಮಚ್ಚನ ಕೈಬಿಟ್ಟ. ಮಚ್ಚ ಸಲೀಸಾಗಿ ಗೋಪಾಲಯ್ಯನ ಪಡೆಗೆ ಬಲಿಯಾದ.

ಮಚ್ಚನ ಹತ್ಯೆಯಲ್ಲಿ ಜೇಕೆ ಪಾತ್ರವಿಲ್ಲದಿದ್ದರೂ ಪೋಲೀಸರು ಜೆಡಿ(ಎಸ್) ಹಂಗಿಗೆ ಬಿದ್ದು ಜೇಕೆಯನ್ನು ಮಚ್ಚನ ಕೊಲೆ ಆರೋಪಿಯನ್ನಾಗಿಸಿದ್ದರು. ಸಾಲದ್ದಕ್ಕೆ ಮಚ್ಚನ ಕೊಲೆ ಕೇಸಿನಲ್ಲಿದ್ದ ಮುಲಾಮು ಕೂಡ ಈ ಹೊತ್ತಿಗೆ ಜೇಕೆ ಜೊತೆ ರಾಜಿಯಾಗಿದ್ದ. ಅದೇ ಹೊತ್ತಿಗೆ ಕೊರಂಗು ವಿರುದ್ಧ ಎಲ್ಲೆಂದರಲ್ಲಿ ದಂಡೆತ್ತಿ ಹೋಗುತ್ತಿದ್ದ ಶಿವಮೊಗ್ಗ ನಾಗ ಕೂಡ ತಾನು ಜೇಕೆ ಬಂಟನೆಂದೇ ಹೇಳಿಕೊಂಡ. ಜೇಕೆಯ ಶಿಷ್ಯರಾದ ತಿಮ್ಮೇನಹಳ್ಳಿ ಸೂರಿ ಮತ್ತು ಗೋವಿಂದ ಕೂಡ ಶಿವಮೊಗ್ಗ ನಾಗನ ಜೊತೆ ಅಲ್ಲಲ್ಲಿ ಕಾಣಿಸಿಕೊಂಡರು. ಇದೇ ಶಿವಮೊಗ್ಗ ನಾಗನಿಗೆ ಬನಶಂಕರಿ ಅರಸಯ್ಯ, ಸುಬ್ರಹ್ಮಣ್ಯಪುರದ ಶಿವಕಾಳಿ ಸ್ನೇಹಿತರು. ಆ ಕಾರಣಕ್ಕೇ ಅರಸಯ್ಯನ ಎದುರಾಳಿ ಜಲ್ಲಿ ವೆಂಕಟೇಶ ಮತ್ತು ಜರಗನಹಳ್ಳಿ ಸಂಜೀವ ಸುನೀಲನ ಜೊತೆ ಕೈ ಜೋಡಿಸಿದ್ದರು.



ಸುನೀಲನ ಮತ್ತೊಬ್ಬ ಗಾಡ್‌ಫಾದರ್ ಕೊರಂಗು ಜೊತೆಗಿದ್ದ ಬನಶಂಕರಿ ಲಿಂಗ ಮತ್ತು ಕೋಳಿ ರಾಜೇಶ ಸೇರಿಕೊಂಡು ಇಟ್ಟಮಡು ಜಗ್ಗನನ್ನು ಕೊಂದರು. ಅದಕ್ಕೆ ಪ್ರತಿಕಾರವಾಗಿ ಶಿವಮೊಗ್ಗ ನಾಗನ ಗೆಳೆಯ ಅರಸಯ್ಯ ಬಳ್ಳನನ್ನು ಬಿಟ್ಟು ಕತ್ರಿಗುಪ್ಪೆಯ ಟ್ಯಾಕ್ಟರ್ ರಾಮನನ್ನು ಕೊಲ್ಲಿಸಿದ. ಬಳ್ಳ ಕೂಡ ಶಿವಮೊಗ್ಗ ನಾಗನ ಸಾಥಿಯೇ. ತೀರ ಇತ್ತೀಚೆಗೆ ಬೆಂಗಳೂರು ಸೆಂಟ್ರಲ್ ಜೈಲಲ್ಲಿ ಕೊರಂಗು ಶಿಷ್ಯ ಕಾಟ್‌ರವಿಗೂ ಶಿವಮೊಗ್ಗ ನಾಗನ ಬಂಟ ಯಶವಂತಪುರದ ರಾಬರಿಗಿರಿಗೂ ಹೊಡೆದಾಟವಾಗಿದೆ. ಹಾಗೇ ಅರಸಯ್ಯನ ಶಿಷ್ಯ ವಿಜಿಯನ್ನು ಜರಗನಹಳ್ಳಿ ಸಂಜೀವನ ಗುಂಪು ಜೈಲಲ್ಲೇ ಹಿಡಿದು ಬಡಿದಿದೆ.

ಇವು ಗ್ಯಾಂಗ್‌ವಾರ್ ಜೈಲಿಗೂ ಕಾಲಿಟ್ಟದ್ದಕ್ಕೆ ಉದಾಹರಣೆಗಳಷ್ಟೇ. ಇದರ ಪರಮಾವಧಿಯೆಂಬಂತೆ ಇಲ್ಲಿಗೆ ವಾರದ ಹಿಂದೆ ತುಮಕೂರು ಜೈಲಲ್ಲಿದ್ದ ಕೊರಂಗು, ಆತನ ಸಹಚರರಾದ ಕಾಮಾಕ್ಷಿಪಾಳ್ಯದ ಜಾನಿ ಮತ್ತು ಬನಶಂಕರಿ ಲಿಂಗ ಮುಂತಾದವರಿಗೂ, ಅದೇ ಜೈಲಲ್ಲಿದ್ದ ತಿಮ್ಮೇನಹಳ್ಳಿ ಗೋವಿಂದನ ಶಿಷ್ಯರಾದ ಹೋಟ್ಲು ಪ್ರಕಾಶ ಮತ್ತು ಗೋರಿಲ್ಲಾರಿಗೂ ಬಡಿದಾಟವಾಗಿದೆ. ಅಷ್ಟಕ್ಕೇ ತುಮಕೂರು ಜೈಲಾಧಿಕಾರಿಗಳು ಕೊರಂಗುನನ್ನು ಬೆಳಗಾವಿ ಜೈಲಿಗೆ ರವಾನೆ ಮಾಡಿದ್ದಾರೆ.

ಒಂದೆಡೆ ಜೇಕೆ, ಗೋಪಾಲಯ್ಯ, ಶಿವಮೊಗ್ಗ ನಾಗರ ಕೂಟ, ಮತ್ತೊಂದೆಡೆ ಗೆಡ್ಡಾ-ಕೊರಂಗು-ಸುನೀಲನ ಸಿಂಡಿಕೇಟ್. ಯಾರ ಕೈಗೆ ಯಾರು ಸಿಕ್ಕರೂ ಅಪಾಯ ತಪ್ಪಿದ್ದಲ್ಲ. ಆ ಮಟ್ಟಿಗೆ ಜಿದ್ದಾಜಿದ್ದಿ ಭುಗಿಲೆದ್ದಿದೆ!

ಕೂಗುಮಾರಿಗೇ ಆವಾಜ್!

"ನಮಸ್ಕಾರ ಕಣಣ್ಣ..."

"ನನಗ್ಯಾಕೆ ಬೇಕು ನಿನ್ ನಮಸ್ಕಾರ."

"ಯಾಕಣ್ಣ ಅಂಗಂತೀರಾ."

"ಏಯ್ ಯಾವ್ ನಮಸ್ಕಾರ, ನೀನ್ಯಾವಳೆ."

"ಮರ್ಯಾದೆಯಿಂದ ಮಾತಾಡ್ರೀ...."

"ಏಯ್, ಮುಚ್ಕೋ ಸಾಕು."

* * * * * *

ಕನಕಪುರ ಸಂಸದೆ ಕೂಗುಮಾರಿ ತೇಜಸ್ವಿನಿ ಶ್ರೀರಮೇಶ್ ಮೊನ್ನೆ ಶನಿವಾರ ರಾಮನಗರಕ್ಕೆ ಹೋಗಿದ್ದಾಗ ಮಾಜಿ ಕಾಂಗ್ರೆಸ್ ಶಾಸಕ, ಲೋಕಲ್ ಲೀಡರ್ ಸಿ.ಎಂ. ಲಿಂಗಪ್ಪನೆಂಬುವನು ಆಡಿರುವ ಥರ್ಡ್ ಕ್ಲಾಸ್ ಮಾತುಗಳಿವು. ಇದರಿಂದ ಸಿಟ್ಟಿಗೆದ್ದ ತೇಜಸ್ವಿನಿಯೂ ಜಗಳಕ್ಕೆ ನಿಂತು ಲಿಂಗಪ್ಪ ಮತ್ತವನ ಪಟಾಲಂಗೆ ಚೆನ್ನಾಗಿ ಉಗಿದು ಬಂದಿದ್ದಾರೆ. ಈ ಜಗಳದ ಬಗ್ಗೆ ಬಹುತೇಕ ಕನ್ನಡ ಪತ್ರಿಕೆಗಳು ಬರೆದಿವೆಯಾದರೂ ಜಗಳದಲ್ಲಿ ತೇಜಸ್ವಿನಿ ವಿರುದ್ಧ ಬಳಸಿರುವ ಅನ್ ಪಾರ್ಲಿಮೆಂಟರಿ ಪದಗಳನ್ನು ಸೆನ್ಸಾರ್ ಮಾಡಿ ಪ್ರಕಟಿಸಿವೆ.



ತೇಜಸ್ವಿನಿ

ಕಾಂಗ್ರೆಸ್ ಪಾರ್ಟಿಯೊಳಗೆ ಸಂಸದೆ ತೇಜಸ್ವಿನಿಗೂ ಸಿ.ಎಂ. ಲಿಂಗಪ್ಪ, ಡಿ.ಕೆ. ಶಿವಕುಮಾರ್, ಮಾಗಡಿ ರೇವಣ್ಣನವರುಗಳಿಗೂ ನೂರೆಂಟು ಮನಸ್ತಾಪಗಳಿರಬಹುದು. ಆದರೆ ಈ ಸಿ.ಎಂ. ಲಿಂಗಪ್ಪ ಶಾಸಕನಾಗಿದ್ದವನು. ಕ್ಯಾಬಿನೆಟ್ ದರ್ಜೆಯ ಒಳಚರಂಡಿ ಮಂಡಳಿಗೂ ಅಧ್ಯಕ್ಷನಾಗಿದ್ದವನು. ಆದರೂ ತನ್ನ ಚರಂಡಿ ಬುದ್ಧಿ ಬಿಡದೆ ಪಬ್ಲಿಕ್ ಆಗಿ ತನ್ನದೇ ಪಾರ್ಟಿಯ ಸಂಸತ್ ಸದಸ್ಯೆಯೊಬ್ಬಳಿಗೆ ಹಲ್ಕಾ ಮಾತುಗಳಲ್ಲಿ ಬೈಯ್ದಿದ್ದಾನೆ.

ಈ ಲಿಂಗಪ್ಪನೊಂದಿಗೆ ಕೆ. ರಮೇಶ್ ಅಲಿಯಾಸ್ ಕೊಳಕ ರಮೇಶ್, ರೇವಣಸಿದ್ಧಯ್ಯ, ಹೇಮರಾಜ, ಚಿಕ್ಕೇಗೌಡ, ಪುಟ್ಟಸ್ವಾಮಿಗೌಡ ಎಂಬುವರೂ ತಮ್ಮ ಹೊಲಸು ಬಾಯಿ ಹಾಕಿ ಬೈಯ್ದಾಡಿದ್ದಾರೆ. ಮೈ ಮುಟ್ಟಿ ಎಳೆದಾಡಿದ್ದಾರೆ. ಇಷ್ಟಕ್ಕೂ ಇವರೆಲ್ಲಾ ಕಾಂಗ್ರೆಸ್‌ನವರು. ಕಾಂಗ್ರೆಸ್ ಕಲ್ಚರ್ ಚೆನ್ನಾಗಿ ಜೀರ್ಣಿಸಿಕೊಂಡಿರುವ ಪುಡಾರಿ, ಘಟಿಂಗರು. ಇವರಿಂದ ಬೇರೇನು ತಾನೆ ನಿರೀಕ್ಷಿಸಲಾದೀತು. ತೇಜಸ್ವಿನಿ ಇವರೆಲ್ಲರ ವಿರುದ್ಧ ಈಗ ಪೋಲೀಸರಿಗೆ ಕಂಪ್ಲೇಂಟ್ ಕೊಟ್ಟಿದ್ದಾರೆ.

ಕಾಂಗ್ರೆ ಗಂಡಸರ ಗಾಂಚಾಲಿ

ಜೂನ್ 17 ರ ಶನಿವಾರ ನಡೆದ ಪದವೀಧರ ಕ್ಷೇತ್ರದ ಎಂಎಲ್‌ಸಿ ಎಲೆಕ್ಷನ್ ಪ್ರಚಾರಕ್ಕೆಂದು ಆನೇಕಲ್, ಕನಕಪುರಗಳಲ್ಲಿ ಪ್ರಚಾರಕಾರ್ಯ ಮುಗಿಸಿ ಸಂಜೆ 3.15ರ ವೇಳೆಗೆ ತೇಜಸ್ವಿನಿ ರಾಮನಗರಕ್ಕೆ ಬಂದಾಗ ಅವರೊಂದಿಗಿದ್ದವರು ಇಬ್ಬರೆ. ಒಬ್ಬಾತ ಪತಿ ಶ್ರೀರಮೇಶ್, ಮತ್ತೊಬ್ಬರು. ಅಷ್ಟರಲ್ಲಾಗಲೇ ತಾಲ್ಲೂಕಾಫೀಸಿನ ಎದಿರು ಮಾಜಿ ಕಾಂಗ್ರೆ ಶಾಸಕ ಸಿ.ಎಂ. ಲಿಂಗಪ್ಪ ತನ್ನ ಪುಂಡು ಪಟಾಲಂನೊಂದಿಗೆ ಪೆಂಡಾಲ್ ಹಾಕಿಸಿಕೊಂಡು ಪಾರ್ಟಿ ಅಭ್ಯರ್ಥಿ. ದೇವೇಗೌಡರ ಪರ ಮತ ಕೇಳುತ್ತಿದ್ದ.

ಕನಕಪುರ ಪಾರ್ಲಿಮೆಂಟಿಗೆ ತೇಜಸ್ವಿನಿ ದೇವೇಗೌಡರ ವಿರುದ್ಧ ನಿಂತಾಗ ಇದೇ ಸಿ.ಎಂ. ಲಿಂಗಪ್ಪ ಬಹಳ ಓಡಾಡಿದ್ದ. ಆದರೆ ಗೆದ್ದ ಮೇಲೆ ತೀರಾ ಇತ್ತೀಚೆಗೆ ಬೆಂಗಳೂರಲ್ಲಿ ನಡೆದ ಒಕ್ಕಲಿಗ ಜನಾಂಗದ ಸಭೆಯೊಂದರಲ್ಲಿ ಲಿಂಗಪ್ಪನ ಬಗ್ಗೆ ಟೀಕಿಸಿ ಭಾಷಣ ಮಾಡಿದ್ದರಂತೆ ತೇಜಸ್ವಿನಿ. ಲಿಂಗಪ್ಪ ಅವತ್ತು ಅಲ್ಲಿರದಿದ್ದರೂ ವಿಷಯ ತಿಳಿದು ಕುದ್ದು ಹೋಗಿದ್ದ. ಜೊತೆಗೆ ಕುಮಾರಸ್ವಾಮಿ ಎದಿರು ಸ್ಪರ್ಧಿಸಿ ಸೋತಿದ್ದ ಹತಾಶೆಯೂ ಬೆಳೆದಿತ್ತು. ಸಂಸದೆ ತೇಜಸ್ವಿನಿ ಬೇರೆ ರಾಮನಗರದಲ್ಲಿ ಅನೇಕ ಬಾರಿ ಕುಮಾರಸ್ವಾಮಿ ಜೊತೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಅವೆಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಶಂಕುಸ್ಥಾಪನೆಯೋ, ಉದ್ಘಾಟನೆ ತರದ್ದೋ ಪ್ರೋಗ್ರಾಂಗಳು. ಪ್ರೋಟೋಕಾಲ್ ಪ್ರಕಾರ ಕ್ಷೇತ್ರದ ಸಂಸದರಿಗೂ ಆಹ್ವಾನ ಇದ್ದೇ ಇರುತ್ತದೆ. ಈ ಸಿ.ಎಂ. ಲಿಂಗಪ್ಪ ಮೊನ್ನೆ ಇದನ್ನೇ ಎತ್ತಿ ಆಡಿದ್ದಾನೆ. ಜೊತೆಗೆ ತೇಜಸ್ವಿನಿ ಎಂಪಿ ಫಂಡಿನಿಂದ ರಾಮನಗರಕ್ಕೆ ಏನೂ ಕೊಡುತ್ತಿಲ್ಲ ವೆಂಬ ಅಸಹನೆಯೂ ಅವನಿಗಿತ್ತು.

ಇದೆಲ್ಲಾ ಗೊತ್ತಿದ್ದರೂ ತೇಜಸ್ವಿನಿ ಸೀದಾ ರಾಮ ನಗರಕ್ಕೆ ಹೋಗಿ ತಾಲ್ಲೂಕಾಫೀಸಿನೆದಿರು ಕೂತಿದ್ದ ಲಿಂಗಪ್ಪನನ್ನು ಕಂಡು 'ನಮಸ್ಕಾರ ಕಣಣ್ಣ' ಎಂದಿದ್ದಾರೆ.


ತಕ್ಷಣ ಪಟಾಕಿಯಂತೆ ಸಿಡಿದ ಸಿ.ಎಂ. ಲಿಂಗಪ್ಪ 'ನೀನ್ಯಾವಳೆ' ಎಂಬಲ್ಲಿಂದ ಶುರು ಮಾಡಿ 'ಮುಚ್ಕೊಂಡಿರೆ!' ತನಕ ಮುಂದುವರೆದು 'ಸೂಳೆ' ಎಂಬಲ್ಲಿಗೆ ಬಂದು ನಿಂತಿದೆ. ಲಿಂಗಪ್ಪನ ಈ ಹಲ್ಕಟ್ ಮಾತುಗಳು ಜೆಡಿಎಸ್ ಕಾರ್ಯಕರ್ತರು ಹಾಗೂ ನೂರಾರು ಸಾರ್ವಜನಿಕರೆದಿರೇ ಹೊರಬಂದಿದೆ. ತೇಜಸ್ವಿನಿ ಇದನ್ನು ಪ್ರತಿಭಟಿಸಿದಾಗ ಕೊಳಕ ರಮೇಶ್ ಮೇಲೆದ್ದಿದ್ದಾನೆ. ಈ ರಮೇಶ್ ಕೆಲ ದಿನ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಗೆ ಅಧ್ಯಕ್ಷನಾಗಿದ್ದವನು. ವಿಕೇಂದ್ರೀಕರಣದ ತಲೆ ಬುಡ ಒಂದೂ ಗೊತ್ತಿರದಿದ್ದರೂ ಜಲಾನಯನ ಯೋಜನೆ, ಎಂಜಿನಿಯರಿಂಗ್, ಆರೋಗ್ಯ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳಿಂದ ಭಿಕ್ಷುಕನಂತೆ ಕಾಸೀಸಿಕೊಂಡು ಕಾಲಯಾಪನೆ ಮಾಡಿದ್ದ. ದುರಹಂಕಾರ, ತಲಹರಟೆಗಳಿಗೆ ಫೇಮಸ್ ಆಗಿರುವ ಈ ಅವಿವೇಕಿ ಸಿ.ಎಂ. ಲಿಂಗಪ್ಪನಿಗೆ ಹೇಳಿ ಮಾಡಿಸಿದ ಜೋಡಿಯಂತಿದ್ದಾನೆ. ಅಂತವನು ಮೇಲೆದ್ದು ತೇಜಸ್ವಿನಿಗೆ ಹೊಲಸು ಮಾತುಗಳಲ್ಲಿ ಬೈಯುತ್ತಾ ಎಳೆದಾಡಿದ್ದಾನೆ. ಈ ನೀಚನೊಂದಿಗೆ ಅಂಕನಳ್ಳಿ ರವಿ, ಮಾಜಿ ನಗರ ಸಭೆ ಸದಸ್ಯ ಡಿ.ಎಂ. ಗೌಡ, ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಕಾಂತರಾಜ ಪಟೇಲ, ಅರೇಹಳ್ಳಿ ಚಂದ್ರ, ಹುಣಸನಹಳ್ಳಿ ಚಿಕ್ಕೇಗೌಡ, ಶ್ಯಾನುಭೋಗನಹಳ್ಳಿ ಪುಟ್ಟಸ್ವಾಮಿ ಗೌಡ ಕೂಡ ಸೇರಿಕೊಂಡಿದ್ದಾರೆ. 'ಆಸಿಡ್ ಹಾಕ್ತೀವಿ, ಹೊಡೀತಿವಿ' ಧಮಕಿ ಹಾಕಿದ್ದಾರೆ.



ರಮೇಶ್

ಈ ಪುಂಡು ಕಾಂಗ್ರೆಗಳ ವಿರುದ್ಧ ಕಂಪ್ಲೇಂಟ್ ಕೊಡಲು ಪೋಲೀಸ್ ಸ್ಟೇಷನ್ನಿಗೆ ಹೋಗುವ ಮೊದಲು ತೇಜಸ್ವಿನಿ ಬಟ್ಟೆ ಬದಲಾಯಿಸಿಕೊಂಡು ಹೋದರೆಂದರೆ ಲಿಂಗಪ್ಪನ ಗ್ಯಾಂಗ್ ಇನ್ನೆಷ್ಟು ನೀಚವಾಗಿ ವರ್ತಿಸಿರಬಹುದು ಯೋಚಿಸಿ.

ಈಗ ರಾಮನಗರದ ಐಜೂರು ಸ್ಟೇಷನ್ನಿನಲ್ಲಿ ದೂರು ದಾಖಲಾಗಿದೆ. (ನಂ. 27/2006) ಐಪಿಸಿ ಸೆಕ್ಷನ್ 354, 504, 506, 147, 148 ರಂತೆ ಲಿಂಗಪ್ಪ ಮತ್ತವನ ಪರೋಡಿ ಗ್ಯಾಂಗ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕಾಂಗ್ರೆಸ್‌ನವರ ನೀಚ ಹುಟ್ಟುಗುಣ ಸತ್ತರೂ ತಾನೇ ಹೋಗುತ್ತಾ?



ಸಿ.ಎಂ. ಲಿಂಗಪ್ಪ

-ಬಿಳಿದಾಳೆ ಈಶ

ಬೇರಿಲ್ಲದ ನಾಯಕಿ-ಬೆರಕೆ ನಾಯಕರು

ತೇಜಸ್ವಿನಿ ಪಾರ್ಲಿಮೆಂಟಿಗೆ ಗೆದ್ದು ಹೋಗಿದ್ದು ಒಂದು ಪವಾಡವೇ ಸೈ. ಅದು ಆಕೆಗಿದ್ದ ಅಪ್ಪಟ್ಟ ಜನಪ್ರಿಯತೆ ಹಾಗೂ ಎಲ್ಲಾ ಅಸೆಂಬ್ಲಿ ಸೆಗ್‌ಮೆಂಟುಗಳಲ್ಲೂ ಕಾಂಗ್ರೆ ಲೀಡರ್‌ಗಳು ಓಡಾಡಿದ ಕಾರಣಕ್ಕೆ ಸಿಕ್ಕ ಗೆಲುವಾಗಿತ್ತು. ಕನಕಪುರದಲ್ಲಿ ಡಿ.ಕೆ. ಶಿವಕುಮಾರ್, ರಾಮನಗರದಲ್ಲಿ ಸಿ.ಎಂ. ಲಿಂಗಪ್ಪ, ಚನ್ನಪಟ್ಟಣದಲ್ಲಿ ಯೋಗೀಶ್ವರ್, ಮಾಗಡಿಯಲ್ಲಿ ಎಚ್.ಎಂ. ರೇವಣ್ಣ, ಉತ್ತರಹಳ್ಳಿಯಲ್ಲಿ ಸೋಮಶೇಖರ್ ಕಾಂಗ್ರೆಸ್ ಪಾರ್ಟಿ ಕ್ಯಾಂಡಿಡೇಟ್ ಎಂಬ ಕಾರಣಕ್ಕೆ ತೇಜಸ್ವಿನಿ ಪರ ಓಡಾಡಿದ್ದರು. ಅವತ್ತು ಒಂಟಿಯಾಗಿದ್ದರೂ ಗೆದ್ದ ತೇಜಸ್ವಿನಿ ಇವತ್ತಿಗೂ ಒಂಟಿ ನಾಯಕಿಯೇ. ಆಕೆಗೆ ಒಕ್ಕಲಿಗರೆಂಬ ಜಾತಿ ಮುದ್ರೆ ಇದೆಯಾದರೂ ತನ್ನದೇ ಹಿಂಬಾಲಕರ, ಕಾರ್ಯಕರ್ತರ ಪಡೆ ಇಲ್ಲ. ಕಾಂಗ್ರೆನ ಯಾವ ಶಾಸಕ, ಲೋಕಲ್ ಲೀಡರ್‌ಗಳೂ ಆಕೆಯ ಹಿಡಿತದಲ್ಲಿಲ್ಲ. ಬೆಂಗಳೂರು ಗ್ರಾಮಾಂತರದಲ್ಲಿ ಪ್ರತಿಯೊಬ್ಬ ಕಾಂಗ್ರೆ ನಾಯಕನೂ ಪಾಳೆಯಗಾರರಂತೆ. ಅವರವರ ಕ್ಷೇತ್ರ ಅವರ ಪಾಳೆಯಪಟ್ಟಿದ್ದಂತೆ. ಹಾಗಾಗಿ ಇವರೆಲ್ಲಾ ಬೇರಿಲ್ಲದ ಸಂಸದೆ ತೇಜಸ್ವಿನಿ ತಾವು ಹೇಳಿದಂತೆ ಕುಣಿಯಬೇಕೆಂದು ಧಮಕಿ ಹಾಕುತ್ತಿದ್ದಾರೆ. ಈ ಡಿ.ಕೆ. ಶಿವಕುಮಾರ್ ಒಮ್ಮೆ "ಏನೇ ನನ್ನ ಕೇಳದೆ ಸ್ತ್ರೀ ಶಕ್ತಿ ಸಂಘಕ್ಕೆ 5 ಲಕ್ಷ ಎಂಪಿ ಫಂಡ್ ಕೊಟ್ಟಿದ್ದೀಯಾ ಯಾಕೆ?" ಎಂದು ದಬಾಯಿಸಿದ್ದನಂತೆ.

ಒಟ್ಟಿನಲ್ಲಿ ಕಾಂಗ್ರೆನ ಈ ಬೆರಕೆ ಗಂಡು ನಾಯಕರಿಗೆಲ್ಲಾ ತೇಜಸ್ವಿನಿಯನ್ನು ಕಂಡರೆ ತಾತ್ಸಾರ. ತಮ್ಮಿಚ್ಛೆಯಂತೆ ಕುಣಿಯದಿದ್ದರೆ ಹಲ್ಕಾ ಮಾತು ಬೈಯ್ಯುವಷ್ಟು ತಿರಸ್ಕಾರ.

ಖರ್ಗೆ ಈಗ ತೇಜಸ್ವಿನಿ ಹಾಗೂ ಲಿಂಗಪ್ಪನನ್ನು ಪಾರ್ಟಿ ಕಚೇರಿಗೆ ಕರೆಸಿ ರಾಜಿ ಕಬೂಲಿ ಮಾಡುತ್ತಿದ್ದಾರೆ.

ಅತ್ತ ರಾಮನಗರದಲ್ಲಿ ಲಿಂಗಪ್ಪನ ಚೇಲಾ ಕೊಳಕ ರಮೇಶ್ ತೇಜಸ್ವಿನಿ ವಿರುದ್ಧ ತಾನೊಂದು ಕೌಂಟರ್ ಕಂಪ್ಲೇಂಟ್ ಕೊಡಲು ಹೋಗಿದ್ದನಂತೆ. ಬುದ್ಧಿಯಿರುವವರ್ಯಾರಾದರೂ ಇವನ ಮುಕಳಿ ಮೇಲೊಂದು ಒದ್ದು ಪಾರ್ಟಿಯಿಂದ ಆಚೆ ದೂಡಿದರೆ ಉತ್ತಮ.

ಸಂಸದೆ ತೇಜಸ್ವಿನಿಗೂ ಇದೊಂದು ಪಾಠವಾಗಲಿ. ತೆಳ್ಳಗೆ-ಬೆಳ್ಳಗೆ ಓಡಾಡಿಕೊಂಡು ಜೋರಾಗಿ ಮಾತಾಡಿಕೊಂಡಿರುವುದೇ ರಾಜಕೀಯ ಅಲ್ಲ. ಜೊತೆಗೆ ಎಲೆಕ್ಷನ್‌ಗೆ ನಿಂತಾಗ "ನನ್ನ ಕೈಯಿ-ಬಾಯಿ-ಕಚ್ಚೆ" ಎಲ್ಲಾ ಶುದ್ಧವಾಗಿವೆ ಎಂದು ಹೇಳುವುದೂ ಚುನಾವಣಾ ತಂತ್ರವಲ್ಲ. ಯಾಕೆಂದರೆ ಕಾಂಗ್ರೆಗಳ ಈ ಹಾದಿ-ಬೀದಿ ಒಳಜಗಳ ಮುಂದೆ ಹಾದರದ ಜಗಳವಾಗಬಾರದಲ್ಲ ಅದಕ್ಕೆ.

» » »

ರೂಪಾಯಿಗೆ ಕೇಬಲ್ ಕೊಟ್ಟರೆ ತಾನು ಐವತ್ತು ರೂಪಾಯಿಗೆ ಕೇಬಲ್ ಕಲ್ಪಿಸುತ್ತೇನೆಂದ. Once again ಪ್ರಕಾಶ್‌ನಗರಕ್ಕೇ ಕೇಬಲ್ಲುಗಳನ್ನೆಳೆದ.

ಪ್ರಕಾಶ್ ನಗರ ಹೇಳಿಕೇಳಿ ರಾಜೇಂದ್ರನ ಅಡ್ಡೆ. ಆತನ ತಮ್ಮ ರಮೇಶ್ ಯಾದವ್ ಅಲ್ಲಿನ ಕೇಬಲ್ ಆಪರೇಟರುಗಳ ನಾಯಕ. ಅರ್ಧ ರೇಟಿಗೆ ಮಣಿಭಾರತಿಯ ತಮ್ಮ ಕೇಬಲ್ ಕಲ್ಪಿಸಿದನೆಂದರೆ ರಾಜೇಂದ್ರನ ತಮ್ಮನನ್ನೂ ಸೇರಿಸಿ ಆತನ ಬೆನ್ನಿಗಿರುವ ಮಿಕ್ಕೆಲ್ಲರ ಕೇಬಲ್ ದಂಧೆಯೂ ಮುಳುಗುತ್ತದೆ. ಹಾಗಂಥ ಲೆಕ್ಕಹಾಕಿಯೇ ಮಣಿಭಾರತಿ ತನ್ನ ತಮ್ಮನನ್ನು ಪ್ರಕಾಶ್ ನಗರಕ್ಕೆ ಛೂ ಬಿಟ್ಟಿದ್ದ. ಅವರಿಗೆ ರಾಜೇಂದ್ರನನ್ನು ಹಣಿಯಬೇಕಿತ್ತು.

ಒಂದು ಹಂತದವರೆಗೂ ರಮೇಶ್ ಯಾದವ್ ಜೊತೆಗಿದ್ದ ಪ್ರಕಾಶ್‌ನಗರದ ಕೇಬಲ್ ಆಪರೇಟರುಗಳಾದ [illegible] ರವಿ, ಅಮೃತ್‌ಕುಮಾರ್, ಅರುಳ್, [illegible], ಶ್ರೀನಿಧಿ ರವಿ ಮುಂತಾದವರೆಲ್ಲ ಇದು ರಾಜೇಂದ್ರನ ಮೇಲಿನ ಜಿದ್ದಿಗೆ ಹುಟ್ಟಿಕೊಂಡಿದ್ದೆಂದು ಗೊತ್ತಾಗಿದ್ದೇ ಗೆದ್ದನನ್ನು ಹಿಡಕೊಂಡರು. ಗೆದ್ದ ಸೀದಾ [illegible] ಸರ್ಕಲ್ಲಿನ ಅಮರ್‌ಗಂಗ ಕೇಬಲ್ ಅಡ್ಡೆಗೇ [illegible], ಚಿಕ್ಕ-ಮಣಿಭಾರತಿಯನ್ನು ಅಲ್ಲಿಗೇ ಕರೆಸಿಕೊಂಡು [illegible] ಬಿಟ್ಟ.

ಯಾವತ್ತು ಗೆದ್ದ ಎಂಟ್ರಿಯಾದನೋ ಅಮರ್‌ಗಂಗ [illegible]ಕಾಶ್‌ನಗರದಿಂದ ಕಾಲು ಕಿತ್ತ, ಅಲ್ಲಿಗೆ ಪ್ರಕಾಶ್ [illegible] ಬಹುಪಾಲು ಕೇಬಲ್ ಆಪರೇಟರುಗಳು [illegible] ಕಡೆಗೆ ಬಂದಿದ್ದರು. ಅದೇ ಹೊತ್ತಿಗೆ ಗೆದ್ದ ರಾಜೇಂದ್ರನ ಮನೆ ಪಕ್ಕಕ್ಕೇ ಬಂದು ತನ್ನ ಫೈನಾನ್ಸ್ ಅಡ್ಡೆ ತೆರೆದಿದ್ದ. ಹಾಗಂಥ ರಾಜೇಂದ್ರ ಸುಮ್ಮನಾಗಲಿಲ್ಲ. ಯಾರೋ ಕೇಬಲ್ ಆಪರೇಟರ್ ಒಬ್ಬನ ಮೂಲಕ ಪೀಣ್ಯದ ಇನ್ಸ್‌ಪೆಕ್ಟರ್ ಸುಬ್ಬಣ್ಣನಿಗೆ ದೂರು ಕೊಟ್ಟಂತೆ ಮಾಡಿ, ಗೆದ್ದ ಜೈಲಿಗೆ ಹೋಗುವಂತೆ ನೋಡಿಕೊಂಡ.

ರಾಜೇಂದ್ರನ ಹತ್ಯೆಗೆ ಇದೇ ಮೂಲವಾಯಿತೆ? ಜೈಲಿಂದ ಬಂದು ರಾಜೇಂದ್ರನ ಜೊತೆ ರಾಜಿಯಾದಂತೆ ನಟಿಸಿದ ಗೆದ್ದ ಕ್ರಮೇಣ ಸುನೀಲನನ್ನು ಛೂ ಬಿಟ್ಟನೆ?

ರಾಜೇಂದ್ರನ ಹತ್ಯೆಯಾಗಿದ್ದೇ ಸೀದಾ ಹೈಗ್ರೌಂಡ್ಸ್ ಇನ್ಸ್‌ಪೆಕ್ಟರ್ ಗಚ್ಚಿನಕಟ್ಟಿಯ ಮುಂದೆ ಶರಣಾದ ಗೆದ್ದ ತನಗೂ ಕೊಲೆಗೂ ಏನೇನೂ ಸಂಬಂಧವಿಲ್ಲ ಎಂದೇ ಸಾಧಿಸಿದ್ದ. ಜೈಲಲ್ಲಿ ಸುನೀಲ, ಗೆದ್ದ, ವೇಡಿ, ಅನಾಲಿ, ಪೀಟೆ, ಪಿಸಿ, ಒಂಟೆ ಮುಂತಾದವರೆಲ್ಲ ಒಟ್ಟಿಗೇ ಇದ್ದರು. ರಾಜೇಂದ್ರನ ಹತ್ಯೆಗೆ ಆತನ ತಮ್ಮ ರಮೇಶ್ ಯಾದವ್ ಪ್ರತೀಕಾರ ಕೈಗೊಂಡೇ ತೀರುತ್ತಾನೆಂದು ಇಡೀ ಅಂಡರ್‌ವರ್ಲ್ಡ್ ಮಾತಾಡಿಕೊಂಡಿತ್ತು. ಆದರೆ ಅಣ್ಣ ಅಂತ್ಯಗೊಂಡಿದ್ದೇ ರಮೇಶ್ ತಣ್ಣಗಾದ. ಈ ಹೊತ್ತಿಗಾಗಲೇ ಆತ ಗಾಂಧಿನಗರದ ಪ್ರಮುಖ ಚಿತ್ರ ನಿರ್ಮಾಪಕನಾಗಿದ್ದ. ಕೊಬ್ರಿ ಮಂಜು ಬೆಂಬಲವಿತ್ತು. ಮಣಿಭಾರತಿ, ಚಿಕ್ಕ, ಕಾಲಾಪತ್ಥರ್ ರಾಜೇಂದ್ರನಿಂದ ದೂರವಾಗಿ ಯಾವುದೋ ಕಾಲವಾಗಿತ್ತು. ಅಣ್ಣನೇ ನಿಕಾಲಿಯಾದ ಮೇಲೆ ಇಷ್ಟೆಲ್ಲಕ್ಕೂ ಮೂಲವಾದ ಕೇಬಲ್ ದಂಧೆಯ ಉಸಾಬರಿಯೇ ಸಾಕೆಂದು ರಮೇಶ್ ಇಲ್ಲಿಗೆ ತಿಂಗಳ ಹಿಂದೆಯೇ ತನ್ನ ಇಡೀ ಕೇಬಲ್ ಜಾಲವನ್ನು ನಲವತ್ತು ಲಕ್ಷಕ್ಕೆ ಶ್ರೀರಾಂಪುರದ ಕರಿಯ ಮಂಜ ಎಂಬ ತಮಿಳಿಗನಿಗೆ [illegible] ಬಿಟ್ಟ.

ಒಂದು ಮೂಲದ ಪ್ರಕಾರ ರಮೇಶ್ ಭೀತಿಗೆ ಬಿದ್ದು ಪರಪ್ಪನ ಅಗ್ರಹಾರ ಜೈಲಲ್ಲಿದ್ದ ಗೆಡ್ಡಾ-ಸುನೀಲರಿಗೆ ಎಂಟ್ರಿ ಹಾಕಿದ್ದಾನೆ. ಹೋದ ಅಣ್ಣ ಹೋದ. ನನ್ನನ್ನು ಬಿಟ್ಟು ಬಿಡಿ ಎಂದು ಗೆಡ್ಡನ ಮುಂದೆ ಕಣ್ಣೀರಿಟ್ಟಿದ್ದಾನೆ. ಅವತ್ತು ಪಕ್ಕದಲ್ಲೇ ಇದ್ದ ಸುನೀಲ ರಮೇಶನಿಗೆ ಆವಾಜ್ ಹಾಕಿದ್ದಾನೆ. ಅಷ್ಟಕ್ಕೇ ಹೆದರಿದ ರಮೇಶ್ ಪ್ರಕಾಶ್ ನಗರದಲ್ಲಿದ್ದ ಇಡೀ ರಾಜೇಂದ್ರನ ಮನೆಯನ್ನು ಯಾರಿಗೋ ಭೋಗ್ಯಕ್ಕೆ ಹಾಕಿ ನಾಪತ್ತೆಯಾದವನು ಎಲ್ಲಿಗೆ ಹೋದ ಎಂಬುದನ್ನು ಬಲ್ಲವರಿಲ್ಲ. ಕೆಲವರ ಪ್ರಕಾರ ರಮೇಶ್ ಸದ್ಯ ತಮಿಳುನಾಡಿನಲ್ಲಿದ್ದಾನೆ. ಇನ್ನೂ ಕೆಲವರು ಹೇಳುವಂತೆ ಆತ ಸದಾಶಿವನಗರದಲ್ಲಿ ಮನೆ ಮಾಡಿದ್ದಾನೆ. ಶಿವರಾಜ್‌ಕುಮಾರ್ ನಟಿಸಿದ 'ಅಶೋಕ' ಆತನ ನಿರ್ಮಾಣದ ಕೊನೆಯ ಚಿತ್ರ. ಆನಂತರ ಹೊಸ ಚಿತ್ರಕ್ಕೆ ಕೈಹಾಕಿಲ್ಲ. ಮತ್ತಾವುದೋ ಕನ್ನಡ ಚಿತ್ರಕ್ಕೆ ಆತ ಮುಹೂರ್ತ ಮಾಡಬೇಕಿತ್ತಾದರೂ ಅದನ್ನು ಅರ್ಧಕ್ಕೇ ಕೈಬಿಟ್ಟ. ಅಣ್ಣನ ಕೊಲೆ ಕೇಸಿಗೆ ಬಂದು ಸಾಕ್ಷಿಯನ್ನೂ ಹೇಳಲಿಲ್ಲ. ಎಲ್ಲಿದ್ದಾನೆ ಗೊತ್ತಿಲ್ಲ. ಪ್ರಕಾಶ್ ನಗರದ ಕೇಬಲ್ ಬೇರೆ ಮಾರಿದ್ದಾನೆ. ಚಿತ್ರ ನಿರ್ಮಾಣವನ್ನೂ ನಿಲ್ಲಿಸಿದ್ದಾನೆ.

ಇದರರ್ಥ ರಮೇಶ್ ಯಾದವ್ ಅಣ್ಣನ ಹತ್ಯೆಗೆ ಪ್ರತೀಕಾರಕ್ಕೆ ನಿಂತಿದ್ದಾನೆ?

[illegible] ಗೆದ್ದ ಲೆಕ್ಕ ಹಾಕಿದ್ದಾನೆ. ಆತನಿಗೆ ಬಂದ ಮತ್ತೊಂದು ಮಾಹಿತಿಯೆಂದರೆ, ಅಣ್ಣನ ಹತ್ಯೆಯ ನಂತರ [illegible] ವಿಧಿಯಿಲ್ಲದೇ ತಮಿಳು ರೌಡಿಗಳಾದ [illegible]ಲಾಪತ್ಥರ್, ಮಣಿಭಾರತಿ ಮತ್ತು ಚಿಕ್ಕಿಯ ನೆರವು [illegible] ಈ ಪೈಕಿ ಕಾಲಾಪತ್ಥರ್‌ಗೆ ತಮಿಳುನಾಡಿನ ಬಹುತೇಕ ಡಾನ್‌ಗಳು ಗೊತ್ತು. ತಮಿಳಾಂಧರೊಂದಿಗೂ ಆತನಿಗೆ ಲಿಂಕುಗಳಿವೆ. ರಮೇಶ್ ಯಾದವ್‌ನ ದುಡ್ಡು ಮತ್ತು ಕಾಲಾಪತ್ಥರ್‌ನ ತಾಕತ್ತು ಸೇರಿಬಿಟ್ಟರೆ ಗೆದ್ದನಿಗೆ ಗತಿ ಕಾಣಿಸುವುದು ದುಸ್ಸಾಧ್ಯವೇನಲ್ಲ.


ಆದರೆ ಇದೊಂದೇ ಕಾರಣಕ್ಕೆ ಗೆದ್ದ ಭೂಗತನಾಗಿಲ್ಲ. ಇದಕ್ಕಿಂತಲೂ ದೊಡ್ಡ ಅಪಾಯವನ್ನು ಆತ ಸುನೀಲನ ವಿರೋಧಿಗಳಿಂದ ನಿರೀಕ್ಷಿಸುತ್ತಿದ್ದಾನೆ. ಸುನೀಲನನ್ನು ಮುಗಿಸಲು ಆ ಕಾಲದಿಂದಲೂ ಹೊಂಚು ಹಾಕುತ್ತಿರುವ ಮತ್ತೊಬ್ಬ ಪಾತಕಿಯೆಂದರೆ ಆತ ಪ್ರಕಾಶ್‌ನಗರದ ಟಿಪ್ಪು ಅಲಿಯಾಸ್ ಹಣ್ಣುಗ. ಒಂದು ಕಾಲಕ್ಕೆ ಗೆದ್ದನನ್ನು ಮುಗಿಸುವಂತೆ ರಾಜೇಂದ್ರನೇ ಈತನಿಗೆ ಸುಪಾರಿ ಕೊಟ್ಟಿದ್ದ. ಅದು ಗೊತ್ತಾಗಿದ್ದೇ ಸುನೀಲ, ಅನಾಲಿ, ಪೀಟೆ, ಪೀಸೆ, ಒಂಟೆ ಮುಂತಾದವರು ಟಿಪ್ಪು ಮನೆಗೆ ನುಗ್ಗಿ ಬೆಂಕಿಯಿಟ್ಟಿದ್ದರು. ಅವತ್ತು ಟಿಪ್ಪು ಬಚಾವಾದನಾದರೂ ಆತನ ತಮ್ಮ ರಾಜನನ್ನು ಅನಾಲಿ ಗ್ಯಾಂಗ್ ಕತ್ತರಿಸಿತ್ತು.

ಇದೇ ಟಿಪ್ಪು ಬೆನ್ನಿಗೆ ಪ್ರಕಾಶ್‌ನಗರದ ಒಂದನೇ ಮೇನ್‌ನ ಎಲ್ಬಿಟಿಇ ಭಾಸ್ಕರನೆಂಬ ತಮಿಳಾಂಧನೂ ಇದ್ದಾನೆ. ಈ ತಂಡಕ್ಕೆ ಕನ್ನಡದ ರೌಡಿಗಳೆಂದರೆ ಎಲ್ಲಿಲ್ಲದ ಹಗೆ. ಅದೇ ಕಾರಣಕ್ಕೆ ವಿನಾಕಾರಣ ದಾಸನನ್ನು ಕೊಂದರು. ಇನ್ನು ಗೆದ್ದ ಸಲೀಸಾಗಿ ಸಿಕ್ಕರೆ ಬಿಡುವುದುಂಟಾ? ಜೊತೆಗೆ ಗಾಯಿತ್ರಿನಗರದ ಸುನೀಲನ ಕಡುವೈರಿ ಜಗ್ಗನೂ ಟಿಪ್ಪು ಬೆನ್ನಿಗಿದ್ದಾನೆಂದರೆ, ಗೆದ್ದನ ಸುತ್ತ ಇನ್ನೆಂಥಾ ಅಪಾಯ [illegible]?

ಗೆದ್ದ ಎಷ್ಟೆಂದರೂ ಗಾಯಗೊಂಡ ಹುಲಿ!

-ವರವಿಗಾರ

ಕೊಪ್ಪಳ: ತತ್ತರಿಸಿ ಚೆಲ್ಲಾಪಿಲ್ಲಿಯಾದ ಮಟ್ಕಾ ಡಾನ್‌ಗಳು




ಎಸ್ಪಿ ಕಚೇರಿ ಪಕ್ಕದಲ್ಲಿದ್ದ ಈ ಮಟ್ಕಾ ಅಡ್ಡೆ ಈಗ ನೆಲಸಮಗೊಂಡಿದೆ

ಮೇ 25, ಗಂಗಾವತಿಯ ಡಿವೈಎಸ್‌ಪಿ ಕಚೇರಿಯಲ್ಲಿ ಎಸ್ಪಿ ಪದ್ಮನಯನ ಮಟ್ಕಾ ಬರೆಯುವವರನ್ನು ಗೂಂಡಾ ಕಾಯ್ದೆಯಡಿ ಗಡಿಪಾರು ಮಾಡುತ್ತೇನೆ ಎಂದಾಗ ಭಪ್ಪರೇ, ಎಸ್ಪಿ ರವಿಯ ಎರಡನೆಯ ಯುಗ ಆರಂಭವಾಯಿತು ಅಂತ ಜನ ಭಾವಿಸಿದರು. ಆದರೆ ಮೇ 31 ರಂದು ಕಾರಟಗಿ ಪೋಲೀಸರು ಸಮೀಪದ ಬೇವಿನಾಳಗೆ ರೈಡ್ ಮಾಡಿ ವಲಿಸಾಬನಿಂದ 7 ಸಾವಿರ, ನಾಗನಕಲ್‌ನ ನಾಗರಾಜನಿಂದ 2 ಸಾವಿರ ವಶಪಡಿಸಿಕೊಂಡಿದ್ದು ಬಿಟ್ಟರೆ ಬೇರೆ ದಾಳಿ ನಡೆದೇ ಇಲ್ಲ. ಆದರೂ ಕೊಪ್ಪಳದ ಮಟ್ಕಾ ಏಜಂಟ್, ಡಾನ್‌ಗಳು ಊರೇ ಬಿಟ್ಟಿದ್ದಾರೆ. ಅಂದ್ರೆ ಏನರ್ಥ? ಇವರಿಗೆಲ್ಲ ರೈಡ್ ಆಗಲಿದೆ ಎಂಬ ಮೆಸೇಜ್ ಇಲಾಖೆಯಿಂದಲೇ ಬಂತಾ? ಎಸ್ಪಿ ಪದ್ಮನಯನ ಎಸ್‌ಐಗಳನ್ನು ಕರೆದು ಮಟ್ಕಾ ಬಂದ್ ಮಾಡಿ ಅನ್ನೋ ಬದಲು ರೈಡ್ ಮಾಡಿ ಅಂತ ಯಾಕೆ ಹೇಳಲಿಲ್ಲ? ಇತ್ತ ಇದೇ ಪದ್ಮನಯನರು ಬಂದ 15 ದಿನಕ್ಕೇ ಮಟ್ಕಾ ಡಾನ್ ಒಬ್ಬ ಅವರನ್ನು ಎತ್ತಂಗಡಿ ಮಾಡಿಸಲು ಬೆಂಗಳೂರಿಗೆ ಓಡಾಡಿದ್ದು, ಅದಕ್ಕೆ ಕೆಲ ಎಸ್‌ಐಗಳು ಬೆಂಬಲ ಕೊಟ್ಟಿದ್ದು ಯಾವುದೂ ಈಗ ಗುಟ್ಟಾಗಿ ಉಳಿದಿಲ್ಲ.

ಮೊನ್ನೆ ಬಾಗಲಕೋಟೆಯಿಂದ ಪದ್ಮನಯನ ಬಂದಾಗಲೂ ಮಟ್ಕಾ ಬಂದಾಗದೇ ವಾರ ಪೂರ್ತಿ ಚಾಲೂ ಇದ್ದು ನಂತರ ಈಗ ಬಗಿ ಆಗಿ ಏಜಂಟರು, ಡಾನ್‌ಗಳು ತತ್ತರಿಸತೊಡಗಿದ್ದಾರೆ. ಮೊನ್ನೆ ನಗರದ ಮಟ್ಕಾ ಡಾನ್ ಒಬ್ಬ ಏಜಂಟರಿಗೆಲ್ಲ" ಈ ಎಸ್ಪಿ 8 ಲಕ್ಷ ಮಂತ್ಲಿ ಕೇಳ್ತಿದ್ದಾನೆ. ತಿಂಗಳಿಗೆ ಎಂಟು ಕೊಡೋ ಬದಲು ಅದಕ್ಕೆ ಇನ್ನೆರಡು ಸೇರಿಸಿ ಮಿನಿಸ್ಟರ್‌ಗೆ (ಯಾವ ಮಿನಿಸ್ಟರ್?) 10 ಕೊಟ್ರೆ, ಇವನನ್ನು ಎತ್ತಿಸಿಬಿಡ್ತಾರೆ. ನಾನು ಟ್ರೈ ಮಾಡ್ತೀದ್ದೀನಿ. ಕೆಲ ಎಸ್‌ಐಗಳು ಬೆಂಬಲ ಕೊಡ್ತಿದ್ದಾರೆ. ಸ್ವಲ್ಪ ತಡೀರಿ, ಮಟ್ಕಾ ಬರೆಯಬೇಡಿ" ಎಂದು ಸಂದೇಶ ನೀಡಿದ್ದ, ಅದೆಲ್ಲ ಈಗ ಸುಳ್ಳು ಎಂದು ಸ್ವತಃ ಏಜಂಟರು, ಪೋಲೀಸರಿಗೂ ಗೊತ್ತಾಗಿದೆ.

ಫೆಬ್ರವರಿಯಲ್ಲಿ 'ಲಂಕೇಶ್' ಕೊಪ್ಪಳದ ಮಟ್ಕಾ ಬಗ್ಗೆ ವರದಿ ಬರೆದಿತ್ತು, ಆಗ ಕೆಲವರು ತಲೆ ಮರೆಸಿಕೊಂಡರೆ, ಕೆಲವರು ಬಂದ್ ಮಾಡಿದರು. ಇನ್ನು ಕೆಲವರು ಊರು ಬಿಟ್ಟರು, ಕೆಲವರ ಮೇಲೆ ಸಣ್ಣಪುಟ್ಟ ರೈಡುಗಳು ನಡೆಯತೊಡಗಿದವು. ವರದಿ ಬಂದ ಮೇಲೆ ನಗರದ ಮಟ್ಕಾ ಡಾನ್ ಒಬ್ಬ ಮೋಚಿ ಓಣಿಯ ಪಡ್ಡೆ ವಯಸ್ಸಿನ ಮಾಟಗಾರನನ್ನು ಹಿಡಿದು ಒಂದು ದಿನ ಮಧ್ಯರಾತ್ರಿ ಗವಿಮಠದ ಹಿಂದಿನ ಸ್ಮಶಾನಕ್ಕೆ ಹೋಗಿ ಅಲ್ಲಿ ಹಣ ಹೊತ್ತು ತಂದಂತಹ ಚಟ್ಟದ ಕಟ್ಟಿಗೆಗಳನ್ನು ತಂದು, 3 ಕಿ.ಮೀ. ದೂರದ ಹಿರೇಹಳ್ಳದ ದಂಡೆಯಲ್ಲಿ ಅವನ್ನು ಉರಿಸಿ, ಬೊಂಬೆಯೊಂದರ ತಲೆಗೆ ಮೊಳೆ ಹೊಡೆದು ದಿಗ್ಬಂಧನ ಮಾಡಿಸಿದ್ದ. ಅದು ಪೋಲೀಸ್ ಇಲಾಖೆಗೆ ಮಾಡಿಸಿದ ಮಾಟ! ಇನ್ನು ನಮ್ಮ ಮೇಲೆ ರೈಡ್ ಆಗೊಲ್ಲ ಎಂದೇ ನಂಬಿದರು ಏಜಂಟರು. ಆದರೇನಾಯಿತು ನೋಡಿ, ಅದೇ ಡಾನ್‌ಗೆ ಮೊನ್ನೆ ಎಸ್ಪಿ ಕಚೇರಿಯಲ್ಲಿ ಚಡ್ಡಿಯಲ್ಲಿ ಕೂಡ್ರಿಸಿದ್ದರು ಪದ್ಮನಯನ.

'ಲಂಕೇಶ್'ನಲ್ಲಿ ವರದಿ ಬಂದಾಗ ಉಮಚಗಿ ಫ್ಯಾಮಿಲಿಯ ಗವಿಸಿದ್ಧ ದಿವಟರ್ ಸರ್ಕಲ್‌ನಲ್ಲಿ ನಿಂತು ಲಂಕೇಶ್ ವರದಿಗಾರನ ಕೊಲೆಗೆ ಬಾಂಬೆ ಕಂಪನಿಯಿಂದ ಹತ್ತು ಸಾವಿರ ಬಂದಿದೆ, ಅವನನ್ನು ನಾಲ್ಕು ದಿನಗಳ ನಂತರ ಮರ್ಡರ್ ಮಾಡ್ತೀನಿ, ನಮ್ಮನ್ನು ಚಿಕ್ಕರೆಡ್ಡಿ ಎಎಸ್‌ಐ ನಾಗಪ್ಪ ಏನೂ ಮಾಡಲಾಗುವುದಿಲ್ಲ ಎಂದು ಕೂಗಾಡುತ್ತ ಓಡಾಡತೊಡಗಿದ. ಜೊತೆಗೆ ಏಜಂಟರಾದ ಸೈಲಾನಿ, ಸಜ್ಜಾದ್ ಕೂಡ ಇದ್ದರು. ಒದರಾಡುತ್ತಲೇ ವಾರ ಪೂರ್ತಿ ಮಟ್ಕಾ ಬಂದ್ ಮಾಡಿದ್ದ ಗವಿಸಿದ್ದ ಮೊನ್ನೆ ಎಸ್ಪಿ ಪದ್ಮನಯನ ಬಂದ ಮೇಲೆ ಊರೇ ಬಿಟ್ಟಿದ್ದ. ಇವನು ತಲೆ ಮರೆಸಿಕೊಳ್ಳದಂತೆ ಯಾಕೆ ರಕ್ಷಣೆ ನೀಡಲಿಲ್ಲ ಬಾಂಬೆ ಕಂಪನಿ?



ಎಸ್ಪಿ ಕಚೇರಿ ಕಾಂಪೌಂಡ್‌ಗೆ ಹೊಂದಿಕೊಂಡೆ ಖಾನಾವಳಿ ನೆಪದಲ್ಲಿ ಮಟ್ಕಾ ಅಡ್ಡೆ ತೆರೆದು ಪೋಲೀಸರಿಗೂ ಉದ್ರಿ ಮಟ್ಕಾ ಬರೆಯುತ್ತಿದ್ದವನು ಪರಶುರಾಮ ಪವಾರ್. ಪತ್ರಿಕೆ ವರದಿಯ ನಂತರ ಇವನ ಮೇಲೂ ರೈಡ್ ಮಾಡಲಾಯಿತು. ಅಂದಿನಿಂದ ಆಟ ಬಂದ್ ಮಾಡಿದ್ದ ಇವನ ಅಡ್ಡೆಯನ್ನು ಫುಟ್‌ಪಾತ್ ತೆರವುಗೊಳಿಸುವ ಸಂದರ್ಭದಲ್ಲಿ ನೆಲಸಮಗೊಳಿಸಿದ್ದಾರೆ. ಇದಕ್ಕೂ ಮುನ್ನ ರೈಡ್‌ಗೆ ಹೆದರಿ ಇವನ ಮಕ್ಕಳು ಜೂನ್ 3 ರಂದು ಬೆಳಗಾವಿಗೆ ಪರಾರಿಯಾಗಿದ್ದಾರೆ.

ಇವತ್ತು ಕೊಪ್ಪಳದಲ್ಲಿ ಮಟ್ಕಾ ಪೂರ್ತಿ ಸ್ವಚ್ಛ ಆಗಿರುವಂತೆ ಕಂಡರೂ, ಪರಶು... ನಂತಹ ಡಾನ್ ಕಂಪನಿಯನ್ನೇ ಮುಚ್ಚಿಕೊಂ... ಕುಳಿತಿದ್ದರೂ ಉಮಚಗಿ ಫ್ಯಾಮಿಲಿಯ ರಹಸ್ಯ ವ್ಯವ... ನಡೆದೇ ಇದೆ. ಏಜಂಟರು ಮಾತ್ರ ಆದಾಯ... ಒದ್ದಾಡುತ್ತಿದ್ದಾರೆ. ಗಂಗಾವತಿಯಲ್ಲಿ ಮೇ 25 ರ... ಎಸ್ಪಿ ಪದ್ಮನಯನ ಗಡಿಪಾರು ಮಾಡ್ತೀನಿ ಅಂದ ಪ್ರ... ಗಡಿಪಾರು ಆಗಬೇಕಾದವರೆಂದರೆ ಪರಶುರಾ... ಹಾದಿಮನಿ, ಮುದಕಪ್ಪ ಉಮಚಗಿ, ವಿರು... ಉಮಚಗಿ, ಗವಿಸಿದ್ಧ, ಸಾಚಾ ರಮೇಶ, ಪರಶುರಾ... ಪವಾರ್, ಶಿವರೆಡ್ಡಿ, ಎ ಒನ್ ಬಾರ್ ಅಪ್ಪು ಸೇರಿದ... ಅನೇಕರಿದ್ದಾರೆ. ಹೆಚ್ಚಿನ ಮಾಹಿತಿ ಬೇಕಿದ್ದರೆ ಪದ್ಮನಯ... ರಿಗೆ ಅವರದೇ ಕ್ರೈಂ ಬ್ರ್ಯಾಂಚ್‌ನಲ್ಲಿ ಇವರ ಡೀಟೈಲ್ಸ್ ಸಿಗುತ್ತದೆ.

ಎಷ್ಟೇ ಟ್ರೈಟ್ ಮಾಡಿದರೂ ಹುಟ್ಟುಹಾ... ರಂಗೋಲಿ ಕೆಳಗೆ ನುಸುಳುವ ಚಾಳಿ ಇರೋ... ಕೊಪ್ಪಳದ ಮಟ್ಕಾ ಮಂದಿಗೆ. ಅದಕ್ಕೆ ಇಲ್ಲಿ ಕೆಲ... ಮಟ್ಕಾ ಏಜಂಟ್, ಡಾನ್‌ಗಳ ನಂಬರ್‌ಗಳ... ನೀಡಲಾಗಿದ್ದು ಇವರುಗಳ ಮೇಲೆ ಇಲಾಖೆ ಒ... ನಿಗಾ ಇಡಲಿ. ಎ ಒನ್ ಬಾರ್ ಅಪ್ಪು 9242497... ಹಗಲು ಸ್ವಿಚ್ ಆಫ್. ಸಂಜೆ ಹೊತ್ತು ಕೆಲಸ. ಹ... ಇರುವ ಮೇದಾರ ಬಸವಣ್ಣ 9342416866 ... ಚಾಲೂ, ದಸ್ತಗೀರ್ 9341030459 ಔಟ್ ... ಸರ್ವೀಸ್, ಜಗದೀಶ್ ಉಮಚಗಿ 98454569... ಉಮೇಶ್ ಉಮ... 9945119411, ಗವಿಸಿದ... ಉಮಚಗಿ 9342146... ಇವು ಬಂದ್ ಇರದೇ ... ಪೋಲೀಸರೇ ಮೊಬೈಲ್... ಹೇಳಿದರೆ ನಂಬರ್ ಬದ... ಕೊಳ್ಳುತ್ತಾರೆ. ಪಕೀರಪ್ಪ ಹಾ... ಮನಿ 9880276502 ... ಆಫ್ ಸರ್ವೀಸ್ ಇದ್ದು ... ಹಾರದ ವೇಳೆಗೆ ಚಾಲೂ. ... ಪಾಟೀಲ್ ನಗರದ ರೆಡ್ಡಿ ... ಲ್ಯಾಂಡ್ ಫೋನ್ ಬದ... ಯಿಸಿದ್ದು, 9343512... ಔಟ್ ಆಫ್ ಸರ್ವೀಸ್ ಇ... ಡಾನ್ ಪರಶುರಾಮ ಹಾದಿ... ಪರಿಚಿತ ನಂಬರ್‌ಗಳನ್ನು ಮ... ಸ್ವೀಕರಿಸುತ್ತಾನೆ. ಬಸವರಾ... 9449177498 ಇಪ... ನಂಬರ್‌ಗಳನ್ನು ಬೆನ್ನಟ್ಟ... ಮಟ್ಕಾ ಇನ್ನೂ ಜೀವಂತ ಎಂಬುದು ಗೊತ್ತಾಗುತ್ತದೆ.

-ವರದಿಗಾ...

ಲೇಡಿ ಪೋಲೀಸರಿಗೂ ಕೆಲಸ ಕೊಡಿ!

ಕೊಪ್ಪಳ ಗ್ರಾಮೀಣ ಭಾಗದ ಮಹಿಳೆಯರು ಸಾರಾಯಿ ವಿರುದ್ಧ ತಿರುಗಿ ಬೀಳುತ್ತಿದ್ದರೆ, ನಗರದ ಕೆಲ ಮಹಿಳೆಯರೇ ಮಟ್ಕಾ ಬರೆಯುತ್ತಿದ್ದಾರೆ. ದಿವಟರ್ ಸರ್ಕಲ್ ಬಳಿ, ತೆಗ್ಗಿನಕೇರಿ, ಹಸನ್ ರೋಡ್, ಚಂದ್ರಶೇಖರ್ ಆಜಾದ್ ಸರ್ಕಲ್ ಬಳಿ ಪುರುಷ ಏಜಂಟರು ದಾಳಿಯ ವಾಸನೆ ಸಿಕ್ಕಾಗ ತಮ್ಮ ಮನೆ ಮಹಿಳೆಯರಿಗೆ ಈ ಕೆಲಸಕ್ಕೆ ಹಚ್ಚುತ್ತಾರೆ.

ಇಲ್ಲಿ ಕೇವಲ ನಂಬಿಕಸ್ಥ-ಪರಿಚಯದ-ದೊಡ್ಡ ಅಮೌಂಟಿನ ಆಟಗಾರರಿಗೆ ಮಾತ್ರ ಪ್ರವೇಶ. ಮಹಿಳೆಯರು ನಂಬರ್ ಬರೆಯಲು ಕುಳಿತಾಗ ಹೋದ ಗಿರಾಕಿ 'ಅಕ್ಕಾವ್ರೇ, ಅಣ್ಣಾ ಇಲ್ಲೇನ್ರಿ' ಎನ್ನಬೇಕು. ಆಗ ಅವರಿಂದ 'ಇಲ್ರೀ ಇಲ್ಲೇ ಹೋಗ್ಯಾರ. ಏನ್ ಕೆಲಸ ಇತ್ರಿ ಎನ್ನುತ್ತಾರೆ. 'ಸ್ವಲ್ಪ ಕೆಲಸ....' ಅಂತ ಗಿರಾಕಿ ತಲೆ ಕೆರೆದರೆ ಮಹಿಳೆಯರು ಹಣ ಪಡೆದು ನಂಬರ್ ಬರೆದುಕೊಳ್ಳುತ್ತಾರೆ.


ಮಟ್ಕಾ ರೈಡಿಗೆ ಪುರುಷ ಪೋಲೀಸರೇ ಹೋಗೋದ್ರಿಂದ ಹೀಗಾಗುತ್ತಿದೆ. ಕೊಪ್ಪಳದಲ್ಲಿ ಮಹಿಳಾ ಪೋಲೀಸರಿಗೂ ಕೊರತೆಯಿಲ್ಲ, ಮತ್ತು ಅವರಿಗೆ ಹೆಚ್ಚಿನ ಕೆಲಸವೂ ಇಲ್ಲ. ಬೇರು ಮಟ್ಟದಿಂದ ಮಟ್ಕಾ ನಿರ್ಮೂಲನ ಆಗಬೇಕಾದರೆ ಲೇಡಿ ಪೋಲೀಸರನ್ನು ರೈಡಿಗೆ ಬಳಸಿಕೊಳ್ಳಬೇಕು. ಈ ಬಗ್ಗೆ ಎಸ್ಪಿ ಪದ್ಮನಯನ ಗಮನ ಹರಿಸಲಿ.

ಮಂಗಳೂರು: ರೌಡಿ ಪೋಲೀಸರ ಕೋಮು ಹಿಂಸೆ

ಜರಂಗದಳದ ಕಾರ್ಯಕರ್ತರಂತೆ ವರ್ತಿಸಿದ ಮಂಗಳೂರಿನ ಪೋಲೀಸರು ಅಮಾಯಕ ಮುಸ್ಲಿಮ್ ಯುವಕನೊಬ್ಬನಿಗೆ ಚಿತ್ರಹಿಂಸೆ ನೀಡಿ ಆಸ್ಪತ್ರೆಗೆ ದಾಖಲಾಗುವಂತೆ ಮಾಡಿದ್ದಾರೆ. ಮಂಗಳೂರು ತಾಲ್ಲೂಕಿನ ಜೋಕಟ್ಟೆ ಸಮೀಪದ ಬೊಟ್ಟು ಮನೆಯ ಮಹಮ್ಮದ್ ಮುಸ್ತಫಾ (25) ಎಂಬ ಹುಡುಗನೇ ಈ ಹಿಂಸೆಗೊಳಗಾದವನು. ಮನೆ ಮನೆಗೆ ಬಟ್ಟೆ-ಬರೆ ಒಯ್ದು ಕಂತಿನಲ್ಲಿ ಹಣ ಪಡೆದು ಮಾರಾಟ ಮಾಡಿ ಬಡತನದ ಬದುಕು ಸಾಗಿಸುತ್ತಿದ್ದ ಈ ಯುವಕ ಈಗ ನಡೆಯಲೂ ಆಗದೆ, ಮಾತನಾಡಲೂ ಸಾಧ್ಯವಾಗದೆ ಮಂಗಳೂರಿನ ಯುನಿಟಿ ಆಸ್ಪತ್ರೆಯಲ್ಲಿ ಮಲಗುವಂತಾಗಿದೆ.

ಕೈ ಕಾಲು, ಹೊಟ್ಟೆ, ಬೆನ್ನು ಸಹಿತ ದೇಹದ ಎಲ್ಲಾ ಭಾಗಗಳಿಗೂ ಲಾಠಿಯಿಂದ ಮನಬಂದಂತೆ ಥಳಿಸಿರುವ ರೌಡಿ ನಿಗ್ರಹ ದಳದ ರೌಡಿಗಳು, ಮೂರು ಬಾರಿ ಮುಸ್ತಫಾರಿಗೆ ರೋಲ್ ಹಾಕಿದ್ದಾರೆ.

ಹಿನ್ನೆಲೆ: ಜೂನ್ 13 ರಂದು ರಾತ್ರಿ ರಾವ್ ಎಂಡ್ ಸರ್ಕಲ್ ಬಳಿಯ ಶಾಪ್ ಒಂದಕ್ಕೆ ದಾಳಿ ನಡೆಸಿದ ಭಜರಂಗಿ ಗೂಂಡಾಗಳು ವಸ್ತುಗಳನ್ನು ಧ್ವಂಸಗೊಳಿಸಿ, ಅಕ್ಬರ್ ಹಾಗೂ ಸರಿತಾ ಎಂಬುವರ ಮೇಲೆ ಮಾರಣಾಂತಿಕವಾಗಿ ಹಲ್ಲೆಗೈದರು. ಕೈಗೆ ಸಿಕ್ಕಿದ್ದನ್ನು ದರೋಡೆ ಮಾಡಿದರು. ಇದಾದ ಅರ್ಧ ಗಂಟೆಯ ಬಳಿಕ ಸೆಂಟ್ರಲ್ ಮಾರ್ಕೆಟ್ ಪಕ್ಕದ ಕಲ್ಪನಾ ಸ್ವೀಟ್ ಸ್ಟಾಲ್‌ಗೆ ಯಾರೋ ಇಬ್ಬರು ಕಲ್ಲೆಸೆದು ಓಡಿದರು. ಕಲ್ಪನಾದ ಮಾಲೀಕನಾದ ನಾಗ್ವೇಕರ್ ಅಪ್ಪಟ ಆರ್‌ಎಸ್‌ಎಸ್. ನಾಗ್ವೇಕರ್ ಚೇಲಾಗಳು ಕಲ್ಲೆಸೆದ ಇಬ್ಬರನ್ನು ಬೆನ್ನಟ್ಟಿದ್ದರು. ಆದರೆ ಕೈಗೆ ಸಿಗಲಿಲ್ಲ. ನಿಜವಾದ



ಆರೋಪಿಗಳು ಕೈಗೆ ಸಿಗದ ಸಿಟ್ಟಲ್ಲಿ ಕೈಗೆ ಸಿಕ್ಕಿದ ಬ್ಯಾರಿ ಮುಸ್ತಫಾರನ್ನು ಹಿಡಿದು ಹಿಗ್ಗಾಮುಗ್ಗಾ ಹೊಡೆದಿದ್ದಾರೆ.

ಸ್ಥಳದಲ್ಲಿದ್ದ ಟ್ರಾಫಿಕ್ ಪಿಸಿಯೂ ಹೊಡೆದು ಬಂದರು ಪೋಲೀಸ್ ಠಾಣೆಗೆ ಹಸ್ತಾಂತರಿಸಿದ್ದಾನೆ. ಬಂದರು ಇನ್ಸ್‌ಪೆಕ್ಟರ್ ವಿನಯ ಗಾಂವ್‌ಕರ್, ಎಎಸ್‌ಐ ನಾರಾಯಣ ಬೈಂದೂರು, ಪಿ.ಸಿ. ಚಿಂದಪ್ಪ ಹಾಗೂ ಇತರ ಆರು ಮಂದಿ ಅಕ್ರಮ ಕೂಟ ಸೇರಿ ಜಿಲ್ಲೆಯ ಅನಧಿಕೃತ ಸಚಿವ ಕಲ್ಲಡ್ಕ ಪ್ರಭಾಕರ ಭಟ್ ಹಾಗೂ ನರೇಂದ್ರ ಮೋದಿ ಶಿಷ್ಯ ಬಿ. ನಾಗರಾಜ ಶೆಟ್ಟರ ಮನಸ್ಸಂತೋಷಪಡಿಸಿದ್ದಾರೆ. ಕೋಮುವಾದಿ ನಾಗ್ವೇಕರ್ ಸೆಂಟ್ರಲ್ ಮಾರ್ಕೆಟ್‌ನಲ್ಲಿ ಪೋಲೀಸ್ ಹೊರಠಾಣೆಯನ್ನು ಕಟ್ಟಿಸಿಕೊಟ್ಟವರು. ಈ ನಾಗ್ವೇಕರ್ ಕೂಡಾ ಮಂಗಳವಾರ ರಾತ್ರಿ ಬಂದರು ಠಾಣೆಗೆ ಹೋಗಿ ಪೋಲೀಸರೆದುರೇ ಮುಸ್ತಫಾರಿಗೆ ಮನಸೋಇಚ್ಛೆ ಹೊಡೆದು ಹೊಡೆದು ಸುಸ್ತಾದರು.


ನಾಗ್ವೇಕರ್‌ನ ಋಣ ಸಂದಾಯ ಮಾಡಿದ ವಿನಯ ಗಾಂವ್‌ಕರ್ ಗ್ಯಾಂಗ್‌ನ ಚಿತ್ರಹಿಂಸೆಗೆ ಮುಸ್ತಫಾ ಬದುಕಿ ಉಳಿದದ್ದೇ ದೊಡ್ಡ ಆಶ್ಚರ್ಯ. ಫೋಟೋ ನೋಡಿದರೆ ಇದು ಅರ್ಥವಾಗಬಹುದು. ಸೆಂಟ್ರಲ್ ಮಾರ್ಕೆಟ್‌ನಲ್ಲಿರುವ ಸಹರಾ ಟೆಕ್ಸ್‌ಟೈಲ್ಸ್‌ನಿಂದ ಬಟ್ಟೆ ಖರೀದಿಸಿ ಮರಳುತ್ತಿದ್ದ ನಿರಪರಾಧಿ ಮತ್ತು ಅಮಾಯಕ ಮುಸ್ತಫಾರ ದೇಹದ ಮೇಲೆ ಅಮಾನುಷವಾಗಿ ರಾಕ್ಷಸೀಯ ಕೃತ್ಯವೆಸಗಿದ ಭಜರಂಗಿ ಪೋಲೀಸರು ಈಗಲೂ ಜನರ ರಕ್ಷಕರಂತೆ ಪೋಸ್ ಕೊಡುತ್ತಾ ತಿರುಗಾಡುತ್ತಿದ್ದಾ... ಸಂಘ ಪರಿವಾರದ ಕಾರ್ಯಕರ್ತರೇ ಆಗಿರುವ ಐಜಿಪಿ ಸತ್ಯ ನಾರಾಯಣ ರಾವ್, ಎಸ್ಪಿ ಬಿ. ದಯಾನಂದ್‌ರಂಥಹವರು ಇರುವ ಮಂಗಳೂರಲ್ಲಿ ಇಂತಹ ಘಟನೆಗಳಿಗೇನೂ ಕಡಿಮೆಯಿಲ್ಲ.

'ರೌಡಿ' ನಿಗ್ರಹ ದಳವೆಂಬ ರೌಡಿಗಳ ವಿಕೃತ ಹಿಂಸೆಯಿಂದ ಸಾಯದೆ ಬದುಕಿಳಿದ ಮುಸ್ತಫಾ ನ್ಯಾಯಾಲಯದಲ್ಲಿ ಅಂಗಿ-ಪ್ಯಾಂಟ್ ಬಿಚ್ಚಿ ಪೋಲೀಸ್ ಹಿಂಸೆಯನ್ನು ಬಹಿರಂಗಪಡಿಸಿದರು.

ಆಂಧ್ರದ ಕ್ರಾಂತಿಕಾರಿ ಕವಿ ವರವರ ರಾವ್ ಅಂದಂತೆ; 'ಅಪರಾಧವೇ ಅಧಿಕಾರವಾಗಿ, ಜನರನ್ನು ಅಪರಾಧಿಗಳನ್ನಾಗಿಸಿ ಬೇಟೆಯಾಡುತ್ತಿದ್ದಾರೆ ಪೋಲೀಸರು. ಆದರೆ ಪೋಲೀಸರ ಈ ಬಹಿರಂಗ ಅಪರಾಧವನ್ನು ನಿರ್ಭೀತಿಯಿಂದ ಖಂಡಿಸುವವರೇ ಇಲ್ಲ. ಎಲ್ಲರೂ 'ಬಾಯಿ ಇದ್ದೂ ಸುಮ್ಮನಿರುವ ಅಪರಾಧಿಯಾಗಿದ್ದಾರೆ'! ಕರಾವಳಿ ಪೋಲೀಸರ ಕೋಮು ಹಿಂಸೆ ಹೀಗೇ ಮುಂದುವರಿಯಬೇಕೇ?

-ಶ್ರೀರಾಮ ದಿವಾ...

ರಾಯಚೂರು: ಕ್ಲೋರೋಹೈಡ್ರೇಟ್ ಕಳ್ಳ ಕಾಂಗ್ರೆ ಖಲೀಲ್ ಜೈಲಿಗೆ!


ಖಲೀಲ್

ಜೀವಕಂಟಕ ಗದ್ವಾಲ್ ಖಲೀಲ್‌ನನ್ನು ಎಸ್ಪಿ ಹಿತೇಂದ್ರ ಕೊನೆಗೂ ಧೈರ್ಯ ಮಾಡಿ ಒಳಹಾಕಿದ್ದಾರೆ. ವಿಷಕಾರಿ ಸೇಂದಿ ತಯಾರಿಕೆಗೆ ಕ್ಲೋರೋಹೈಡ್ರೇಟ್ ಪೂರೈಸುತ್ತ ಹಲವು ಜನರ ಸಾವಿಗೆ, ಸಾವಿರಾರು ಜನರ ಅನಾರೋಗ್ಯಕ್ಕೆ ಕಾರಣನಾಗಿದ್ದ ಪುಡಾರಿ ಖಲೀಲ್ ಈ ಹಿಂದೆ ರಾಯಚೂರು (ಮಾಜಿ ಶಾಸಕ ಯಾಸ್ಮಿನ್ ಕೃಪೆಯಿಂದ) ಅಭಿವೃದ್ಧಿ ಪ್ರಾಧಿಕಾರ (ರಾ.ಅ.ಪ್ರಾ)ದ ಅಧ್ಯಕ್ಷ ಪದವಿಯಲ್ಲಿ ಮೆರೆದಿದ್ದ.

ಅದಕ್ಕೂ ಮೊದಲು ಕಾಂಗ್ರೆಸ್‌ನಿಂದಲೇ ನಗರಸಭೆಯನ್ನೂ ಹೊಕ್ಕಿದ್ದ.

ಈ ಗದ್ವಾಲ್ ಖಲೀಲ್ ಅಲಿಯಾಸ್ ಖಲೀಲ್ ಅಹ್ಮದ್ ಆಂಧ್ರದಿಂದ ವಲಸೆ ಬಂದು ಜನರಿಗೆ ಕ್ಲೋರೊಹೈಡ್ರೇಟ್ ವಿಷ ಉಣಿಸುತ್ತಿರುವುದರ ಕುರಿತು ಕೆಲ ವಾರಗಳ ಹಿಂದೆ 'ಲಂಕೇಶ್' ವಿವರವಾಗಿ ಬರೆದಿತ್ತು. ರಾಯಚೂರಿನ ಈ ಆಂಜನೇಯ, ದೇವದುರ್ಗದ ವೆಂಕಟರಮಣ ಮತ್ತು ಬಳ್ಳಾರಿಯ ವಿಶ್ವನಾಥರಂತಹ ಅಬಕಾರಿ ಗುತ್ತೇದಾರರು ಈ ಖಲೀಲ್‌ನಿಂದ ಕ್ಲೋರೋಹೈಡ್ರೇಟ್ ಖರೀದಿಸಿ ಕೊಳಕು ಸೇಂದಿ ಸರಬರಾಜಿನಲ್ಲಿ ಮುಳುಗೇ ಇದ್ದರು. ಈಗ ಇವರೆಲ್ಲ ಕಿತ್ತಾಡಿಕೊಂಡಿದ್ದಾರೆ.

ರಾಯಚೂರಿನ ಮಾರಪ್ಪ ಈಳಿಗೇರ್, ಹರಿಜನವಾಡದ ರಾಮಕೃಷ್ಣ ಗೋಪಾಲ್, ನಟರಾಜ್, ತಿಮ್ಮಪ್ಪರಂತಹ ಚಿಲ್ಲರೆ ವ್ಯಾಪಾರಿಗಳು ಈ ಕ್ಲೋರೊಹೈಡ್ರೇಟ್ ಮಿಶ್ರಿತ ಸೇಂದಿ ತಯಾರಿಸಿ ಮಾರುತ್ತಿದ್ದರು.

ಕಾಂಗ್ರೆ ಲೀಡರಿವನು!

ತನ್ನ ಅಕ್ರಮ ದಂಧೆ ಮರೆಮಾಚಲು ಖಲೀಲ್‌ಗೆ ಜಾತಿಬಾಂಧವ ಮಾಜಿ ಶಾಸಕ ಸೈಯ್ಯದ್ ಯಾಸ್ಮಿನ್‌ನ ಸಹಾಯಹಸ್ತ ದೊರೆತಿತ್ತು, 2002ರಲ್ಲಿ ರಾಯಚೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎರಡನೇ ಬಾರಿ ಅಧ್ಯಕ್ಷನಾಗಲು ಬಯಸಿದ್ದ ಭೋಸರಾಜ್ ಶಿಷ್ಯ ವಸಂತಕುಮಾರ್‌ಗೆ ಟಾಂಗ್ ಕೊಡಿಸಿದ ಯಾಸ್ಮಿನ್ ರಾ.ಅ.ಪ್ರಾ.ಕ್ಕೆ ಸಮಾಜದ್ರೋಹಿ ಖಲೀಲ್‌ನನ್ನು ತಂದು ಕೂಡಿಸಿಬಿಟ್ಟ.


ಯಾಸ್ಮಿನ್

ಹಾಗೆ ನೋಡಿದರೆ ಖಲೀಲ್ ಕಳೆದ ವರ್ಷವೇ ಜೈಲು ಪಾಲಾಗಬೇಕಿತ್ತು, 2005ರ ಫೆಬ್ರವರಿಯಲ್ಲಿ ದೇವದುರ್ಗ ತಾಲ್ಲೂಕಿನ ರಾಮದುರ್ಗದ ಹತ್ತಿರದ [illegible]ಮ್ಮನಾಳ ಗ್ರಾಮದ ಸೂಗಯ್ಯಸ್ವಾಮಿ ಎಂಬುವವನ ಹತ್ತಿರ 2400 ಕೆ.ಜಿ. ಕ್ಲೋರೋಹೈಡ್ರೇಟ್ ಪುಡಿ ವಶಪಡಿಸಿಕೊಂಡಿದ್ದರು. ಅದನ್ನು ಪೂರೈಸಿದ್ದು ಇದೇ ಕಾಂಗ್ರೆ ಕಳ್ಳ ಖಲೀಲ್‌ನೇ. ಆಗ ರಾ.ಅ.ಪ್ರಾ.ದ ಅಧ್ಯಕ್ಷನಾಗಿದ್ದರಿಂದ ಧರ್ಮಸಿಂಗ್ ನೇತೃತ್ವದ [illegible] ಖಲೀಲ್ ಪಾರಾಗಿದ್ದ. ನಂತರ [illegible] ಎಸ್.ಪಿ. [illegible]

[illegible] ಬಂಧಿಸಿದಾಗಲೇ ಖಲೀಲ್ [illegible] ಹೊರಬಿತ್ತು, ಕೊನೆಗೂ ಎಸ್.ಪಿ. [illegible] ಕೆಲಸ ಮಾಡಿದರಲ್ಲ?

-[illegible]



ಗೋಲ್‌ಗುಂಬಜ್ ಮಾರ್ತಾನಂತೆ ಡಿ.ಸಿ. ಮಹ್ಮದ್ ಮೊಹಸಿನ್!

"ಗೋಲ್‌ಗುಂಬಜ್ sale ಕರ್‌ಕೆ ಮೈ ಬಿಹಾರ್ ಜಾವೂಂಗಾsss" ಎಂದು ಆಪ್ತರ ಮುಂದೆ ಹೇಳುತ್ತಾನಂತೆ ಬಿಜಾಪುರದ ಡಿ.ಸಿ. ಮಹ್ಮದ್ ಮೊಹಸಿನ್. ಈ ಏಳು ವರ್ಷಗಳಲ್ಲಿ ಈತ ಬಿಜಾಪುರ ಜಿಲ್ಲೆಯನ್ನೇ ಬರ್ಬಾದ್ ಮಾಡಿದ್ದು ನೋಡಿದ ಜನ "ಇಂವಾ ಖರೇಂದ್ರ ಗೋಲಗುಮ್ಮಟ ಮಾರೇ ಊರಿಗೆ ಹೊಕ್ಕಾನ ಬಿಡ್ರಿ" ಎಂದು ಅಸಹಾಯಕರಂತೆ ಅಳಲು ತೋಡಿಕೊಳ್ಳುತ್ತಿದ್ದಾರೆ. ಇಬ್ಬದಿಗಿ ಇಂಜನಿಯರ್‌ಗಳು, ತಿರಬೋಕಿ ಪತ್ರಕರ್ತರು, ರಾಕ್ಷಸಿ ರಾಜಕಾರಣಿಗಳ ಕೂಟ ರಚಿಸಿಕೊಂಡು ಮಹ್ಮದ್ ಮೊಹಸಿನ್ ಮಾಡಿರುವ ಗೋಲ್‌ಮಾಲ್‌ಗಳನ್ನು ಇಲ್ಲಿ ಕೊಡುತ್ತಿದ್ದೇವೆ. ಈ ವರದಿ ಪ್ರಿಂಟ್ ಆಗುವ ಮೊದಲು ಗೋಲ್ ಗುಂಬಜ್ ಮಾರಾಟವಾಗಿರುತ್ತೇನೋ?

ಮಲಜಿ, ಧನಗೊಂಡ ಎಂಬ ಧನಪಿಶಾಚಿಗಳು!

ನಿರ್ಮಿತಿ ಕೇಂದ್ರದ ಜಿ.ಎನ್. ಮಲಜಿ, ಅವನ ಅಸಿಸ್ಟೆಂಟ್ ಇಂಜಿನಿಯರ್ ಧನಗೊಂಡ, ತಗಡು ಪತ್ರಕರ್ತ ಜಾವೆದ್ ಜಮಾದಾರ್‌ಗಳೆಲ್ಲ ಸೇರಿ ಡಿ.ಸಿ. ಮೊಹಸಿನ್ ಕಿವಿ ಕಚ್ಚಿ ಬಿಡುತ್ತಾರೆ. ಅಷ್ಟೇ ಸಾಕು ನೋಡಿ; ಡಿ.ಸಿ. ಸಾಹೇಬರು ಕೋಟಿ ಕೋಟಿ ಫಂಡ್‌ಗಳನ್ನೆಲ್ಲಾ ಕಚ್ಚಿ ಹಿಡಿದು ಬಿಡುತ್ತಾರೆ! ಅಷ್ಟೇ ವೇಗದಲ್ಲಿ ಮಲಜಿ, ಧನಗೊಂಡ, ಜಾವಿದ್ ಜಮಾದಾರ್‌ಗಳು ಬಾಯಿ ಹಾಕಿ ತಾವೂ ಸಿಕ್ಕಷ್ಟನ್ನು ಕಚ್ಚಿಕೊಂಡು ತಿಂದುಬಿಡುತ್ತವೆ. ಸುಮ್ಮನೆ ಹಲ್ಲು ಕಚ್ಚಿಕೊಂಡು ನೋಡುತ್ತಿದ್ದಾರೆ ಬಿಜಾಪುರದ ಜನ... ಕಚ್ಚೆಧಾರಿ ರಾಜಕಾರಣಿಗಳೇ ಡಿ.ಸಿ.ಯ 'ಕಚ್ಚು ಮಗಾ ಕಚ್ಚು' ಡ್ರಾಮಾಕ್ಕೆ ಆಶೀರ್ವಾದ ನೀಡಿರುವುದರಿಂದ ಈಗ ಗೋಲ್‌ಗುಂಬಜ್ ಮಾಯವಾಗುವ ಅಪಾಯ ಬಂದೇಬಿಟ್ಟದೆ. ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ಮಲಜಿ ಸಿಂಧನೂರಲ್ಲಿ ಹೋಟೆಲ್ ಮಾಡ್ತಿದ್ದೋನು ಅದ್ಹೇಗೆ ನಿರ್ಮಿತಿ ಕೇಂದ್ರದ ನೌಕರನಾಗಿ ಹೋದ ಎಂಬುದು ಇಂದಿಗೂ ನಿಗೂಢವೇ. ಬಿಜಾಪುರದಲ್ಲಷ್ಟೇ ಅಲ್ಲದೇ ಬಿಹಾರದಲ್ಲೂ ಈ ಮಲಜಿ ಆಸ್ತಿ ಮಾಡಿದ್ದಾನಂತೆ. ಟ್ರೇನಿಂಗ್‌ಗೆಂದು ಈ ಮಲಜಿಯನ್ನು ಡಿ.ಸಿ. ಮೊಹಸಿನ್ ಸಾಹೇಬರು ಬಿಹಾರ್‌ಗೆ ಕಳಿಸುತ್ತಲೇ ಇರುತ್ತಾರೆ. ಡಿ.ಸಿ.ಯ ಕಳ್ಳಗಂಟನ್ನು ಬಿಜಾಪುರದಿಂದ ಬಿಹಾರ್‌ಗೆ ಸಾಗಿಸಲು ಈ ಟ್ರೇನಿಂಗ್ ಎಂಬ ನಾಟಕ ನಡೆಯುತ್ತಿದೆ ಎಂದು ಜನರೇ ಆಡಿಕೊಳ್ಳುತ್ತಾರೆ.

ಇನ್ನು ಇಂಜಿನಿಯರ್ ಧನಗೊಂಡನದು ಬಿಡಿ, ಈತ ಹೆಸರಿಗೆ ತಕ್ಕಂತೆ ಧನದಾಹಿಯೇ ಹೌದು. ಮಳೆಕೊಯ್ಲುವಿನಲ್ಲಿ ಸಿಕ್ಕ ಕೋಟಿಗಳು ಇವನಿಗೆ ಜುಜುಬಿ ಎನಿಸಿದವು. ಅದಕ್ಕೆ ಏನಾದರೂ ಹೊಸ ಯೋಜನೆ ಬರಲಿ ಅಂತಾ ಕಾಯುತ್ತಿದ್ದ. ಮಹಾರಾಷ್ಟ್ರದಲ್ಲಿ ಭರ್ಜರಿ ಮಳೆ ಸುರಿಯಲಪ್ಪ ದೇವರೇ ಎಂದು ಕೂಡಲಸಂಗಮದಲ್ಲಿ ಪ್ರತಿ ವರ್ಷ ಈ ಧನಗೊಂಡ ಪೂಜೆ ಸಲ್ಲಿಸುತ್ತಾನೆ. ಡಿಸಿಯೂ ಇದಕ್ಕೆ ಪ್ರೋತ್ಸಾಹಿಸುತ್ತಾನೆ.

ಅಲ್ಲಿ ಮಹಾರಾಷ್ಟ್ರದಲ್ಲಿ ಮಳೆಯಾದರೆ ಇಲ್ಲಿ ಡಿ.ಸಿ. ಗ್ಯಾಂಗ್ ಏಕೆ ಖುಷಿ ಆಗುತ್ತದೆ ಅಂತಾ ಆಶ್ಚರ್ಯನಾ? ಇಲ್ಲೇ ಇರೋದು ಪಾಯಿಂಟು ವಾರಾಯ್ರೆ! ಮಹಾರಾಷ್ಟ್ರದಲ್ಲಿ ಮಳೆ ಜೋರಾದರೆ ಇಲ್ಲಿ ಭೀಮೆ ಭೋರ್ಗರೆದು ಹರಿದು ಉಕ್ಕಿ ಬಿಡುತ್ತಾಳೆ! ಉಜನಿ ಜಲಾಶಯದಿಂದ ನೀರು ಬಿಟ್ಟ ದಿನವೇ ಬಸವನಬಾಗೇವಾಡಿ, ಬಿಜಾಪುರ, ಇಂಡಿ, ಮುದ್ದೇಬಿಹಾಳ ಹಾಗೂ ಸಿಂದಗಿ ತಾಲ್ಲೂಕುಗಳ 102 ಹಳ್ಳಿಗಳು ಹಾನಿಗೊಳಗಾಗುವುದು ಗ್ಯಾರಂಟಿ. ಅದರಲ್ಲಿ 13 ಗ್ರಾಮಗಳು ಹೆಚ್ಚೂಕಡಿಮೆ ಮುಳುಗೇ ಬಿಡುತ್ತವೆ. ಆಗ ಪರಿಹಾರಕ್ಕೆಂದು ನೂರು ಕೋಟಿ ಲೆಕ್ಕಗಳ ಫಂಡ್ ಬರುತ್ತಲ್ಲ? ಅದಕ್ಕೆ ಡಿ.ಸಿ. ಗ್ಯಾಂಗ್ ಮಹಾರಾಷ್ಟ್ರದಲ್ಲಿ ದೊಡ್ಡ ಮಳೆಯಾದ್ರೆ ದಿಲ್‌ಖುಷ್ ಆಗಿಬಿಡುತ್ತದೆ.



2005ರ ಜುಲೈನಲ್ಲಿ ಭೀಮೆ ಉಕ್ಕಿ ಹರಿದು ಜಿಲ್ಲೆಯ 5 ತಾಲ್ಲೂಕುಗಳಿಗೆ ನೆರೆ ಪರಿಹಾರಕ್ಕೆಂದು ಬಂದ 34 ಕೋಟಿ ಕಾಣು ಕಾಣುವುದರೊಳಗೇ ಸ್ವಾಹಾ ಆಗಿ ಹೋಗಿತ್ತು. ಗಂಜಿ ಕೇಂದ್ರ, ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ಡಿಸಿಯವರು ಮಲಜಿಗೆ ಕೊಟ್ಟದ್ದೇ ತಡ, ಭೀಮೆಯ ರಾಡಿ ನೀರಿಗಿಂತಲೂ ಹೊಲಸಾದ ಗಂಜಿಯನ್ನು ಜನರಿಗೆ ಕುಡಿಸಿ,ತಾನು ಮಾತ್ರ ಲಕ್ಷ ಲಕ್ಷ ನೆಂಜಿಕೊಂಡೇಬಿಟ್ಟ ಈ ಮಲಜಿ ಎಂಬ ಗಲೀಜು ಗಡವ! ಡಿ.ಸಿ. ಸಾಹೇಬರು ರಾಜಕಾರಣಿಗಳ ಪಾಲನ್ನು ಸರಿಯಾಗಿ ಹಂಚದಿರುವ ಡಿಸಿಯನ್ನು ಪುಸ್ಸಿಸೋಲೆ ಇಲ್ಲದಂತಾಗಿತ್ತು. ಇಂಡಿಯ ಗೂಂಡಾ ಶಾಸಕ ರವಿಕಾಂತ ಪಾಟೀಲ್, ಸಿಂದಗಿ ಶಾಸಕ ಚಡ್ಡಿ ಅಶೋಕ ಶಾಬಾದಿ, ತಿಕೋಟಾದ ಪ್ರಚಾರ ಪ್ರಿಯ ಎಂ.ಬಿ. ಪಾಟೀಲ್, ಹೂವಿನ ಹಿಪ್ಪರಗಿಯ ಮುಳ್ಳು ಚಡ್ಡಿ ಶಿವಪುತ್ರಪ್ಪ ದೇಸಾಯಿ, ಬಸವನಬಾಗೇವಾಡಿಯ ಶಾಸಕ ರಿಂಗ್ ಟೆಂಡರ್ ಕುಖ್ಯಾತಿಯ ಗೂಳಿ ಶಿವಾನಂದ ಪಾಟೀಲ್, ವಿಜಾಪುರ ಶಾಸಕ ಚಡ್ಡಿಗಳ ಪಟ್ಟಣಶೆಟ್ಟಿ ಇವರೆಲ್ಲ ತಮ್ಮ ಪಾಲು ಪಡೆದುಕೊಂಡು, ನಿರಾಶ್ರಿತರನ್ನು ನೀರುಪಾಲು ಮಾಡಿಬಿಟ್ಟರು.


ಅಪ್ಪು ಪಟ್ಟಣಶೆಟ್ಟಿ


ಶಿವಾನಂದ ಪಾಟೀಲ

34 ಕೋಟಿಗಳಲ್ಲಿ 4 ಕೋಟಿಗಳನ್ನು ಏಜಂಟರ ಮೂಲಕ ಹಂಚಿದಾಗ ಆ ಹಣ ನಿರಾಶ್ರಿತರನ್ನು ತಲುಪಲೇ ಇಲ್ಲ! ಇಂಡಿ ತಹಶೀಲ್ದಾರ್ ಮಹಾದೇವಪ್ಪ ಸಾಸನೂರ್ 17 ಲಕ್ಷ ಅಫರಾತಫರಾ ಮಾಡಿದ, ಮುದ್ದೇಹಾಳದ ತಹಶೀಲ್ದಾರ್ ನಾಡಗೌಡ ಕೊಟ್ಟ 16 ಲಕ್ಷದಲ್ಲಿ ಮುಕ್ಕಿದ್ದೇ ಹೆಚ್ಚು, ಬಸವನಬಾಗೇವಾಡಿ ತಹಶೀಲ್ದಾರ್ ಆರ್.ಬಿ. ರೆಡ್ಡಿಯಾದರೂ ಅದ್ಹೇಗೆ ಬಿಟ್ಟಾನು ಹೇಳಿ! ಸಿಂದಗಿಗೆ 17 ಲಕ್ಷ ಬಂದಿತ್ತು, ಹಾಗೇ ಮಾಯವೂ ಆಗಿತ್ತು! ಜಿಲ್ಲಾಧಿಕಾರಿಯ ಖಾತೆಯಲ್ಲಿದ್ದ 250 ಲಕ್ಷ ಪ್ರವಾಹ ದಷ್ಟೇ ವೇಗದಲ್ಲಿ ಹರಿದು ಹೋಯ್ತು, ಬಿಹಾರಕ್ಕಾ?.... ಗೊತ್ತಿಲ್ಲ... ಮೂಲಭೂತ ಸೌಕರ್ಯಕ್ಕೆ 29 ಕೋಟಿ ಕಂಟ್ರಾಕ್ಟ್ ನೀಡಿದ ಡಿ.ಸಿ. ಅದೆಷ್ಟು ನುಂಗಿದನೊ? 63 ಲಕ್ಷ ಬಿಜಾಪುರದ ರಸ್ತೆ ರಿಪೇರಿಗೆಂದರು.... ನೋಡಿದರೆ 20 ಲಕ್ಷವನ್ನೂ ಖರ್ಚು ಮಾಡಿರದಂತಹ ರಸ್ತೆ ರಿಪೇರಿಯಾಯ್ತು. ಚರಂಡಿ ನವೀಕರಣಕ್ಕೆ ಹಾಕಿದ 96 ಲಕ್ಷ ಚರಂಡಿ ಪಾಲಾಗಿ, ಡಿ.ಸಿ. ಗ್ಯಾಂಗ್‌ಗೆ ತಲುಪಿತೆಂದು ಕಾಣುತ್ತದೆ. ಬಾವಿಗಳ ಹೂಳೆತ್ತಲು 11 ಲಕ್ಷ ಖರ್ಚಾಯ್ತು, ಬಾವಿಗಳು ಹಾಳುಬಾವಿಗಳಾಗೇ ಉಳಿದವು. ಡಿ.ಸಿ. ಟೆಂಡರ್ ಕರೆದರೆ ಒಬ್ಬೊಬ್ಬ ಐದಾರು ಹೆಸರಲ್ಲಿ ಟೆಂಡರ್ ಹೆಟ್ಟುತ್ತಾರೆ. "ಇಂತಹ ಕಡುಭ್ರಷ್ಟ ಡಿ.ಸಿ.ಯನ್ನು ನಾನು ನೋಡೇ ಇಲ್ಲ" ಎಂದು ಲೋಕಾಯುಕ್ತ ವೆಂಕಟಾಚಲರೇ ಗಾಬರಿ ಬಿದ್ದಿದ್ದರು. ರಾಜಕೀಯ ಪುಡಾರಿ ಬಿ.ಎಸ್. ಬಿರಾದಾರ್, ಮಾಜಿ ಸಚಿವ ಉಸ್ತಾದ್ ಸಂಬಂಧಿ ಜಿ.ಎಮ್. ಉಸ್ತಾದ್‌ಗಳಿಗೆ ಟೆಂಡರ್‌ನಲ್ಲಿ ಸದಾ ಗೆಲುವಿನ ನಗೆಯೇ!


ನಗರ ಸೌಂದರ್ಯೀಕರಣ ಎಂದು ಇಂಡಿಯ ಎ.ಸಿ. (ಈ ಹಿಂದೆ ಜಿಲ್ಲಾ ಸ್ಥಾನಿಕ ಅಧಿಕಾರಿ) ಎನ್. ಶಿವರಾಜ್, ಬಿಜಾಪುರದ ಎ.ಸಿ. ಟಿ.ಎಚ್.ಎನ್. ಕುಮಾರ್‌ರವರಿಗೆ 7 ಕೋಟಿ ಕೊಟ್ಟ ಡಿ.ಸಿ. ತನ್ನ ಪಾಲನ್ನು ಮೊದಲೇ ಪಡೆದುಬಿಟ್ಟಿದ್ದ. ಬಿಜಾಪುರಕ್ಕೆ ಸೌಂದರ್ಯ ಏರಲಿ, ಇನ್ನಷ್ಟು ಗಬ್ಬು ಬಂತಷ್ಟೇ. ಬಾಲಕಾರ್ಮಿಕರಿಗೆ 42 ಶಾಲೆ ಆರಂಭಿಸಿ ತನಗೆ ಬೇಕಾದ ನಕಲಿ NGO ಗಳಿಗೆ ಪಾಲಿಸಿ, 52 ಲಕ್ಷವನ್ನು ಹೇಗೇಗೋ ಹಂಚಿದ್ದೂ ಡಿಸಿಯ 'ಸಾಧನೆಯೇ'! ಯೋಜನಾ ನಿರ್ದೇಶಕಿ ಅಫೀಜಾ ಇನಾಂದಾರ್ "ಯಹಿ ಹೈ ರೈಟ್ ಟೈಮ್" ಎಂದು ಸಿಕ್ಕಷ್ಟು ಬಾಚಿಕೊಂಡಳು. ಹತ್ತಾರು ವರ್ಷಗಳಿಂದ ಬಿಜಾಪುರದಲ್ಲೇ ಠಿಕಾಣಿ ಹೂಡಿರುವ ವಯಸ್ಕರ ಶಿಕ್ಷಣದ ನೋಡಲ್ ಅಧಿಕಾರಿ ಬುಡನ್‌ಖಾನ್ ವಯಸ್ಕರ ಶಿಕ್ಷಣದ ಹಣವನ್ನು ಬುಡಕ್ ಎಂದು ನುಂಗುತ್ತಲೇ ಇದ್ದಾನೆ. ಬಿಜಾಪುರದ ತಹಶೀಲ್ದಾರ್ ದಾಳಿಯಂತೂ ಡಿಸಿಯನ್ನು ಮೀರಿಸುತ್ತಾನೇನೋ ಎನ್ನುವಷ್ಟು ಸ್ಪೀಡಲ್ಲಿದ್ದಾನೆ. ಗೋಲ್ಗುಂಬಜ್ ಮಾರಾಟವಾಗುವ ಮುನ್ನ ಒಮ್ಮೆ ಕಣ್ತುಂಬ ನೋಡಿಬಿಡಿ.

-ಮೇಘರಾಜ್

ದಡ್ಡಿಯಲ್ಲ ಈ ಶೋಭಾ ಕಾಮರಡ್ಡಿ...

ಒಂದೇ ಒಂದು ವರ್ಷದಲ್ಲಿ ಬಿಜಾಪುರ [illegible] ಬಿಜಾಪುರ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. [illegible] ಸರ್ಕಾರಿ ನೌಕರರಿಂದ 2 [illegible] ಬಾಗಲಕೋಟೆಯಲ್ಲಿದ್ದಾಗ ಆಸ್ಪತ್ರೆಯ [illegible] ಹುಂಡಿಗೆ ಚಿಗ್ಗ ಖರೀದಿಸಿದ ಭೂಪ ಈ [illegible]

ಜಾವೆದ್ ಜಮಾದಾರ್: ಕೈಲಿ ಪೆನ್ನು... ಎಷ್ಟರ ತಿನ್ನು....



ಹೆಸರಿಗೆ ಪತ್ರಕರ್ತನಾಗಿರುವ ಜಾವೆದ್ ಜಮಾದಾರ್ "ಕೈಲಿ ಪೆನ್ನು ಎಷ್ಟರ ತಿನ್ನು" ಎಂಬ ಸಿದ್ಧಾಂತದವನು. ಡಿಸಿಯ ಗ್ಯಾಂಗ್‌ಗೆ [illegible] ಪಾಯಿಂಟ್. ತನ್ನ ಲೋಕಲ್ ಕೇಬಲ್ ಟಿವಿ ನೆಟ್‌ವರ್ಕ್ [illegible] ಪ್ರಚಾರ ಕೊಡುತ್ತಲೇ ಹಣ ಮಾಡಿದವನು ಈ ಚಟ್ಟಿ ಪತ್ರಕರ್ತ. ತಗಡು ಪತ್ರಕರ್ತರಿಗೆ ಗುಂಡು-ತುಂಡು ಹಂಚಿ ಡಿಸಿಗೆ ಪ್ರಚಾರ ಕೊಡಿಸುವುದೇ [illegible]


ನನ್ನ ಕೆಲಸವನ್ನು ಘನತೆಯಿಂದ ಮಾಡಿದ್ದೇನೆ. ನನ್ನ ಕೈ ಮೇಲಿರಬೇಕಾದ್ದು ರಕ್ತವಲ್ಲ...ನೊರೆ ಮಾತ್ರ. ವೃತ್ತಿಯಲ್ಲಿ ನೀನು ಮರಣದಂಡನೆ ಕೊಡುವವನಿರಬಹುದು. ನಾನು ಒಬ್ಬ ಕ್ಷೌರಿಕ ಮಾತ್ರ. ವ್ಯವಸ್ಥೆಯೆಂಬ ಹಂದರದಲ್ಲಿ ಪ್ರತಿಯೊಬ್ಬನಿಗೂ ಸ್ಥಾನವುಂಟು. ಹೌದು. ಅವನದ್ದೇ ಆದ ವಿಶಿಷ್ಟ ಸ್ಥಾನ.

ಬರೀ ನೊರೆ, ಅಷ್ಟೇ

ಕತೆ

ಕನ್ನಡಕ್ಕೆ : ಸುಕನ್ಯಾ ಕನಾರಳ್ಳಿ

(ಮೂಲ: ಲ್ಯಾಟಿನ್ ಅಮೆರಿಕನ್ ಲೇಖಕ ಹರ್ನ್ಯಾಂಡೊ ಟೆಲ್ಲೆ ಯ 'ಜಸ್ಟ್ ಲ್ಯಾದರ್, ದಟ್ಸ್ ಆಲ್')



ಒಳಗೆ ಬರುತ್ತಿದ್ದವ ಒಂದು ಮಾತೂ ಆಡದೆ ಬಂದ. ನನ್ನ ಅತ್ಯುತ್ತಮ ರೇಜರುಗಳನ್ನು ಚರ್ಮದ ಪಟ್ಟಿಯೊಂದರ ಮೇಲೆ ಮಸೆಯುತ್ತಾ ಹರಿತಗೊಳಿಸುತ್ತಾ ಕೂತಿದ್ದೆ. ಅವನನ್ನು ಗುರುತಿಸಿದ್ದೇ ತಡ, ಮೆಲ್ಲನೆ ನಡುಗಲಾರಂಭಿಸಿದೆ. ಅವನದನ್ನು ಗುರುತಿಸಿದಂತೆ ಕಾಣಲಿಲ್ಲ. ನನ್ನೊಳಗಿನ ತೊಳಲಾಟವನ್ನು ತೋರಗೊಡದಂತೆ ಮಸೆತವನ್ನು ಮುಂದುವರಿಸಿದೆ. ರೇಜರನ್ನು ಹೆಬ್ಬೆರಳಿನ ಗದ್ದೆಯ ಮೇಲಿಟ್ಟು ಮೇಲೆತ್ತಿ ಬೆಳಕಿನಲ್ಲಿ ಹರಿತವನ್ನು ಪರೀಕ್ಷಿಸಿದೆ. ಗನ್ ಕವಚವನ್ನು ತೂಗಾಡಿಸುತ್ತಿದ್ದ ಅವನು ಬುಲೆಟ್ಟುಗಳ ಸೊಂಟದ ಪಟ್ಟಿಯನ್ನು ತೆಗೆದ. ಗೋಡೆಯ ಗೂಟವೊಂದಕ್ಕೆ ಅದನ್ನು ನೇತು ಹಾಕಿ ಅದರ ಮೇಲೆ ತನ್ನ ಮಿಲಿಟರಿ ಟೋಪಿಯನ್ನಿರಿಸಿದ. ಕತ್ತಿನ ಟೈಯನ್ನು ಸಡಿಲಗೊಳಿಸುತ್ತಾ ನನ್ನ ಕಡೆಗೆ ತಿರುಗಿ 'ದರಿದ್ರ ಸೆಖೆ. ನನಗೆ ಕ್ಷೌರ ಬೇಕು' ಎಂದ. ಹೇಳಿದವನೇ ಕುರ್ಚಿಯಲ್ಲಿ ಕೂತ.

ಅವನ ಗಡ್ಡವನ್ನು ನೋಡುತ್ತಾ ಕೊನೇ ಪಕ್ಷ ನಾಲ್ಕು ದಿನಗಳದ್ದಿರಬೇಕು ಎಂದು ಅಂದಾಜಿಸಿದೆ. ನಮ್ಮವರನ್ನು ಬೇಟೆಯಾಡಲು ನಾಲ್ಕು ದಿನಗಳ ದಂಡಯಾತ್ರೆ ಮಾಡಿದ್ದನಲ್ಲ! ಸೂರ್ಯನ ಝಳದಿಂದ ಮುಖ ಕೆಂಪುಗಟ್ಟಿದಂತೆ ಕಂಡ. ಕ್ಷೌರಕ್ಕೆ ಬೇಕಾದ ಸೋಪಿನ ದ್ರಾವಣವನ್ನು ತಯಾರಿಸಬೇಕಿತ್ತು. ಸೋಪಿನ ಚೂರುಗಳನ್ನು ಕತ್ತರಿಸಿ ಕಪ್ಪಿನಲ್ಲಿದ್ದ ಬೆಚ್ಚಗಿನ ನೀರಿಗೆ ಹಾಕಿ ಬ್ರಶ್ಶಿನಿಂದ ಕಲಕಲಾರಂಭಿಸಿದೆ. ನೊರೆನೊರೆಯಾಗಿ ಬುರುಗು ಮೇಲೇಳಲಾರಂಭಿಸಿತು. 'ನಮ್ಮ ಕಡೆಯ ಇತರರಿಗೂ ಇಷ್ಟೇ ಗಡ್ಡವಿರಬಹುದು...' ನಾನು ಮಾತಾಡಲಿಲ್ಲ, ಸುಮ್ಮನೇ ಕಲಕುತ್ತಲೇ ಇದ್ದೆ.

'ಆದರೂ ದಂಡವೇನಿಲ್ಲ, ಮುಖ್ಯವಾಗಿ ಬೇಕಿದ್ದವರನ್ನೆಲ್ಲಾ ಹಿಡಿದು ಹಾಕಿದ್ದೇವೆ. ಕೆಲವರನ್ನು ಕೊಂದೇ ತಂದೆವು. ಉಳಿದವರೂ ಸದ್ಯದಲ್ಲೇ ಸಾಯಲಿದ್ದಾರೆ.'

'ಎಷ್ಟು ಜನರನ್ನು ಹಿಡಿದಿರಿ?' ನಾನು ಕೇಳಿದೆ.

'ಹದಿನಾಲ್ಕು. ಅವರನ್ನು ಹಿಡಿದು ಹಾಕಲು ಕಾಡಿನ ಒಳಗೆ ಹೋಗಬೇಕಾಯಿತು. ಬಿಡುವುದಿಲ್ಲ, ಈ ಸಲ ಲೆಕ್ಕ ಚುಕ್ತಾ ಮಾಡಿಯೇ ಸಿದ್ಧ. ಈ ಸಲ ಒಬ್ಬನೇ ಒಬ್ಬ ಸಹ ತಪ್ಪಿಸಿಕೊಳ್ಳಲು ಬಿಡುವುದಿಲ್ಲ, ನೋಡುತ್ತಿರಿ.'

ನನ್ನ ಕೈಯಲ್ಲಿದ್ದ ಸೋಪಿನ ನೊರೆಯ ಕಪ್ಪನ್ನು ನೋಡಿ ಕುರ್ಚಿಯಲ್ಲಿ ಹಿಂದೆ ಒರಗಿದ. ಅವನ ಕತ್ತಿನ ಸುತ್ತ ಬಟ್ಟೆಯನ್ನು ಹಾಕಬೇಕಿತ್ತು, ನಾನು ತತ್ತರಿಸಿದ್ದೆ ಎಂಬುವುದರಲ್ಲಿ ಸಂಶಯವೇ ಇರಲಿಲ್ಲ, ಡ್ರಾಯರಿನಿಂದ ಬಟ್ಟೆಯೊಂದನ್ನು ಎಳೆದು ಅವನ ಕತ್ತಿನ ಸುತ್ತ ಕಟ್ಟಿದೆ. ಅವನು ಮಾತಾಡುತ್ತಲೇ ಇದ್ದ. ಅವನ ಕಡೆಯವರಿಗೆ ನನ್ನ ಬೆಂಬಲವಿದೆ ಎಂದು ಎಣಿಸಿದನೋ ಏನೋ.

'ನಾವು ಆವತ್ತು ಅವರಿಗೆ ಕಲಿಸಿದ ಪಾಠದಿಂದ ಊರಿನವರೂ ಬುದ್ಧಿ ಕಲಿತಿರಬಹುದು ಎಂದು ಅಂದುಕೊಂಡಿದ್ದೇನೆ' ಎಂದ.

'ಖಂಡಿತವಾಗಿಯೂ.' ಬೆವರಿನ ವಾಸನೆಯಿಂದ ಕೂಡಿದ್ದ ಅವನ ಕಪ್ಪು ಕತ್ತಿನ ಹಿಂದೆ ಬಟ್ಟೆಯ ಗಂಟನ್ನು ಬಿಗಿಯುತ್ತಾ ಹೇಳಿದೆ.

'ಆವತ್ತಿನ ದೃಶ್ಯ ಚೆನ್ನಾಗಿತ್ತಲ್ಲ?'

'ತುಂಬ ಚೆನ್ನಾಗಿತ್ತು' ಬ್ರಶ್ಶನ್ನು ತೆಗೆದುಕೊಳ್ಳಲು ಹಿಂದೆ ತಿರುಗಿ ನಾನಂದೆ. ಸೋಪಿನ ನೊರೆಯ ತಂಪಿಗೆ ಕಾಯುತ್ತಾ ಆಯಾಸವಾದವನಂತೆ ಕಣ್ಮುಚ್ಚಿದ. ನಾನವನ ಮುಖವನ್ನು ಅಷ್ಟು ಹತ್ತಿರದಿಂದ ಯಾವತ್ತೂ ನೋಡಿದ್ದೇ ಇಲ್ಲ. ಆವತ್ತು, ನಾಲ್ಕು ಮಂದಿ ದಂಗೆಕೋರರಿಗೆ ನೇಣುಗಟ್ಟಿ ಇಡೀ ಊರವರನ್ನು ಸ್ಕೂಲಿನ ಹೊರಾಂಗಣದಲ್ಲಿ ಜಮಾಯಿಸಿ ಆ ದೃಶ್ಯವನ್ನು ನೋಡುವಂತೆ ಅಪ್ಪಣೆ ಹೊರಡಿಸಿದ್ದನಲ್ಲ, ಅಂದು ಒಂದು ಕ್ಷಣದ ಮಟ್ಟಿಗೆ ಇವನನ್ನು ಇದಿರುಬದಿರಾಗಿ ನೋಡಿದ್ದೆ, ಆದರೆ ಛಿದ್ರಗೊಳಿಸಿದ ದೇಹಗಳನ್ನು ಆಗಷ್ಟೇ ನೋಡಿದ ಮನಸ್ಸಿನಾಳಕ್ಕೆ ಈ ಮುಖ, ಇಡೀ ಕಾರ್ಯವೈಖರಿಯನ್ನು ನಿರ್ದೇಶಿಸಿದವನ ಮುಖ ಅಷ್ಟು ಇಳಿದಿರಲಿಲ್ಲ, ಈಗ ಅದೇ ಮುಖವನ್ನು ಕೈಯಲ್ಲಿ ತೆಗೆದುಕೊಂಡು ನನ್ನ ಕಾರ್ಯ ಮಾಡಬೇಕಿತ್ತು, ಅವನ ಮುಖ ಅಷ್ಟೇನೂ ಕೆಟ್ಟದಾಗಿರಲಿಲ್ಲ, ಅವನ ಗಡ್ಡದ ದೆಸೆಯಿಂದ ಇದ್ದದ್ದಕ್ಕಿಂತ ಹೆಚ್ಚು ವಯಸ್ಸಾದವನಂತೆ ಕಾಣುತ್ತಿದ್ದ ಅಷ್ಟೇ. ಆದರೂ ಆ ಗಡ್ಡ ಅವನಿಗೆ ಒಪ್ಪುತ್ತಿತ್ತು, ಅವನ ಹೆಸರು ಟೋರೆ, ಕ್ಯಾಪ್ಟನ್ ಟೋರೆ. ಅದ್ಭುತ ಕಲ್ಪನಾಶಕ್ತಿಯುಳ್ಳವ. ಇಲ್ಲದಿದ್ದರೆ ಬಂಡುಕೋರರ ದೇಹಗಳನ್ನು ನೇತುಹಾಕಿ ಅವರ ದೇಹದ ನಿರ್ದಿಷ್ಟ ಭಾಗಗಳಿಗೆ ಗುರಿ ಇಟ್ಟು ಗುಂಡು ಉಡಾಯಿಸಿ, ಆ ಮೂಲಕ ಕೈಚಳಕವನ್ನು ಎಲ್ಲರೆದುರು ತೋರಿಸಿಕೊಳ್ಳುವ ಯೋಚನೆ ಸಾಮಾನ್ಯರಿಗೆ ಹೊಳೆಯಲು ಸಾಧ್ಯವೆ?

ಸೋಪಿನ ನೀರನ್ನು ಅವನ ಗಲ್ಲಕ್ಕೆ ಬಳಿಯ ತೊಡಗಿದೆ. 'ಏನೂ ಪ್ರಯಾಸವಿಲ್ಲದೇ ಹೀಗೆಯೇ ನಿದ್ದೆಗೆ ಜಾರಿಬಿಡಬಹುದಲ್ಲೆ- ಕಣ್ಮುಚ್ಚಿದಂತೆಯೇ ಅವನೆಂದ. 'ಆದರೇನು ಮಾಡೋದು? ಈ ಮಧ್ಯಾಹ್ನ ಮಾಡಲು ಬೇಕಾದಷ್ಟು ಕೆಲಸಗಳವೆಯಲ್ಲ!' ನನ್ನ ಕೈ ಒಂದು ಕ್ಷಣ ಸ್ತಬ್ಧವಾಯಿತು. ನಿರಾಸಕ್ತಿಯ ಸೋಗು ಹಾಕಿ ಕೇಳಿದೆ. 'ಇವತ್ತೂ ಗುಂಡುಗರೆಯುವ ದೃಶ್ಯವೆ?'

'ಸ್ವಲ್ಪ ಆ ತರಹದ್ದೇ. ಸ್ವಲ್ಪ ನಿಧಾನದ್ದಿರಬಹುದು.' ನನ್ನ ನಡುಗುವ ಕೈಗಳು ಮತ್ತೆ ಸೋಪನ್ನು ಬಳಿಯುವ ಕೆಲಸದಲ್ಲಿ ಮಗ್ನವಾದವು. ಸದ್ಯ ನನ್ನ ಅದೃಷ್ಟಕ್ಕೆ ಅವ ನನ್ನ ಮುಖವನ್ನು, ನನ್ನಲ್ಲೇನಾಗುತ್ತಿದೆ ಎನ್ನುವುದನ್ನು ನೋಡಲು ಸಾಧ್ಯವಿರಲಿಲ್ಲ, 'ಛೆ! ಇವ ಯಾಕಾದರೂ ನನ್ನಲ್ಲಿಗೆ ಬಂದನೋ!' ಎಂದು ಹಳಹಳಿಸಿದೆ. ನಮ್ಮ ಕಡೆಯವರಲ್ಲಿ ಹಲವರು ಅವ ಇಲ್ಲಿ ಒಳಗೆ ಬಂದಿದ್ದನ್ನು ನೋಡಿರಬಹುದು. ತನ್ನ ಸೂರಿನ ಆಶ್ರಯದಲ್ಲೇ ಇರುವ ವೈರಿಯೊಬ್ಬ ಹೊರಿಸುವ ನೈತಿಕ ನಿರ್ಬಂಧಗಳೆಂದರೆ! ಅಬ್ಬ! ಬೇರೆಯವರಿಗೆ ಮಾಡುವಂತೆ ಜಾಗರೂಕತೆಯಿಂದ ನಯವಾಗಿ ಚರ್ಮದ ಒಂದು ರಂಧ್ರವೂ ರಕ್ತದ ಒಂದು ಹನಿಯನ್ನೂ ಹರಿಯಗೊಡದಂತೆ ಗಡ್ಡ ಹೆರೆದು ಕಳಿಸಬೇಕು. ಕೂದಲ ಗಂಟುಗಳ ಮಧ್ಯದಲ್ಲಿ ಬ್ಲೇಡ್ ಅಡ್ಡಾದಿಡ್ಡಿಯಾಗಿ ಹೋಗಿ ನೋವನ್ನುಂಟು ಮಾಡಬಾರದು. ಗಡ್ಡ ನಯವಾಗಿ ಮರೆಯಾಗಿ ಅದರ ಸ್ಥಳದಲ್ಲಿ ಹೊಳೆಯುವ ನುಣುಪಿನ ಚರ್ಮ ಇಣುಕಬೇಕು. ಕೊನೆಯಲ್ಲಿ ನನ್ನ ಹಿಂಗೈಯನ್ನು ಅವನ ಗಲ್ಲಕ್ಕೆ ಸವರಿದಾಗ ಅಲ್ಲಿ ಒಂದೇ ಒಂದು ಕೂದಲ ಒರಟುತನವೂ ಇರಬಾರದು. ಹೌದು, ವೈಯಕ್ತಿಕವಾಗಿ ನಾನೊಬ್ಬ ದಂಗೆಕೋರನಿರಬಹುದು. ಆದರೆ ನಾನೊಬ್ಬ ದಕ್ಷ ಮತ್ತು ಪ್ರಾಮಾಣಿಕ ಕ್ಷೌರಿಕ ಕೂಡಾ. ನನ್ನ ವೃತ್ತಿಯಲ್ಲಿನ ನೈಪುಣ್ಯತೆಯ ಬಗ್ಗೆ ನನಗೆಷ್ಟು ಹೆಮ್ಮೆ! ಆ ಕೌಶಲ್ಯಕ್ಕೆ ಈ ನಾಲ್ಕು ದಿನದ ಗಡ್ಡದ ಹೆರೆತವೇ ಸಾಕ್ಷಿ.

ರೇಜರಿನ ಎರಡೂ ಕಡೆಗಳನ್ನು ಬಿಡಿಸಿ, ಬ್ಲೇಡಿನಿಂದ ಗಡ್ಡದ ಒಂದು ಪಾರ್ಶ್ವವನ್ನು ಕೆಳಮುಖವಾಗಿ ಹೆರೆಯಲಾರಂಭಿಸಿದೆ. ಗಡ್ಡ ಮತ್ತು ಬ್ಲೇಡು ಒಂದಕ್ಕೊಂದು ಅದ್ಭುತವಾಗಿ ಪ್ರತಿಕ್ರಿಯಿಸಹತ್ತಿದವು. ಅವನ ಗಡ್ಡ ಗಿಡ್ಡವಾಗಿದ್ದರೂ ದಟ್ಟವಾಗಿ ಒರಟಾಗಿತ್ತು, ಇಷ್ಟಿಷ್ಟೇ ಚರ್ಮ ನಿಧಾನವಾಗಿ ಹೊರಗೆ ಹಣಕಲಾರಂಭಿಸಿತು. ರೇಜರ್ ಮೆಲ್ಲನೆ ಕರ್ರ್ ಎನ್ನುತ್ತಾ ಹೆರೆದಂತೆಲ್ಲಾ ನೊರೆಗಂಟಿದ ಕೂದಲು ಬ್ಲೇಡಿನ ಮೇಲೆ ಗುಪ್ಪೆಯಾಗಹತ್ತಿತು. ಅದನ್ನು ಸ್ವಚ್ಛಗೊಳಿಸಿ ಮತ್ತೆ ಮಸೆಯುವ ಪಟ್ಟಿಯ ಮೇಲೆ ಹರಿತಗೊಳಿಸಿಕೊಂಡೆ. ನಾನೊಬ್ಬ ದಕ್ಷ ಕ್ಷೌರಿಕ. ಕಣ್ಮುಚ್ಚಿ ಮಲಗಿದ್ದ ಗಿರಾಕಿ ಈಗ ಕಣ್ತೆರೆದು ಶೀಟಿನೊಳಗಿಂದ ಒಂದು ಕೈಯನ್ನು ತೆಗೆದು ನುಣುಪಾದ ಕಡೆ ಆಡಿಸಿ ಹೇಳಿದ.

'ಇವತ್ತು ಆರು ಗಂಟೆಗೆ ಸ್ಕೂಲಿನ ಹತ್ತಿರ ಬಾ.'

'ಆವತ್ತಿನ ತರಹವೇನಾ?' ತತ್ತರಿಸಿ ಕೇಳಿದೆ.

'ಅದಕ್ಕಿಂತ ಚೆನ್ನಾಗಿರುತ್ತೆ.'

'ಏನು ಮಾಡಬೇಕೆಂದಿದ್ದೀರಿ?'

'ಇನ್ನೂ ಗೊತ್ತಿಲ್ಲ, ಆದರೆ ಸಾಕಷ್ಟು ಮಜಾ ತಗೋತೀವಿ ಅಂತ ಮಾತ್ರ ಗೊತ್ತು.'

ಮತ್ತೊಮ್ಮೆ ಕಣ್ಮುಚ್ಚಿ ಹಿಂದಕ್ಕೊರಗಿದ. ಕೈಯಲ್ಲಿ ರೇಜರ್ ಹಿಡಿದು ಅವನ ಹತ್ತಿರ ಹೋದೆ.

'ಉಳಿದವರಿಗೂ ಅದೇ ಗತಿಯೇ?' ಕಷ್ಟಪಟ್ಟು ಕೇಳಿದೆ.

'ಪ್ರತಿಯೊಬ್ಬರಿಗೂ'

ಸೋಪಿನ ನೊರೆ ಅವನ ಮುಖದ ಮೇಲೆ ಒಣಗುತ್ತಿತ್ತು. ನಾನು ಅವಸರಿಸಲೇಬೇಕಿತ್ತು. ಕನ್ನಡಿಯಲ್ಲಿ ಕಾಣುತ್ತಿದ್ದ ರಸ್ತೆಯೆಡೆಗೆ ದೃಷ್ಟಿ ಹೊರಳಿಸಿದೆ. ಎಂದಿನಂತೆಯೇ ಇತ್ತು, ದಿನಸಿ ಅಂಗಡಿಯಲ್ಲಿ ಇಬ್ಬರೋ ಮೂವರೋ ಗಿರಾಕಿಗಳಿದ್ದರು. ಗಡಿಯಾರದ ಕಡೆಗೊಮ್ಮೆ ನೋಡಿದೆ. ಮಧ್ಯಾಹ್ನದ ಎರಡು ಗಂಟೆ ಇಪ್ಪತ್ತು ನಿಮಿಷ. ರೇಜರ್ ಮತ್ತೊಮ್ಮೆ ಇನ್ನೊಂದು ಪಾರ್ಶ್ವದಲ್ಲಿ ಮೇಲಿಂದ ಕೆಳಗೆ ಆಡಲಾರಂಭಿಸಿತು. ಪೊದೆಯಾಗಿ ಬೆಳೆದ ಗಡ್ಡ. ಕವಿಗಳಂತೆ, ಸಂತರಂತೆ ಉದ್ದಕ್ಕೆ ಬೆಳೆಯಲು ಬಿಟ್ಟರೆ ಇನ್ನೂ ಚೆಂದ ಕಂಡಾನು. ಬೇರೆಯವರಿಗೆ ಅವನನ್ನು ಗುರುತಿಸಲು ಕಷ್ಟವಾಗಬಹುದು. ಒಳ್ಳೆಯದೇ ಆಯಿತಲ್ಲ! ಏನೇನೋ ಯೋಚಿಸುತ್ತಾ ಗಲ್ಲದ ಕೆಳಗೆ ಕತ್ತಿನ ಹತ್ತಿರ ನಯವಾಗಿ ಹೆರೆಯಲಾರಂಭಿಸಿದೆ. ಅತ್ಯಂತ ಸೂಕ್ಷ್ಮ ಕೆಲಸ ಅದು. ಕೂದಲು ನಯವಾಗಿದ್ದರೂ ಸಹ ಗುಂಗುರಾಗಿ ಇರುವುದರಿಂದ ಹೆರೆತದ ಕತ್ತಿಯನ್ನು ಹಗುರಾಗಿ ನಯವಾಗಿ ಆಡಿಸಬೇಕು. ಇಲ್ಲದಿದ್ದರೆ ಚರ್ಮದ ಪುಟ್ಟ ರಂಧ್ರವೊಂದು ಬಾಯಿ ತೆರೆದು ಝುಲ್ಲನೆ ರಕ್ತದ ಎಳೆಯನ್ನು ಇಳಿಸೀತು. ನನ್ನಂತಹ ಕುಶಲ ಕ್ಷೌರಿಕ ಗಿರಾಕಿಯನ್ನು ಎಂದೂ ಘಾತಿಸಲಾರ. ಇವನು ನನ್ನ ಪ್ರತಿಷ್ಠಿತ ಗಿರಾಕಿ ಬೇರೆ. ಎಷ್ಟು ಜನ ನಮ್ಮವರನ್ನು ಕಂಡಲ್ಲಿ ಗುಂಡಿಡಲು ಆಜ್ಞಾಪಿಸಿದ್ದ? ಎಷ್ಟು ಜನರ ದೇಹಗಳನ್ನು ಚಿಂದಿ ಮಾಡಲು ಅಪ್ಪಣೆ ಇತ್ತಿದ್ದ? ಛೆ! ಅದರ ಯೋಚನೆ ಈಗ ಯಾಕೆ? ನಾನವನ ವೈರಿಯೆನ್ನುವುದು ಟೋರೆಗೆ ಗೊತ್ತಿರಲಿಲ್ಲ, ಅವನಿಗೇನು, ಬೇರೆಯವರಿಗೂ ಗೊತ್ತಿರಲು ಸಾಧ್ಯವಿಲ್ಲ! ಅದು ನಾವು ನಾವೇ ಮಾಡಿಕೊಂಡ ಏರ್ಪಾಡು. ಟೋರೆ ಊರಲ್ಲಿ ಏನೇನು ಮಾಡುತ್ತಿದ್ದಾನೆ, ಬಂಡುಕೋರರನ್ನು ಬಗ್ಗುಬಡಿಯಲು ಯಾವ್ಯಾವ ಹುನ್ನಾರಗಳನ್ನು ರೂಪಿಸುತ್ತಿದ್ದಾನೆ ಎನ್ನುವುದರ ಬಗ್ಗೆ ಸುದ್ದಿ ಕೊಡುವವರು ಯಾರು? ಈಗ ಅವ ನನ್ನ ಸೂರಿನಡಿಯೇ ಬಂದು ಗಡ್ಡ ಹೆರೆಸಿಕೊಂಡು ಹಾಯಾಗಿ ಜೀವಂತವಾಗಿ ಹೊರಗೆ ನಡೆದರೆ ನನ್ನ ಗತಿ?

ಗಡ್ಡ ಹೆರೆಯುವ ಕೆಲಸ ಹೆಚ್ಚು ಕಮ್ಮಿ ಪೂರ್ತಿಯಾಗಿತ್ತು, ಗಡ್ಡದ ಜೊತೆ ವರುಷಗಳೂ ಅವನ ಮುಖದಿಂದ ಹೋದಂತೆ ಚಿಕ್ಕವನಾಗಿ ಕಂಡ. ಗಿರಾಕಿಗಳಿಗೆ ಕ್ಷೌರಿಕರ ಸೇವೆ ಅದು. ನನ್ನ, ಈ ಊರಿನ ಅತ್ಯುತ್ತಮ ಕ್ಷೌರಿಕನ ಕತ್ತಿಯ ಕುಶಲತೆಗೆ ಮುಖ ಕೊಟ್ಟು ಟೋರೆ ಹೊಸ ಚೈತನ್ಯವನ್ನು ಪಡೆದುಕೊಂಡಿದ್ದ. ಓ! ಇಲ್ಲಿ ಅವನ ಗಲ್ಲದ ಕೆಳಗೆ, ಗಂಟಲ ಮಣಿಯಲ್ಲಿ ಸ್ವಲ್ಪ ನೊರೆ ಉಳಿದುಬಿಟ್ಟಿದೆಯಲ್ಲ! ಅಬ್ಬ ಈ ದರಿದ್ರ ಸೆಖೆಯೋ! ಟೋರೆ ಸಹ ಬೆವೆತಿರಬೇಕು. ಆದರೂ ಅವ ತಣ್ಣಗಿನ ಮನುಷ್ಯ, ಈ ಮಧ್ಯಾಹ್ನ ತಾನು ಮಾಡಬೇಕಾಗಿರುವ ಘನ ಕಾರ್ಯದ ಬಗ್ಗೆಯೂ ಹೆಚ್ಚು ಯೋಚಿಸದೇ ಹಾಯಾಗಿದ್ದಾನೆ ಅನ್ನಿಸುತ್ತೆ, ನನ್ನ ಗತಿ? ಹೆರೆ[...] ಕತ್ತಿಯನ್ನು ಕೈಯಲ್ಲಿ ಹಿಡಿದು ರಕ್ತ ಝುಲ್ಲೆನ್ನದ[...] ಎಚ್ಚರದಿಂದ ಅವನ ಕೆನ್ನೆ, ಗಲ್ಲ ಹೆರೆಯುತ್ತಾ ಇರುವ[...] ಸ್ಪಷ್ಟವಾಗಿ ಯೋಚಿಸಲೂ ಆಗುತ್ತಿಲ್ಲ! ಇಲ್ಲಿ ಬಂ[...] ನನ್ನನ್ನು ಈ ತಳಮಳಕ್ಕೆ ಗುರಿ ಮಾಡಿದವನಿಗೆ [...] ಧಿಕ್ಕಾರ! ಏನೇ ಆದರೂ ನಾನೊಬ್ಬ ಕ್ರಾಂತಿ[...] ಕೊಲೆಗಾರನಲ್ಲ, ಸಾಯಿಸುವುದು ಬಿಡು ಮು[...] ಅವನಂಥವನಿಗೆ ತಕ್ಕ ಶಿಕ್ಷೆ ಅದು. ಹೌದೆ? ಛೆ! ನನಗೇನಾಗಿ[...] ಕೊಲೆ ಮಾಡಿ ತ್ಯಾಗಿಗಳೆನ್ನಿಸಿಕೊಳ್ಳುವ ಅವಕಾಶ[...] ಕೊಡುವ ಯೋಗ್ಯತೆ ಯಾರಿಗೂ ಇಲ್ಲ, ಇಷ್ಟ[...] ಕೊಲ್ಲುವುದರಿಂದ ಏನು ಪ್ರಯೋಜನ? ಇವನಲ್ಲದಿ[...] ಇನ್ನೊಬ್ಬ ಬರುತ್ತಾನೆ. ಒಬ್ಬರ ನಂ[...] ಇನ್ನೊಬ್ಬರು. ಒಬ್ಬರು ಇನ್ನೊಬ್ಬ[...] ಕೊಂದು, ಇನ್ನೊಬ್ಬರು ಮತ್ತೊಬ್ಬ[...] ಕೊಂದು ರಕ್ತದ ಕೋಡಿ ಹರಿಯು[...] 'ತನಕ ಹೀಗೆ ಮುಂದುವರಿಯುತ್ತ[...] ಹೋಗುತ್ತದೆ. ಅವನ ಕತ್ತನ್ನು ಚ[...] ಕತ್ತರಿಸಬಲ್ಲೆ, ಅವನಿಗೆ ಪ್ರತಿರೋಧಿ[...] ಸಮಯವೇ ಕೊಡದಂತೆ. ಕ[...] ಮುಚ್ಚಿರುವ ಅವನಿಗೆ ನನ್ನ ಹೊಳೆಯುವ ಕತ್ತಿ ಮ[...] ನನ್ನ ಹೊಳೆಯುತ್ತಿರುವ ಕಣ್ಣುಗಳು ಕಾಣಿಸವು. ನಾನೇಕೆ ನಿಜವಾದ ಕೊಲೆಗಡುಕನಂತೆ ತತ್ತರಿಸುತ್ತಿದ್ದೇ[...] ಅವನ ಕತ್ತಿನಿಂದ ಚಿಲ್ಲನೆ ರಕ್ತ ಹಾರಿ ಬಟ್ಟೆಯ ಮೆ[...] ಸೋರಿ, ಕುರ್ಚಿಯನ್ನು ದಾಟಿ, ನೆಲದಲ್ಲಿ ಹರಿಯಬಹು[...] ಬಾಗಿಲು ಹಾಕಬಹುದು. ಆದರೂ ರಕ್ತದ ಧಾರೆ ಹಿಡಿ[...] ಸಿಗುವಂತದೆ? ಇಲ್ಲಿ ಚಿಲ್ಲುವ ಬಿಸಿ ರಕ್ತ ನೆಲದುದ್ದ[...] ಹರಿದು ರಸ್ತೆಯನ್ನು ಸೇರಿ ಕಡುಗೆಂಪಿನ ತೊರೆಯಾಗ[...] ಗಂಟಲಲ್ಲಿ ಒಂದೇ ಒಂದು ಆಳವಾದ ಇರಿತ ಸಾ[...] ಅವನಿಗೆ ಹೆಚ್ಚು ನೋವೂ ಆಗದು. ಆಮೇಲೇ[...] ಅವನ ದೇಹವನ್ನೇನು ಮಾಡಲಿ? ಎಲ್ಲಿ ಅಡಗಿಸ[...] ಇರುವುದೆಲ್ಲವ ಬಿಟ್ಟು ದೂರ ಹೋಗಿ [...] ಮರೆಸಿಕೊಳ್ಳಬೇಕು. ಹಿಡಿಯುವ ತನಕ ಹುಡು[...] ಬಿಟ್ಟಾರೆ? 'ಕ್ಯಾಪ್ಟನ್ ಟೋರೆಯನ್ನು ಕೊಂದವ! ಕ್ಷೌರಕ್ಕೆ[...] ಬಂದವನನ್ನು ಗಂಟಲು ಸೀಳಿ ಕೊಂದ ಹೇಡಿ!' ಇನ್ನೊಂ[...] ಕಡೆ 'ಮುಯ್ಯಿಗೆ ಮುಯ್ಯಿ ತೀರಿಸಿದವ! ಅವನ ಹೆಸ[...] ಸದಾ ಉಳಿಯುತ್ತದೆ. (ಇಲ್ಲಿ ನನ್ನ ಹೆಸರ[...] ಉದ್ಧರಿಸಬಹುದು!) ಈ ಊರಿನ ಕ್ಷೌರಿಕನಾಗಿದ್ದ, ನ[...] ಧ್ಯೇಯಗಳನ್ನು ಬೆಂಬಲಿಸುತ್ತಿದ್ದ ಎಂದು ಯಾರಿ[...] ಗೊತ್ತಿರಲಿಲ್ಲ.'

ಕೊನೆಗೆ ಏನು? ಕೊಲೆಗಾರನೋ ಅಥವಾ ಧೀರನೋ[...] ನನ್ನ ಭವಿಷ್ಯ ಈ ಕತ್ತಿಯ ಅಂಚಿನ ಮೇಲೆ ನಿಂ[...] ಸ್ವಲ್ಪವೇ ಕೈಯನ್ನು ತಿರುಗಿಸಿ, ಕತ್ತಿಯನ್ನು ಊರಿ ಇ[...] ಸಾಕು. ರೇಶ್ಮೆಯಂತೆ, ರಬ್ಬರಿನಂತೆ, ಚರ್ಮ ತಕ್ಷಣ[...] ಬಿರಿದೀತು. ಮನುಷ್ಯನ ಚರ್ಮಕ್ಕಿಂತ ಮೃದುವಾ[...] ಇನ್ನೊಂದಿಲ್ಲ, ಅದರ ಹಿಂದೆ ಝುಲ್ಲನೆ ಹರಿಯಲು [...] ಸದಾ ಸಿದ್ಧವಾಗೇ ಇರುತ್ತದಲ್ಲ? ಇಂಥಾ ಕತ್ತಿ ಸಮರ್ಥ[...] ಕಾರ್ಯ ನಿರ್ವಹಿಸದೇ ಇರದು. ನನ್ನ ಅತ್ಯುತ್ತ[...] ಕತ್ತಿಯಲ್ಲವೇ ಇದು?


ಆದರೆ ನಾನು ಕೊಲೆಗಾರನಾಗಲಾರೆ. ಇಲ್ಲ ಕ್ಯಾಪ್ಟ[...] ನೀನು ನನ್ನಲ್ಲಿಗೆ ಬಂದದ್ದು ಕ್ಷೌರಕ್ಕೋಸ್ಕರ. ನನ್ನ ಕೆಲಸ[...] ಘನತೆಯಿಂದ ಮಾಡಿದ್ದೇನೆ. ನನ್ನ ಕೈ ಮೇಲಿರಬೇಕಾ[...] ರಕ್ತವಲ್ಲ...ನೊರೆ ಮಾತ್ರ. ವೃತ್ತಿಯಲ್ಲಿ ನೀನು ಮರಣದಂ[...] ಕೊಡುವವನಿರಬಹುದು. ನಾನು ಒಬ್ಬ ಕ್ಷೌರಿಕ ಮ[...] ವ್ಯವಸ್ಥೆಯೆಂಬ ಹಂದರದಲ್ಲಿ ಪ್ರತಿಯೊಬ್ಬನಿಗೂ [...]ವುಂಟು. ಹೌದು. ಅವನದ್ದೇ ಆದ ವಿಶಿಷ್ಟ ಸ್ಥಾನ.

ಈಗವನ ಗಲ್ಲ ನುಣುಪಾಗಿ ನಯವಾಗಿ [...] ಎದ್ದು ಕೂತು ಕನ್ನಡಿಯಲ್ಲೊಮ್ಮೆ ಮುಖ ನೋಡಿಕೊ[...] ಹೊಸತಾದ ಮೃದುವಾದ ಚರ್ಮದ ಮೇಲೊಮ್ಮೆ [...] ಆಡಿಸಿದ.

'ಥ್ಯಾಂಕ್ಸ್'. ಎದ್ದು ತನ್ನ ಸೊಂಟದ ಪಟ್ಟಿ, ಟೋ[...] ಮತ್ತು ಪಿಸ್ತೂಲಿದ್ದ ಕಡೆ ನಡೆದ. ನನ್ನ ಮು[...] ಬಿಳಿಚಿಕೊಂಡಿದ್ದಿರಬಹುದು. ನನ್ನ ಶರ್ಟ್ ಬೆವರಿನ[...] ಒದ್ದೆಯಾಗಿತ್ತು ಅನ್ನಿಸುತ್ತೆ ಪಟ್ಟಿಯನ್ನು ಬಿಗಿದು, ಪಿಸ್ತೂ[...] ಸರಿಯಾಗಿ ಕವಚದಲ್ಲಿ ಸೇರಿಸಿ, ಯಾಂತ್ರಿಕ[...] ಕೂದಲನ್ನೊಮ್ಮೆ ನೇವರಿಸಿ ಟೋಪಿಯನ್ನು ಕೂರಿ[...] ಪ್ಯಾಂಟಿನ ಜೇಬಿನಿಂದ ಕೆಲವು ನಾಣ್ಯಗಳನ್ನು ತೆಗೆದು [...] ಕೈಯಲ್ಲಿರಿಸಿ ಬಾಗಿಲೆಡೆ ಹೆಜ್ಜೆ ಹಾಕಲಾರಂಭಿಸಿದ. ಹೊ[...] ಕಾಲಿಡುವ ಮುನ್ನ ಒಂದರೆ ಕ್ಷಣ ನಿಂತು ನನ್ನ ಕ[...] ತಿರುಗಿದ.

'ನೀನು ನನ್ನನ್ನು ಕೊಲ್ಲುತ್ತೀಯಾ ಎಂದು ಅವ[...] ಎಚ್ಚರಿಕೆ ಕೊಟ್ಟರು. ಹೌದೋ ಅಲ್ಲವೋ ಎಂ[...] ನೋಡಲು ಬಂದೆ. ಕೊಲ್ಲುವುದು ಸುಲಭವ[...] ನನ್ನಾಣೆಗೂ...'

ಬಾಗಿಲಿಂದ ಇಳಿದು ರಸ್ತೆಯ ಕಡೆ ನಡೆ[...]ಲಾರಂಭಿಸಿದ.



ಕವಿತೆಯೊಳಗೆ ಕವಿತೆ ಬೆರೆತರೆ 'ತನನಂ ತನನಂ'!

ಕೂಗಳತೆ ದೂರದಲ್ಲಿ ಕುಹೂ ಎಂದು ಕೂಗಿದವಳೆ
ನಿನ್ನ ಹೆಸರು ಕುಹೂನಾ, ಕೋಗಿಲೆನಾ?
ಕುಹೂನೂ ನಾನೇ... ಕೋಗಿಲೆಯೂ ನಾನೇ.....
ಕುಹೂ ಅನ್ನೋ ಕೋಗಿಲೆ ನಾನೇನೆ...

ಇದು 'ತನನಂ ತನನಂ' ಚಿತ್ರದ ...ಾರಿವಳು ಚೆಲುವಿ' ಎಂಬ ಡ್ಯೂಯೆಟ್‌ನ ...ೋಹಕ ಕಾವ್ಯಮಯ ಸಂವಾದ...



* * * * * * * * * *

"ಅವ್ವ ಬಂದ ದಾರಿ ಬಿಡಿ
ಇನ್ನಾವ್ನೋ ಬಂದ ಸೈಡು ಕೊಡಿ...."

ಇಂತಹ ಡಬ್ಬಾ ಹಾಡುಗಳನ್ನು ಕೇಳಿ ...ಜಾರಾದ ಕನ್ನಡ ಕಿವಿಗಳಿಗೆ ಇಂಪು ...ರಗಿಸಲು, ಮನಗಳಿಗೆ ತಂಪು ನೀಡಲು ...ನನಂ ತನನಂ' ಹಾಡುಗಳು ಸಿದ್ಧವಾಗಿವೆ.

ಕಳೆದ ವಾರ 'ತನನಂ ತನನಂ' ಹಾಡುಗಳನ್ನು ...ಸಿದ ಪತ್ರಕರ್ತರೆಲ್ಲ ಆನಂದಿತರಾಗಿದ್ದರು.

ವೀಣೆ, ಕೊಳಲು, ಮೃದಂಗ, ಹಾರ್ಮೋನಿಯಂ ...ನ್ನೆಲ್ಲ ಹದವಾಗಿ ಬೆರೆಸಿದ ಸುಶ್ರಾವ್ಯ ಸಂಗೀತ.... ...ಗಂಧದ ಜೊತೆ ಮಲ್ಲಿಗೆ, ಭೂಮಿಯ ಜೊತೆ ...ತು ಬೆರೆಯುವ ಸಮೃದ್ಧ ಸಾಹಿತ್ಯ..... ಕೆ. ಕಲ್ಯಾಣ್ ...ಡೂ ಕಡೆ ತಮ್ಮ ಛಾಪು ಮೂಡಿಸಿದ್ದಾರೆ... ಅಷ್ಟೇ ...ಲ್ಲ ಅವರ ಹಿಂದಿನ ಶಬ್ದದೊಂದಿಗಿನ ತಾಕಲಾಟದಿಂದ ...ೊರಬಂದು ಅಪ್ಪಟ ಭಾವಜೀವಿಯಂತೆ, ಯುವ ...ಮಿಯಂತೆ ಸಾಹಿತ್ಯ ರಚಿಸಿದ್ದಾರೆ.

ಎಸ್.ಪಿ. ಬಾಲಸುಬ್ರಮಣ್ಯಂ, ಚಿತ್ರಾ ಹಾಡಿರುವ 'ಕಂಡೆ ಕಂಡೆ ಗೋವಿಂದನಾ' ಆರಂಭದಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ತೇಲಿಬಂದು, ನಂತರ ಹಾಗೇ ವೇಗ ಪಡೆದುಕೊಂಡು ಖುಷಿ ನೀಡುತ್ತದೆ.

ಚಿತ್ರಾ ಧ್ವನಿಯಲ್ಲಿರುವ ಟೈಟಲ್ ಸಾಂಗ್ 'ತನನಂ ತನನಂ' ಒಂದಕ್ಕೇ ಪೈಸಾ ವಾಪಸ್ ಗ್ಯಾರಂಟಿ!

"ಪ್ರೀತಿಯೊಳಗೆ ಪ್ರೀತಿ
ಬೆರೆತರೆ ತನನಂ ತನನಂ
ಅಂತಾ ಹೆಸರು...

ಪ್ರಕೃತಿಯೊಳಗೆ ಪ್ರಕೃತಿ
ಬೆರೆತರೆ ತನನಂ ತನನಂ
ಅಂತಾ ಹೆಸರು...

ಭೂಮಿಗೆ ಋತುವಿನ
ತನನಂ...

ತುಟಿಗೆ ಮುತ್ತಿನ ತನನಂ..."

ಪ್ರೀತಿ, ಪ್ರೇಮದ ಉತ್ಕಟತೆ, ನಿಸರ್ಗದಲ್ಲಿನ ಸಹಜ ಪ್ರೇಮವೆಲ್ಲ ಮೆಲೋಡಿಯಸ್ಸಾಗಿ ಹರಿದು ಬಂದು, 'ನಿಮ್ಮ ಮನಸಿಗೆ ಕಿವಿಯ ತನನಂ ತನನಂ' ಎಂಬ ಭಾವ ಆವರಿಸುತ್ತದೆ.

'ಮರ್ಡರ್' ಚಿತ್ರದ 'ಕಭಿ ಮೇರೆ ಸಾಥ್, ಕೋಯಿ ರಾತ್ ಗುಜಾಲ್, ತುಜೆ ಸುಬಹ್ ತಕ್ ಮೈ ಕರೂ ಪ್ಯಾರ್ ವೊ.... ವೊ... ವೊ:.. ಹೆ... ಹೆ.... ಹೆ...." ಹಾಡಿನಿಂದ ಮನೆಮಾತಾದ ಕುನಲ್ ಗಾಂಜವಾಲ ಧ್ವನಿಯಲ್ಲಿನ ಎರಡು ಹಾಡುಗಳೂ ನಿಮಗೆ ಇಷ್ಟವಾಗುತ್ತವೆ. 'ಚೆಲುವಾಂತ ರಾಜಕುಮಾರಿ' ಹಾಡು ಶೃಂಗಾರರಸ ಹರಿಸಿದರೆ, 'ಕುರುಡು ಪ್ರೀತಿಯ ನಂಬಿ ಕುರುಡಾದೆ ನಾನು' ವಿಷಾದ ಭಾವದಲ್ಲಿ ತೇಲಿ ಬರುತ್ತದೆ.



ರಾಜೇಶ್, ಶುಭಾ ಮಾಲ್ಗುಡಿ ಹಾಡಿರುವ 'ಆಹಾ ಚಪ್ಪರಿಸು ಚಪ್ಪರಿಸು' ಗೀತೆಯನ್ನು ಕಾಲು ಕುಣಿಸುತ್ತ ಕೇಳಬಹುದು. ಈ ಐಟಂಸಾಂಗ್ ಅವಶ್ಯವಿತ್ತೆ ಅಂತಾ ಅನಿಸಬಹುದು. ಆದರೆ ಕವಿತಾ ಲಂಕೇಶ್‌ರ profile ಬಲ್ಲವರಿಗೆ ಅವರು ಅನಗತ್ಯವಾಗಿ ಏನನ್ನೂ ತುರುಕುವುದಿಲ್ಲ ಎಂಬ ಸಮಾಧಾನ.


"ಕಲಿತ ಹುಡುಗಿ ಕುದುರಿ ನಡಿಗಿ" ಎಂಬ ಚಿಕ್ಕ bit ಜಾನಪದದ ಟಚ್ ನೀಡುತ್ತದಾದರೂ ಈ bit ಅನ್ನು ಇನ್ನೂ ಉತ್ತಮವಾಗಿ ಮಾಡಿಸಬಹುದಿತ್ತು ಕವಿತಾರವರು.

ಪ್ರೇಮಿಗಳ ಸಂವಾದದ ಸಿಂಚನ ಗೀತೆ ಮುದ ನೀಡುತ್ತದೆ. "ಕೂಗಳತೆಯ ದೂರದಲ್ಲಿ" ವಿಭಿನ್ನವಾಗಿ ಮೂಡಿ ಬಂದು ಪ್ರೇಮಕಾವ್ಯದಂತಿದೆ.

ಕಲ್ಯಾಣ್ ಶ್ರಮ ಸಾರ್ಥಕವಾಗಿದೆ. ಪ್ರತಿ ಹಾಡಲ್ಲೂ ಕವಿತಾರ ಟಚ್ ಎದ್ದು ಕಾಣುತ್ತದೆ. 'ಹೊಡಿ ಮಗಾ....' ಹಾಡುಗಳಿಂದ ಸಾಕಾಗಿ ಹೋಗಿರುವವರಿಗೆ 'ತನನಂ ತನನಂ' ಹಾಡುಗಳು ರಿಫ್ರೆಶ್ ಮಾಡಲಿವೆ.

-ಮಲ್ಲಿ

ಬಿಟ್ bit ಹಿಡಿ!



ಮಿಲನ... ಮಿಲನ.... ಜೀವನದ ಹೊಸ ಗಾನ....

ನೈಸ್ ಕಂಪನಿಯ ಮಾಲೀಕ ಅಶೋಕ್ ...ಣಿ ಮೊದಲ ಹಂತದ ರಸ್ತೆ ಉದ್ಘಾಟಿಸಿಯೇ ಬಿಟ್ಟಿದ್ದಾನೆ.

* ಅಂದು ಖೇಣಿಗೆ ಸಪೋರ್ಟ್ ಮಾಡಲು ಬಂದಿದ್ದು ಮೋಹನ್ ...ಸ್ ಪೈ. ಈತ ಇನ್ಫೋಸಿಸ್‌ನ ಚೀಫ್ ಫೈನಾನ್ಶಿಯಲ್ ಆಫೀಸರ್ (...FO)!

* ಖೇಣಿ ಪರವಾಗಿ ವಿಜಯ ಮಲ್ಯ ಹೇಳಿಕೆ ಕೊಡುತ್ತಾನೆ!

* ಹಿಂದಿನ ದಿನವೇ ಈ ಮಲ್ಯನ ಜೊತೆ ಪೇಪರ್‌ಗಳಲ್ಲಿ ಮಿಂಚಿದ್ದು ಕ್ರಿಸ್ ...ೋಪಾಲಕೃಷ್ಣನ್. ಈತ ಇನ್ಫೋಸಿಸ್‌ನ ಸಂಸ್ಥಾಪಕ ಸದಸ್ಯ ಸದ್ಯ ಇನ್ಫಿಯ ಟಾಪ್ ...ರ್ಮ್‌ನಲ್ಲಿರುವಾತ!

* ದೇವೇಗೌಡರಿಂದ ಇನ್ಫೋಸಿಸ್ ವಿರುದ್ಧ ಬಹಿರಂಗ ದಾಳಿ ಆಗಿದ್ದು ನೆನಪುಂಟಲ್ಲ? ಅವರ ಪುತ್ರ ಸಿ.ಎಂ. ಕುಮಾರಸ್ವಾಮಿ ಮೊನ್ನೆ ಮೊನ್ನೆ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ...ಡ್ರಿ enjoy (encash?) ಮಾಡಿಬಂದಾಯ್ತು!

* ಬಿಪಿಎಲ್‌ನ ರಾಜೀವ್ ಚಂದ್ರಶೇಖರ್ ಸಲೀಸಾಗಿ ರಾಜ್ಯಸಭೆ ಹೊಕ್ಕಿದ್ದೂ ನೀವು ...ರೆತಿರಲಾರಿರಿ. ಅದಕ್ಕೂ ಮೊದಲು ಬ್ಯುಸಿನೆಸ್‌ಮನ್‌ಗಳ ಡಾರ್ಲಿಂಗ್ ಜೈರಾಮ್ ...ೇಶ್ ಸದ್ದಿಲ್ಲದೇ ವಾಣಿಜ್ಯ ಮಂತ್ರಿಯಾಗಿ ತನ್ನ ಮಿತ್ರರಿಗೆ ಸಹಾಯ ಮಾಡುತ್ತಲೇ ...ದ್ದಾನೆ. ಈತ ಕನ್ನಡಿಗ! ಜೊತೆಗೆ ಇನ್ನೊಬ್ಬ ಕನ್ನಡಿಗ ಎಂಪಿ ಮಲ್ಯ ಎಂಬ ಕುದುರೆ ...ವಾರಿಯೂ ಇದೆ!!

* ಮತ್ತೆ ಖೇಣಿಗೆ ಬರೋಣ. ಖೇಣಿಯ ರಸ್ತೆ ಉದ್ಘಾಟನೆಗೆ ಡಿ.ಕೆ. ಶಿವಕುಮಾರ್ ...ಜರಾಗುತ್ತಾನೆ. ಅಂದರೆ ಎಸ್.ಎಂ. ಕೃಷ್ಣ ಹಾಜರಾದಂತೆ! ಎಸ್.ಎಂ. ಕೃಷ್ಣರ ಬಳಿ ...ಗಳ ಇನ್ಫೋಸಿಸ್ ಷೇರ್‌ಗಳುಂಟು!!

* ಬಜಾಜ್ ಮಾಲೀಕ ರಾಹುಲ್ ಬಜಾಜ್‌ನನ್ನು ಎಂ.ಪಿ. ಮಾಡಲು ಎಲ್ಲ ಪಕ್ಷಗಳ ...ಾರ!


* * * * * *

...ಬಿರಿಯುತ್ತ ಹೋದರೆ ತಲೆಬಿಟ್ಟು ಓಡಿಯುತ್ತ ಓಡುವ ನಿಮಗೆ!!
...ಎಂತಹ ಮಿಲನ!
...ಸ್ಥಾಪುದ ರಾಜ್ಯಗಳ ಡಾಲರ್ ಭಕ್ತರ 'ಅಪೂರ್ವ' ಮಿಲನ!
Sorry, ಇದು ಜಾಗತೀಕರಣ!!

ಬುದ್ಧ: ಯಹಿ ಹೈ 'ರೈಟ್' ಚಾಯ್ಸ್!

ಕಳೆದ ತಿಂಗಳು ಕೈಗಾರಿಕೋದ್ಯಮಿಗಳನ್ನು ಓಲೈಸುವುದರಲ್ಲಿ ಫುಲ್ ಬ್ಯೂಸಿ ಆಗಿದ್ದರು ಪಶ್ಚಿಮ ಬಂಗಾಳದ ಸಿ.ಎಂ. ಬುದ್ಧದೇವ ಭಟ್ಟಾಚಾರ್ಯರು!


ಮೇ ಅಂತ್ಯದಲ್ಲಿ ನಡೆದ ಸಿಪಿಎಂ ಪಾಲಿಟ್‌ಬ್ಯುರೊ ಮೀಟಿಂಗ್‌ನಲ್ಲಿ ವಿಮಾನ ನಿಲ್ದಾಣಗಳ ಆಧುನಿಕರಣದ ವಿಷಯ ಪ್ರಸ್ತಾಪವಾಗಿತ್ತು. ಪಾಲಿಟ್‌ಬ್ಯುರೊ ಸದಸ್ಯರೆಲ್ಲ ಆಧುನಿಕರಣದ ಕಂಟ್ರಾಕ್ಟ್‌ನ್ನು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ (AAI)ನಂತಹ ಸಾರ್ವಜನಿಕ ಉದ್ಯಮಗಳಿಗೆ ನೀಡಬೇಕೆಂದು ಹೇಳುತ್ತಿದ್ದರೆ, ಬುದ್ಧದೇವರು ಮಾತ್ರ ಖಾಸಗಿ ಕಂಪನಿಗಳಿಗೇ ಕೊಡೋಣ ಎಂದು ವಾದಿಸಿದ್ದಾರೆ. ಇದಕ್ಕೆ ಲೆಫ್ಟಿಸ್ಟ್ ಬುದ್ಧದೇವರ 'ರೈಟ್' ಸಮರ್ಥನೆ ಹೀಗಿದೆ: "ಡೆಂಗ್ ಜಿಯಾಪಿಂಗ್ ಹೇಳಿದಂತೆ ಬೆಕ್ಕಿನ ಬಣ್ಣ ಮುಖ್ಯವಲ್ಲ; ಅದು ಇಲಿ ಹಿಡಿಯುತ್ತದೆ ಎಂಬುದಷ್ಟೇ ಮುಖ್ಯ. ಹಾಗೆಯೇ ಮೂಲಭೂತ ಸೌಕರ್ಯ ಯಾರು ನಿರ್ಮಿಸಿದರು ಎಂಬುದು ಮುಖ್ಯವಲ್ಲ; ಮೂಲಭೂತ ಸೌಕರ್ಯ ಅಭಿವೃದ್ಧಿ ಆಗುವುದಷ್ಟೇ ಮುಖ್ಯ...."



ಏನನ್ನೋಣ? ಯಹಿ ಹೈ 'ರೈಟ್' ಚಾಯ್ಸ್? Leftist Buddha had LEFT the home at 'RIGHT' time!


Sorry, ಇದು globalisation!

ಜಾಗತೀಕರಣ



ಇಲ್ಲೆಲ್ಲಾ ಯುವಕರು Windows ತೆರೆಯುತಿರೆ
ಅಲ್ಲೆಲ್ಲೋ ಭಾಗ್ಯದ 'Gates' ತೆರೆಯುವುದು.....
ಅಲ್ಲೆಲ್ಲೋ ಈರುಳ್ಳಿ 'ಹೆಚ್ಚು'ತಿರೆ
ಇಲ್ಲಿ ನಮ್ ರೈತರ ಕಣ್ಣೀರ್
ಹರಿಯುವುದು....
Sorry, ಇದು ಜಾಗತೀಕರಣ!

-ಪಿ.ಕೆ. ಮಲ್ಲನಗೌಡರ್



ಬಹಿಷ್ಕಾರ

ನಮ್ಮೂರಿನ ಹುಡುಗಿ
ಪಕ್ಕದೂರಿನ ಹುಡುಗನೊಂದಿಗೆ
ಓಡಿ ಹೋದಳು!
ಹುಡುಗನದು ಅನ್ಯಧರ್ಮ
ಹಿರಿಯರದು ಧರ್ಮಸಂಕಟ

ಊರಿಡೀ ಕೋಲಾಹಲ
ಪ್ರಾರ್ಥನಾ ಮಂದಿರಗಳ ನೆಲಸಮ
ಒಂದೆರಡು ಶವ, ಹಲವರಿಗೆ ಗಾಯ
ಪ್ರಕ್ಷುಬ್ಧ ವಾತಾವರಣ, ಹಿರಿಯರದು
ಊರಿಡೀ ಸಂಕ್ರಮಣ
ಕೊನೆಗೆ ಪಾಸಾಯಿತು ಹುಡುಗಿಯ
ಮನೆಗೆ ಬಹಿಷ್ಕಾರ

ಮನೆ ಹುಡುಕಿ ತಲುಪಿದರು
ಮುಖಂಡರು
ಓದಲು ಪ್ರಾರಂಭಿಸಿದರು
ಬಹಿಷ್ಕಾರ ಪತ್ರ
ಸೋಗೆ ಮನೆಯ ಹೊರಗೆ ನಿಂತು
ಮನೆಗೆ ಬಂದಿದ್ದ ಮದುಮಗಳು
ಹೇಳುತಿದ್ದಳು
ನನ್ನ ವಯಸ್ಸು ಇಪ್ಪತ್ತೆಂಟು
ತಂಗಿಯದು ಇಪ್ಪತ್ತಾರು
ಮತ್ತೊಬ್ಬಳದು....
....
ತಂದೆಯಿಲ್ಲ ತಾಯಿಯೇ ಎಲ್ಲ
ಒಲೆಯಲ್ಲಿ ಇಲ್ಲದ ಬೆಂಕಿ ಹೊಟ್ಟೆಯಲ್ಲಿ
....
....
ಅವಳು ಹೇಳುತಿದ್ದಳು
ಅವನು ಓದುತ್ತಲೇ ಇದ್ದ.

-ಆಸಿಫ್ ಹೆಜ್ಮಾಡಿ

ಪ್ರಾಂಶುಪಾಲರು ಧುಮುಗುಡುತ್ತಿದ್ದರು.

ಏನೋ ಆಗಬಾರದ್ದು ಆಗಿರಬೇಕು. ಓಲೈಸುವವರ ಮೇಲೇ ಎಗರಿ ಎಗರಿ ಬೀಳುತ್ತಿದ್ದರು.

ಗುಲಾಮೀತನವನ್ನೆ ಹೊತ್ತಂತೆ ಮುಖ ಮಾಡಿ, ಕೈ ಹೊಸಕುತ್ತಾ 'ಏನಾಯ್ತು ಸಾರ್' ಅಂತ ಹಲ್ಲುಗಿಂಜಿದೆ. 'ಹಲ್ಕಾ ಜನಾರೀ' ಅಂದರು. 'ನಾನೂ ಒಂದೆ ಅವನೂ ಒಂದೇನೇನ್ರಿ' ಅಂತ ಕನಲಿದರು.

ವಿಷಯ ಇಷ್ಟೆ. ಶಿಕ್ಷಕರ ಕ್ಷೇತ್ರದ ಮತದಾನ ಸಮೀಪಿಸಿತ್ತು.

ಚುನಾವಣೆಯಲ್ಲಿ ಜಯಭೇರಿ ಬಾರಿಸಬೇಕು. ಇದು ಎಲ್ಲ ಅಭ್ಯರ್ಥಿಗಳ ಆಸೆ.

ಮತದಾರ ಮಹಾ ಪ್ರಭುವಿನ ಓಲೈಸುವಿಕೆ ಹೇಗೆ?

ಜಾತಿಯ ಹೆಸರಿನಲ್ಲಿ ಕೌಟಾಕುವುದು. ಅಮಾಲು ದುಮಾಲು ಮಾಡಿಸಿ ಬಲೆಗೆ ಬೀಳಿಸುವುದು. ಮತದಾರ ಪ್ರಭುವಿನ ಕೈಗೆ ಹಣ ತುರುಕುವುದು.

ಇದು ಮಹಾ ಚುನಾವಣೆಯ ತಂತ್ರ. ವಿದ್ಯಾವಂತ ಶಿಕ್ಷಕರಲ್ಲಿ ನಡೆಯುವುದೇ ಈ ತಂತ್ರ?

ವಿದ್ಯಾವಂತರಾದರೇನು? ಅವರೂ ಮನುಷ್ಯರೇ ತಾನೆ?

ಮಹಾ ಚುನಾವಣೆಯ ಎಲ್ಲ ತಂತ್ರಗಾರಿಕೆಗಳೂ ಇಲ್ಲಿ ಪ್ರತ್ಯಕ್ಷ.

ಅಮಾಲು ದುಮಾಲು ಪಾರ್ಟಿಯಲ್ಲಿ ನಡೆದಿತ್ತು ಯಡವಟ್ಟು.

ಮಹಾ ಚುನಾವಣೆಯಲ್ಲಾದರೆ ಹಾಡುಹಗಲೇ ಸಾರಾಯಿ ಕುಡಿಸಿ ಬಾಡೂಟ ಹಾಕಬಹುದು. ಇಂತ ಹದ್ದೇ ಸ್ಥಳ ಅಂತ ಏನೂ ಇಲ್ಲ, ಬೀದೀಲಿ ಹಾಕಿದರೂ ನಡೆಯುತ್ತೆ.

ಆದರೆ ಇದು ಶಿಕ್ಷಕರ ಕ್ಷೇತ್ರ. ಸೂರ್ಯ ಇರುವಾಗ ಇಂತಹವನ್ನು ಮಾಡುವ ಹಾಗಿಲ್ಲ, ಹಾದಿ ಬೀದಿಯಲ್ಲಿ ಮದ್ಯ ನೀಡಿ ಬಾಡೂಟ ಹಾಕುವಂತಿಲ್ಲ, ಅವೆಲ್ಲ ನಡೆಯಬೇಕಾದ್ದು ಸಮುದಾಯ ಭವನಗಳಲ್ಲಿ.

ಇದು ಶಿಕ್ಷಕರ ಘನತೆಯ ಪ್ರಶ್ನೆ!

ಮದುವೆಯ ಕಾಲ. ಸಮುದಾಯ ಭವನ ಸಿಗಬೇಕಲ್ಲ?

ಚುನಾವಣಾ ಆಯೋಗ ಈ ಕುರಿತು ಚಿಂತಿಸಬೇಕಿತ್ತು. ಚುನಾವಣೆಯನ್ನು ಲಗ್ನವಿಲ್ಲದ ಕಾಲದಲ್ಲಿ ಇಡಬೇಕಿತ್ತು! ಆಷಾಢ ಮಾಸ ಇದಕ್ಕೆ ಸೂಕ್ತ ಆಗಿತ್ತು!

ಆದರೆ ಈಗ ಆಗಲ್ಲ, ಪರದಾಡಿ ಸಮುದಾಯ ಭವನ ಹಿಡಿದರು. ಎಲ್ಲ ಏರ್ಪಾಡುಗಳೂ ಆಗಿದ್ದವು.

ನಮ್ಮ ಪ್ರಾಂಶುಪಾಲ ಮಹಾಶಯರು ತಮ್ಮ ಗೆಳೆಯರ ಹಿಂದಿನ ಸಂಗಡ ಕತ್ತಲಾದ ನಂತರ ನಿಗದಿತ ಸ್ಥಳಕ್ಕೆ ಬಂದರು. ಮತದಾರ ಶಿಕ್ಷಕ ಬಾಂಧವರು ಅಲ್ಲಾಗಲೇ ನೂರಾರು ಸಂಖ್ಯೆಯಲ್ಲಿ ನೆರೆದಿದ್ದರು. ರಾಜಕಾರಣಿಗಳ ಬಿತ್ತಣಕೂಟ. ಯಾರಿಗೆ ಏನು ಸಿಗುತ್ತೋ ಏನು ಸಿಗುವುದಿಲ್ಲವೋ ಎಂದೋ ಏನೋ ಸೂರ್ಯಾಸ್ತಮ ಆಗುತ್ತಿದ್ದಂತೆಯೇ ಬಂದು ಸೇರಿದ್ದರು. ಅತಿಥಿ ಸತ್ಕಾರಕ್ಕಾಗಿಯೇ ನಿಂತವರಿಂದ ಇವರಿಗೆ ರಾಜ ಮರ್ಯಾದೆ. ಟೇಬಲ್ಲಿನಲ್ಲಿ ಕುಳಿತ ನಂತರ ಪ್ರಾಂಶುಪಾಲರು ಒಮ್ಮೆ ಎಲ್ಲ ಟೇಬಲ್ಲುಗಳ ಕಡೆಗೂ ದೃಷ್ಟಿ ಬೀರಿದರು. ಹೈಸ್ಕೂಲ್ ಅಧ್ಯಾಪಕರು, ಮುಖ್ಯೋಪಾಧ್ಯಾಯರು, ಕಾಲೇಜು ಅಧ್ಯಾಪಕರು, ಉಪಪ್ರಾಧ್ಯಾಪಕರು, ಪ್ರಾಧ್ಯಾಪಕರು ಎಲ್ಲರೂ ಇದ್ದಾರೆ ಅಲ್ಲಿ.

ಅಂತಸ್ತಿಗೆ ತಕ್ಕ ಬ್ರಾಂಡ್ ಬೇಡವೆ?

ಅಣಕ

ಕನಲಿ ಕೆಂಡ ಆದರು ಪ್ರಾಂಶುಪಾಲರು.

ಸಾಮೂಹಿಕ ಪಾನಗೋಷ್ಠಿ ತರಿಸಿತ್ತೆ ಈ ಕೆಂಡದಂತಹ ಕೋಪವ?

ಅಲ್ಲ, ಅದು ಅವರಿಗೆ ಹೊಸದೇನೂ ಅಲ್ಲ.

ಮತ್ತೇನು ಅವರ ಸಿಟ್ಟಿಗೆ ಕಾರಣ?

ಮದ್ಯದ ಬ್ರಾಂಡು!

ಕಳಪೆಮಾಲು ಬಂದಿತ್ತೆ ಅಲ್ಲಿ?

ಇಲ್ಲ, ಇಲ್ಲ. ಸೊಸಗಾದ ಬ್ರಾಂಡಿನ ಮದ್ಯವೇ ಸರಬರಾಜಾಗುತ್ತಿತ್ತು.

ಮತ್ತೇನು ಧಾಡಿ ಪ್ರಾಂಶುಪಾಲರಿಗೆ?

ಅಂತಸ್ತು ಅಂತಸ್ತು! ಅದರ ಪರಿಗಣನೆಯೇ ಇಲ್ಲ! ಎಲ್ಲರಿಗೂ ಒಂದೇ ಬ್ರಾಂಡಿನ ಮದ್ಯ ಸರಬರಾಜಾಗುತ್ತಿದೆ!

ಏನು ಮಾಡಬೇಕಾಗಿತ್ತು ಅಭ್ಯರ್ಥಿ?

ಮತದಾರನ ಅಂತಸ್ತಿನ ಮೇಲೆ ಬ್ರಾಂಡ್ ನಿರ್ಧರಿಸಬೇಕಾಗಿತ್ತು!


ಅನಿಷ್ಟಕ್ಕೆಲ್ಲ ಕಂಪ್ಯೂಟರ್ ಹೊಣೆ!

ನೈಸ್ ಸಂಸ್ಥೆಗೆ ರಾಜ್ಯ ಸರ್ಕಾರ 5 ಲಕ್ಷ ರೂಪಾಯಿ ಪರಿಹಾರ ನೀಡಬೇಕು.

ಇದು ಸುಪ್ರೀಂಕೋರ್ಟ್ ಆಜ್ಞೆ.

ಕೋರ್ಟನ್ನು ಕಂಡರೆ ರಾಜ್ಯದ ಆಡಳಿತಗಾರರಿಗೆ ಅತ್ಯಂತ ಗೌರವ.

ಪರಿಹಾರದ ಚೆಕ್ ನೀಡಿದರು.



ಚೆಕ್ ತಿರಸ್ಕೃತಗೊಂಡಿತು!

ಯಾಕೆ ಹಿಂತಿರುಗಿತು ಆ ಚೆಕ್ಕು?

ಸರ್ಕಾರದ ಬಳಿ ಅಷ್ಟೊಂದು ಹಣ ಇಲ್ಲ!

ಏನು ಮಾಡಬೇಕು ಸರ್ಕಾರ?

ರಾಜೀನಾಮೆ ನೀಡಲಿ-ಕಾಂಗ್ರೆಸ್ ವರಾತ.

ಕೋರ್ಟಿಗೆ ಹೋಗುತ್ತೇನೆ-ನೈಸ್ ಕಂಪನಿ.

ಸರ್ಕಾರದ ಉತ್ತರ: ರಾಜೀನಾಮೆ ನೀಡಬೇಕಿಲ್ಲ, ಹಣ ಇದೆ.

ಹಾಗಾದರೆ ಯಾಕೆ ತಿರಸ್ಕೃತ ಆಯಿತು?

ಕಂಪ್ಯೂಟರ್ ಮಿಸ್ಟೇಕ್‌ನಿಂದ!

ರಾಜ್ಯ ಸರ್ಕಾರದ ವಿರುದ್ಧ ಬಾಣ ಹೂಡಲು ಯಾವುದಾದರೂ ಕಾಣದ ಕೈ ಕಂಪ್ಯೂಟರ್ ಮಿಸ್ಟೇಕ್ ಮಾಡಿಸಿತೆ?

ಯಾವುದು ಜಾತ್ಯತೀತ?

ಜಾತ್ಯತೀತತೆ ಎಂದರೇನು?

'ಅದು ನನಗೆ ತಿಳಿದಿಲ್ಲ' ಎಂಬುದು ಮುಖ್ಯಮಂತ್ರಿಯವರ ಹಳಸಲು ಮಾತು. ಈಗ ಈ ಪ್ರಶ್ನೆ ಬರಲು ಕಾರಣ ಇದೆ.

'ಇನ್‌ಗಾಡ್ ವಿ ಟ್ರಸ್ಟ್' ವಾಕ್ಯ ಅಮೆರಿಕದ ನೋಟು ಮತ್ತು ನಾಣ್ಯಗಳ ಮೇಲೆ ಇದೆ.

ಇಂತಹ ಪದ ಪುಂಜ ಮತೀಯ ಸಿದ್ಧಾಂತಕ್ಕೆ ಪ್ರಚೋದನೆ ನೀಡಲಾಗುತ್ತದೆಯೇ?

ಹೌದು ಎಂಬುದು ಕ್ಯಾಲಿಫೋರ್ನಿಯಾದ ನಾಸ್ತಿಕ ಸಂಘಟನೆ ವಾದ.

ಹಾಗಾದರೇನು ಮಾಡಬೇಕು?

ಈ ವಾಕ್ಯವನ್ನು ಕೈಬಿಡಿ.

ಕೋರ್ಟಿನ ಮೆಟ್ಟಿಲು ಹತ್ತಿತು ಸಂಘಟನೆ.

ನ್ಯಾಯ ದೊರಕಿತೆ ಅಲ್ಲಿ?

ನ್ಯಾಯಾಧೀಶ 'ಮೈಕೆಲ್ ನ್ಯೂವುಡ್' ತೀರ್ಪು ನೀಡಿದರು. 'ಈ ವಾಕ್ಯ ಜಾತ್ಯತೀತ.'

ಹಾಗಾದರೆ ಯಾವುದು ಜಾತ್ಯತೀತ ಅಲ್ಲ?

ಬಹುಮತಕ್ಕೆ ಜೈ

ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೆ ಆದ್ಯತೆ.

ಬಹುಜನ ಅಭಿಪ್ರಾಯ ಸರಿಯಾದುದೆ?

ಖಾತರಿ ಇಲ್ಲ.

ಒಂದು ಕಾನೂನು. ಶೇಕಡ 90 ಭಾಗ ಜನ ಅದನ್ನು ಉಲ್ಲಂಘಿಸುತ್ತಾರೆ.

ಇದರ ಅರ್ಥ ಏನು?

ಜನರು ತಪ್ಪೆಸಗುತ್ತಿದ್ದಾರೆಂದೆ? ಕಾನೂನಿನಲ್ಲಿ ನ್ಯೂನತೆ ಇದೆ ಎಂದೆ?

ಸತ್ಯ ಎಲ್ಲಿಯೋ ಅಡಗಿರಬಹುದು.

ಕೇಂದ್ರ ಸಚಿವ ಜಯಪಾಲರೆಡ್ಡಿ ಹೇಳುತ್ತಾರೆ. ಇದರ ಅರ್ಥ 'ನ್ಯೂನತೆ ಇದೆ ಎಂದು!'


ಗೆಲಿಲಿಯೋ ಭೂಮಿ ಸೂರ್ಯನ ಸುತ್ತ ಸುತ್ತುತ್ತದೆ ಎಂದ. ಅಂದಿನ ಜನ ಅದನ್ನು ನಂಬಲಿಲ್ಲ, ಸೂರ್ಯನೇ ಸುತ್ತುತ್ತಾನೆ ಅಂದರು.

ಇದು ಸತ್ಯವೆ ರೆಡ್ಡಿಯವರೆ?

-ಎಚ್.ಎಲ್. ಕೇಶವಮೂರ್ತಿ

ಪುಟ ಪುಟದಲ್ಲೂ ಆತ್ಮೀಯತೆ!

'ಲಂಕೇಶ್'ನಲ್ಲಿ ಮೂಡಿಬಂದ ರಾಷ್ಟ್ರಪತಿ, ಉಪರಾಷ್ಟ್ರಪತಿಗಳ ಜನಕ ದಾವಣಗೆರೆಯ ಸುಮ್ಮನೆ ಸಿದ್ಧನ ಕಥೆ ಚೆನ್ನಾಗಿದೆ. ಪಾಪಿ ಎಲ್ಲಿ ಕಾಲಿಟ್ಟರೂ ಮೊಣಕಾಲುವರೆಗೂ ನೀರು ಎಂಬ ಗಾದೆ ಇದೆ. ಹಾಗೆಯೇ ಸಿದ್ಧ ಎಲ್ಲಿ ಕಾಲಿಟ್ಟರೂ ಮುಳುಗೊ ವರೆಗೂ ನೀರು ಅಲ್ವ. ಅಲ್ಲ ನಮ್ಮ ದೇಶದಲ್ಲಿ ಕಾನೂನು ಅನ್ನೋದು ಇದೆಯಾ? ಅಥವಾ ರೊಕ್ಕಕ್ಕೆ ಬಕರಿ ಆಗಿ ಹೋಗಿದೆಯಾ?




-ಮುತ್ತಣ್ಣ ಪೂಜಾರ್,
ಕದಲಬಾಳು

ಪತ್ರಿಕೆ ಕಚೇರಿಗೆ ಭೇಟಿ ನೀಡಬೇಕೆಂಬ ನನ್ನ ಬಹಳ ವರ್ಷಗಳ ಆಸೆ 10.6.06 ರಂದು ಈಡೇರಿತು. ಅಂದು ನಾನು ನಿಮ್ಮ ಕಚೇರಿಗೆ ಬಂದದ್ದು ನನಗಂತೂ ತುಂಬಾ ಖುಷಿ ಕೊಟ್ಟಿತು. ಅಲ್ಲಿರುವ ಯಾವೊಬ್ಬ ವರದಿಗಾರರಲ್ಲೂ ತಾವು ರಾಜ್ಯ ...ಟ್ಟದ ಯಶಸ್ವಿ ಪತ್ರಿಕೆಯವರೆಂಬ ...ಮಾಕು ಅವರ ನಡೆ-ನುಡಿಯಲ್ಲಿ ...ಣಿಸಲಿಲ್ಲ, ಹುಲಿಕುಂಟೆ ಮೂರ್ತಿ, ...ಲ್ಲಿನ ಗೌಡರ್, ಸತೀಶ್‌ರ ಸರಳತೆ ...ನ್ನು ನೋಡಿ ಪತ್ರಿಕೆಯಲ್ಲಿ ಬರೆಯುವವರು ...ವರೇನಾ ಎಂದು ಅನಿಸಿತು. ನೆಟ್ಟಗೆ ಸರಿಯಾಗಿ ...ಲು, ಸಾಲುಗಳನ್ನು ಬರೆಯಲು ಬಾರದವರು ...ತ್ರಕರ್ತರೆಂಬ ಧಿಮಾಕಿನ ಪೋಜು ಕೊಡುವುದನ್ನು ನೋಡಿದ್ದೇನೆ. ಆದರೆ ಅಂದು ಸದಾಶಿವ ಶೆಣೈ ಮತ್ತು ಚಂದ್ರೇಗೌಡರನ್ನು ನೋಡಿ ಸಂತೋಷ ಮತ್ತು ಆಶ್ಚರ್ಯವಾಯಿತು. ಬಹುಶಃ ಅವರ ಸರಳತೆ, ನಡೆ-ನುಡಿಯೇ ಅವರ ವೈಯಕ್ತಿಕ ಮತ್ತು ಪತ್ರಿಕೆಯ ಯಶಸ್ಸಿನ ಗುಟ್ಟಿರಬಹುದೆನಿಸಿತು.

ಪತ್ರಿಕೆ ಸಂಪಾದಕಿಯವರಾದ ನೀವು ಒಬ್ಬ ಸಾಮಾನ್ಯ ಓದುಗನ ಜೊತೆ ಆತ್ಮೀಯವಾಗಿ ಮಾತನಾಡಿದ್ದನ್ನು ಮೆಚ್ಚಲೇಬೇಕು. ಈ ಆತ್ಮೀಯತೆ ಪತ್ರಿಕೆಯ ಪ್ರತಿ ಪುಟದಲ್ಲೂ ಇದ್ದು, ಆ ಕಾರಣಕ್ಕೆ 'ಲಂಕೇಶ್' 'ನಮ್ಮ' ಪತ್ರಿಕೆ ಆಗಿದೆ ಎಂದರೆ ಅತಿಶಯೋಕ್ತಿ ಆಗಲಾರದು.


-ಬಸವರಾಜ್ ಬೆಸ್ತರ್,
ಹರಪನಹಳ್ಳಿ



ಈ ವಾರದ ಸಂಚಿಕೆಯಲ್ಲಿ ಆರೋಗ್ಯ ಮಂತ್ರಿ ಭೂರೋಗ! ಎಂಬ ವರದಿ ಓದಿದೆ. ಆರೋಗ್ಯ ಮಂತ್ರಿ ಆರ್. ಅಶೋಕ್ ಎಂಬ ಅಡ್ನಾಡಿಯ ಮುಖಕ್ಕೆ ಹಿಡಿದ ಕೈಗನ್ನಡಿಯಾಗಿದೆ ಪತ್ರಿಕೆ ವರದಿ. ಬಡವರ ಭೂಮಿಗೆ ಕಣ್ಣು ಹಾಕಿರುವ ಬಿಜೆಪಿಯ ಭಕಾಸುರ ಅಶೋಕ ಆರೋಗ್ಯ ಖಾತೆಗೆ ಅನಿಷ್ಟ ಪೀಡೆ ಎಂಬಂತಿದ್ದಾನೆ. ಇಡೀ ಬೆಂಗಳೂರಿನ ನೆಲಗಳ್ಳನಾಗಿ ಮೆರೆಯುತ್ತಿರುವ ಅಶೋಕನ ದಗಲ್ಬಾಜಿತನಗಳನ್ನು ಬಯಲಿಗೆಳೆದಿದ್ದಕ್ಕೆ ನನ್ನ ವಂದನೆಗಳು.

-ರಮಜಾನ ಕೆ. ಕೊರ್ತಿ, ಬಾದಾಮಿ

ಹಿಂದೂ ಧರ್ಮ ಮತ್ತು ಕಂಚಿ ಸ್ವಾಮೀಜಿ



ಗೌರಿ ಲಂಕೇಶ್ ಜೂನ್ 14 ಸಂಚಿಕೆಯಲ್ಲಿ No comments ಕಾಲಂನಲ್ಲಿ ಪ್ರಕಟಿತ ವಿಷಯ.

'ಹಿಂದೂ ಧರ್ಮಕ್ಕೆ ಹುಟ್ಟು ಇಲ್ಲ, ಆದ್ದರಿಂದ ಅದಕ್ಕೆ ಸಾವೇ ಇಲ್ಲ' ಇದು ಕಂಚಿ ಸ್ವಾಮೀಜಿ ಹೇಳಿದ್ದು.

ಇದು ಅರ್ಥವಿಲ್ಲದ ಮಾತು. ಹುಟ್ಟು ಇಲ್ಲ ಸಾವೂ ಇಲ್ಲ ಎಂದರೆ ಆ ವಸ್ತುವೇ ಇಲ್ಲ ಎಂದರ್ಥವಾಗುತ್ತದೆ. ಹುಟ್ಟು ಇಲ್ಲದಿದ್ದರೆ ಅದಕ್ಕೆ ಸಾವು ಖಂಡಿತ ಇಲ್ಲ. ಹಿಂದೂ ಧರ್ಮಕ್ಕೆ ಹುಟ್ಟೇ ಇಲ್ಲ ಎಂದ ಮೇಲೆ ಆ ಧರ್ಮದ ಬಗ್ಗೆ ವಾದಿಸುವ-ಸಮರ್ಥಿಸುವ, ಆ ಧರ್ಮವನ್ನು ಸಮರ್ಥಿಸಿಕೊಳ್ಳುವವರಿಗೆ ತಲೆ ಕೂಡಾ ಇಲ್ಲ, ತಲೆ ಇಲ್ಲದ ಮೇಲೆ ಬುದ್ಧಿ ಕೂಡಾ ಸೊನ್ನೆ ಎಂದೇ ಅರ್ಥವಾಗುವುದಲ್ಲವೇ?

ಹಿಂದೂ ಧರ್ಮಕ್ಕೆ ಹುಟ್ಟೇ ಇಲ್ಲ ಎನ್ನುವವರು ಅದನ್ನು ಇಲ್ಲಿ ಕೃತಕವಾಗಿ ಸೃಷ್ಟಿಸುತ್ತಾರೆ. ತಾವೇ ಸೃಷ್ಟಿಸಿದ- ಅಂದರೆ ಜನ್ಮ ಕೊಟ್ಟ- ಹಿಂದೂ ಧರ್ಮಕ್ಕೆ ಸಾವನ್ನು ಇವರೇ ತಂದೊಪ್ಪಿಸುತ್ತಾರೆ.

ಒಂದು ಪತ್ರ

ಹಿಂದೂ ಧರ್ಮವೆಂಬುದು ಕೇವಲ ಪುರೋಹಿತಶಾಹಿ ವರ್ಗಕ್ಕೆ ಸೀಮಿತವಾದ ಧರ್ಮ. ಇದರ ಬಗ್ಗೆ ಅನುಮಾನವೇ ಇರಲಾರದು!

ಯಾವ ಹಿಂದೂ ಧರ್ಮ ಅಣ್ಣನನ್ನು ತಮ್ಮ ಕೊಲೆ ಮಾಡಬೇಕೆಂದು ಬೋಧಿಸಿದೆ? ಯಾವ ಹಿಂದೂ ಧರ್ಮ ಸರ್ವ ಸಂಗ ಪರಿತ್ಯಾಗಿಗಳಾದ ಸನ್ಯಾಸಿಗಳು ಕೊಲೆ ಸಂಚಿನಲ್ಲಿ ಭಾಗಿದಾರರಾಗಬೇಕೆಂದು ಹೇಳಿದೆ?

ಕ್ರೈಸ್ತರ ವೇದದಲ್ಲಿ ಸ್ವಾಮಿ ಏಸು ಒಬ್ಬ ಪಾಪಿಷ್ಠೆಯಾದ ಹೆಂಗಸನ್ನು ಕಾಪಾಡಿದ ಕಥೆ ಇದೆ. ಈಗ ಪಾಪಿ ಹೆಂಗಸರು ಸ್ವಾಮಿಗಳನ್ನು ಕಾಪಾಡಬೇಕಾದ ಸುಸಂದರ್ಭದಲ್ಲಿ ನಾವಿದ್ದೇವೆ.

ಪಾಪಿ ಹೆಂಗಸಿಗೆ ಕಲ್ಲು ಹೊಡೆಯಲು ಸಿದ್ಧರಾದ ಜನರನ್ನು ಕುರಿತು ಏಸು ಹೇಳಿದ "ನಿಮ್ಮಲ್ಲಿ ಯಾವ ಪಾಪವನ್ನೂ ಮಾಡದವರು, ಆಕೆಗೆ ಕಲ್ಲು ಹೊಡೆಯಿರಿ." ಇಷ್ಟು ಕೇಳುತ್ತಲೇ ಎಲ್ಲರ ಕೈಯ ಕಲ್ಲುಗಳೂ ಕೆಳಗೆ ಬಿದ್ದುವಂತೆ.


ನೊಂದವರು, ಅಸಹಾಯಕರು, ಪಾಪಿಗಳು, ರೋಗಗ್ರಸ್ಥರು, ಅನಾಥರು, ದಟ್ಟ ದರಿದ್ರರು ಎಲ್ಲರೂ ಭಗವತ್ ಸ್ವರೂಪಿಗಳೇ.

ಹಿಂದೂ ಧರ್ಮ ಪ್ರಸ್ತುತದಲ್ಲಿ ಹುಟ್ಟೇ ಇಲ್ಲ ಎನ್ನುವವರೇ ಅದಕ್ಕೆ ಜನ್ಮ ಕೊಟ್ಟು, ಅದಕ್ಕೆ ಸಾವನ್ನು ತಂದೊಪ್ಪಿಸಲು ಮುನ್ನುಗ್ಗುತ್ತಿರುವುದು ಸರ್ವತ್ರ ಪ್ರತ್ಯಕ್ಷ ವಿಷಯವಾಗಿದೆ.

ಅದಕ್ಕೇ ಹೇಳಬೇಕಾಗಿದೆ. ಧರ್ಮದ ಹೆಸರಲ್ಲಿ ರಾಜಕೀಯ ಮಾಡುವುದಾಗಲಿ-ಧರ್ಮದ ಹೆಸರಲ್ಲಿ ವರ್ಗ ಸಂಘರ್ಷಕ್ಕೆ ಅವಕಾಶ ಕಲ್ಪಿಸುವುದಾಗಲಿ, ಚಿತಮನಸ್ಕರಾದ ಮಾನವ ಶ್ರೇಷ್ಠರಿಂದ ಆಗಬಾರದು! ಇದಾದರೆ ಹಿಂದೂ ಧರ್ಮಕ್ಕೆ ಇದಕ್ಕಿಂತ ಹೆಚ್ಚಿನ ಅಪಾಯ ಬೇರಾವುದೂ ಇರಲಾರದು!

-ಕೆ.ಜೆ. ಶೆಟ್ಟಿ, ಕದಂದಲೆ

ಯಾರ್ಕ್‌ಶೈರ್ ತಂಡಕ್ಕೆ ನಾನೇ ಕ್ಯಾಪ್ಟನ್!



ಆಗ ನಾನು ಆಲ್‌ರೌಂಡರ್ ಆಗಿದ್ದೆ. ವಿಕೆಟ್ ಕೀಪಿಂಗ್, ಓಪನಿಂಗ್ ಬ್ಯಾಟಿಂಗ್ ಜೊತೆಗೆ ಪೇಸ್ ಬೌಲಿಂಗ್ ಕೂಡ ಮಾಡುತ್ತಿದ್ದೆ. ಅದೆಲ್ಲ ಅವರಿಗೆ ಇಷ್ಟವಾಗುತ್ತಿತ್ತು. ನಾನು ಸೆಂಚುರಿ ಹೊಡೆದಾಗಲೆಲ್ಲ ಅವರು ಹರ್ಷದಿಂದ ನನ್ನನ್ನು ತಮ್ಮ ಭುಜದ ಮೇಲೆ ಕುಳ್ಳಿರಿಸಿಕೊಂಡು ಕುಣಿದಾಡುತ್ತಿದ್ದರು.

ನಮ್ಮ ಕ್ರಿಕೆಟ್ ತಂಡಕ್ಕೆ ಯಾಕೆ ಯಾರ್ಕ್‌ಶೈರ್ ಕ್ರಿಕೆಟ್ ತಂಡ ಎಂದು ಹೆಸರಿಟ್ಟಿದ್ದೆವು ಎಂದು ನಿಮಗೆ ಆಶ್ಚರ್ಯ ಆಗಬಹುದು. ಇದಕ್ಕೆ ಕಾರಣ ಇತ್ತು. ಆಗ ಇಂಗ್ಲೆಂಡ್ ಕೌಂಟಿ ಪಂದ್ಯಗಳಲ್ಲಿ ಯಾರ್ಕ್‌ಶೈರ್ ತಂಡವೇ ಅತ್ಯಂತ ಪ್ರಬಲವಾಗಿತ್ತು. ಯಾರ್ಕ್‌ಶೈರ್ ತಂಡಕ್ಕೆ ಬೇರೆ ಬೇರೆ ದೇಶದ ಶ್ರೇಷ್ಠ ಬೌಲರ್‌ಗಳನ್ನು ಮತ್ತು ಬ್ಯಾಟ್ಸ್‌ಮನ್‌ಗಳನ್ನು ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಿಸಿಕೊಳ್ಳುತ್ತಿದ್ದರು. ಹೀಗಾಗಿ ನಮ್ಮ ತಂಡವೂ ಒಂದು ರೀತಿಯಲ್ಲಿ 'ಹವಿ' ಆಗಿರಲಿ ಎಂದು ನಮ್ಮ ತಂಡಕ್ಕೆ ಯಾರ್ಕ್‌ಶೈರ್ ತಂಡ ಎಂದು ಹೆಸರಿಟ್ಟಿದ್ದೆವು.

ನಮ್ಮ ತಂಡದಲ್ಲಿ ಸುಮಾರು ಇಪ್ಪತ್ತು ಆಟಗಾರರು ಇರುತ್ತಿದ್ದರು. ನಾವು ಪ್ರತಿ ದಿನ ಪ್ರಾಕ್ಟಿಸ್ ಮಾಡುವುದನ್ನು ಮರೆಯುತ್ತಿರಲಿಲ್ಲ ಮಾತ್ರವಲ್ಲ ಪ್ರತಿ ಭಾನುವಾರ ಅಲ್ಲಿಯ ಯಾವುದಾದರೂ ಲೋಕಲ್ ತಂಡದೊಂದಿಗೆ ಮ್ಯಾಚ್ ನಡೆಸುತ್ತಿದ್ದೆವು.

ಆಗ ನಮಗೆ ಕ್ರಿಕೆಟ್ ಹುಚ್ಚು ಹಿಡಿದಿತ್ತು. ಎಷ್ಟರ ಮಟ್ಟಿಗೆ ಅಂದರೆ ನಾನು ಚಿನ್ನಿದಾಂಡು, ಗೋಲಿ, ಬುಗುರಿ ಮತ್ತು ಬೇರೆ ಆಟಗಳನ್ನು ಬಿಟ್ಟು ಕ್ರಿಕೆಟ್‌ಗೆ ಅಂಟಿಕೊಂಡೆ. ನಮ್ಮ ಸಮಾಜದ ಎಲ್ಲಾ ವರ್ಗದವರಿಗೆ ಹೇಗೆ ಕ್ರಿಕೆಟ್ ಫೀವರ್ ಇದೆಯೋ ಹಾಗೆ ನನಗೂ ಆ ಜ್ವರ ಹಿಡಿದಿತ್ತು, ಇವತ್ತಿಗೂ ಇದೆ. ಆ ವಯಸ್ಸೇ ಹಾಗೆ ಇರಬಹುದು; ಯಾಕೆಂದರೆ ಆ ವಯಸ್ಸಿನ ಹುಡುಗರು ಆಗ ನನಗೆ ಕ್ರಿಕೆಟ್ ಬಗ್ಗೆ ಇದ್ದಷ್ಟೇ ಉತ್ಸಾಹವನ್ನು ಈಗಲೂ ಕೂಡ ಹೊಂದಿರುವುದನ್ನು ನೋಡಿದ್ದೇನೆ.

ವಿಚಿತ್ರವೆಂದರೆ, ನನಗೆ ಸಾಮಾನ್ಯರು ಆಡುವ ಕ್ರಿಕೆಟ್ ಬಗ್ಗೆ ಉತ್ಸಾಹ ಇತ್ತೇ ವಿನಹ ಶ್ರೀಮಂತರ ಆಟವಾದ ಟೆನ್ನಿಸ್ ಬಗ್ಗೆ ನನಗೆ ಆಸಕ್ತಿಯೇ ಇರಲಿಲ್ಲ. ಟೆನ್ನಿಸ್ ಆಟವಾಡಲು ಬೇಕಾದ ಎಲ್ಲಾ ವ್ಯವಸ್ಥೆ ನಮ್ಮ ಮನೆಯ ಪಕ್ಕದಲ್ಲೇ ಇದ್ದರೂ ನಾನು ಎಂದೂ ಟೆನ್ನಿಸ್ ಕಡೆಗೆ ತಿರುಗಿಯೂ ನೋಡಲಿಲ್ಲ.

ಇದರಿಂದ ನಾನು ಒಂದು ರೀತಿಯಲ್ಲಿ ಲಾಭವನ್ನೇ ಪಡೆದೆ. ಏಕೆಂದರೆ ಸಮಾಜದ ಎಲ್ಲ ಸ್ತರದ ಜನರನ್ನು ಪರಿಚಯ ಮಾಡಿಕೊಳ್ಳುವ, ವಿಭಿನ್ನ ಭಾಷೆಗಳನ್ನು ಕಲಿಯುವ ಮತ್ತು ಬೇರೆ, ಬೇರೆ ಸಂಸ್ಕೃತಿಗಳನ್ನು ಹತ್ತಿರದಿಂದ ನೋಡುವ ಅವಕಾಶ ಆ ಚಿಕ್ಕ ವಯಸ್ಸಿನಲ್ಲೇ ನನಗೆ ಕ್ರಿಕೆಟ್ ಮೂಲಕ ಸಿಕ್ಕಿತು. ಇಂತಹ ಅವಕಾಶ ನನಗೆ ಖಂಡಿತವಾಗಿಯೂ ಟೆನ್ನಿಸ್‌ನಿಂದ ಸಿಗುತ್ತಿರಲಿಲ್ಲ ಅನ್ನಿಸುತ್ತದೆ.

ನಮ್ಮ ಯಾರ್ಕ್‌ಶೈರ್ ತಂಡದಲ್ಲಿ ನಮ್ಮ ಮನೆಯವರೇ ನಾಲ್ಕು ಜನ ಸದಾ ಇರುತ್ತಿದ್ದೆವು. ನಾನು, ರಾಘು, ನಟ ಮತ್ತು ಬಾಲು.... ಉಳಿದ ಹದಿನಾರು ಜನ ನಮ್ಮ ಏರಿಯಾದ ಹುಡುಗರು. ಅವರೆಲ್ಲರೂ ಶ್ರೀಮಂತರಾಗಿರಲಿಲ್ಲ ಮಾತ್ರವಲ್ಲ ಅವರಲ್ಲಿ ತಮಿಳು, ಹಿಂದಿ, ಇಂಗ್ಲಿಷ್ ಮಾತನಾಡುವವರೂ ಇದ್ದರು. ಹೀಗಾಗಿ ಕೆಲವರೊಂದಿಗೆ ತಮಿಳಲ್ಲಿ, ಕೆಲವರೊಂದಿಗೆ ಇಂಗ್ಲಿಷಿನಲ್ಲಿ, ಕೆಲವರ ಬಳಿ ಹಿಂದಿಯಲ್ಲಿ ನಾವು ಮಾತನಾಡುತ್ತಿದ್ದೆವು. ಆದರೆ ಮನೆಯಲ್ಲಿ ಮಾತ್ರ ಸದಾ ಕನ್ನಡದಲ್ಲೇ ಮಾತನಾಡುತ್ತಿದ್ದೆವು. ಹೀಗೆ ಕ್ರಿಕೆಟ್ ಆಟದಿಂದ ನನಗೆ ನಮ್ಮ ದೇಶದ ಬಹು ಸಂಸ್ಕೃತಿ ಮತ್ತು ಬಹು ಭಾಷೆಯ ಚಿಕ್ಕ ಪರಿಚಯ ಸಿಕ್ಕಿತ್ತು. ಇದರಿಂದಾಗಿ ಬಾಲ್ಯದಲ್ಲೇ ನಮಗೆಲ್ಲ ಯಾರೂ ಪರಕೀಯರಲ್ಲ, ಯಾರೂ ಬೇರೆಯವರಲ್ಲ, ಯಾರನ್ನೂ ಭಾಷೆ, ಧರ್ಮದ ಹೆಸರಲ್ಲಿ ದ್ವೇಷಿಸಬಾರದೆಂಬ ಭಾವನೆ ಹುಟ್ಟಿತ್ತು.

ಕ್ರಿಕೆಟ್ ಆಡುವಾಗ ನಾವೆಲ್ಲ ಅಪ್ಪಾಜಿ ನನಗೋಸ್ಕರ ತಂದ ಬ್ಯಾಟ್‌ನಿಂದಲೇ ಆಡುತ್ತಿದ್ದೆವು. ಅಪ್ಪಾಜಿ ಒಮ್ಮೆ ಬಾಂಬೆಯಿಂದ ತಂದ ಬ್ಯಾಟು ಎಲ್ಲರಿಗೂ ಇಷ್ಟವಾಗಿತ್ತು. ಹಾಗೆಯೇ ಇನ್ನೊಂದು ಬಾರಿ ವಿದೇಶದಿಂದ ಎರಡು ಬ್ಯಾಟನ್ನು ಅಪ್ಪಾಜಿ ತಂದಿದ್ದರು. ಒಂದು ಓಡಿಎಂ, ಇನ್ನೊಂದು ಎಸ್‌ಬಿಎಂ. ಅದು ಆ ಬ್ಯಾಟುಗಳ ಹೆಸರು. ಅದೆಲ್ಲ ನನಗೆ ಇನ್ನೂ ಚೆನ್ನಾಗಿ ನೆನಪಿದೆ.

ಅಪ್ಪಾಜಿ ಶೂಟಿಂಗ್‌ಗಾಗಿ ಬೇರೆ ರಾಜ್ಯಗಳಿಗೆ ಹೊರಟು ನಿಂತಾಗ ಪ್ರತಿ ಬಾರಿಯೂ ಏನು ಬೇಕೆಂದು ನನ್ನನ್ನು ಕೇಳುತ್ತಿದ್ದರು. ಪ್ರತಿ ಬಾರಿಯೂ ನನ್ನ ಉತ್ತರ ಒಂದೇ ಆಗಿತ್ತು: "ಅಪ್ಪಾಜಿ, ನನಗೆ ಬಾಲ್ ಮತ್ತು ಬ್ಯಾಟ್ ಬೇಕು" ಅಂತ ಹೇಳುತ್ತಿದ್ದೆ.

ನಾನು ನನ್ನ ಫ್ರೆಂಡ್ಸ್ ನಡುವೆ ತುಂಬಾ ಪಾಪ್ಯುಲರ್ ಆಗಿದ್ದೆ. ನನ್ನ ವಲಯದಲ್ಲಿ ಹೆಚ್ಚಿನವರು ಸ್ಥಳೀಯ ತಮಿಳರಾಗಿದ್ದರು. ಅವರೆಲ್ಲ ನನ್ನನ್ನು ಸಿಕ್ಕಾಪಟ್ಟೆ ಹೊಗಳುತ್ತಿದ್ದರು. "ಇಂದ ಅಪ್ಪಾಜಿ ಪೇಸ್ ಬೌಲಿಂಗ್ ಕೂಡೊ ಪಂಡ್ರಾನ್, ವಿಕೆಟ್ ಕೀಪಿಂಗ್ ಕೂಡೊ ಪಂಡ್ರಾನ್, ಎಲ್ಲಾಮೆ ಇವಳೊ ನಲ್ಲ ಪಂಡ್ರಾನ್. ಅದನಾಲೆ ಇವನ್‌ದಾನ್ ಎಂಗಳಕ್ಕು ಕ್ಯಾಪ್ಟನ್. ಕ್ಯಾಪ್ಟನ್ ಎಂಡ್ರಾಲ್ ಇಂದಮಾದರಿ ಇರುಕ್ಕನುಂ." ಹೀಗೆ ಸ್ಥಳೀಯ ತಮಿಳು ಹುಡುಗರು ನನ್ನ ಆಟವನ್ನು ಹೊಗಳುತ್ತಾ ನನ್ನನ್ನು ಹುರಿದುಂಬಿಸುತ್ತಿದ್ದರು.


ಆಗ ನಾನು ಆಲ್‌ರೌಂಡರ್ ಆಗಿದ್ದೆ. ವಿಕೆಟ್ ಕೀಪಿಂಗ್, ಓಪನಿಂಗ್ ಬ್ಯಾಟಿಂಗ್ ಜೊತೆಗೆ ಪೇಸ್ ಬೌಲಿಂಗ್ ಕೂಡ ಮಾಡುತ್ತಿದ್ದೆ. ಅದೆಲ್ಲ ಅವರಿಗೆ ಇಷ್ಟವಾಗುತ್ತಿತ್ತು, ನಾನು ಸೆಂಚುರಿ ಹೊಡೆದಾಗಲೆಲ್ಲ ಅವರು ಹರ್ಷದಿಂದ ನನ್ನನ್ನು ತಮ್ಮ ಭುಜದ ಮೇಲೆ ಕುಳ್ಳಿರಿಸಿಕೊಂಡು ಕುಣಿದಾಡುತ್ತಿದ್ದರು. ನಾನೂ ಕೂಡ ನನ್ನ ತಂಡದ ಸದಸ್ಯ ಚೆನ್ನಾಗಿ ಆಡಿದಾಗ ಅವನನ್ನು ನನ್ನ ಭುಜದ ಮೇಲೆ ಕೂರಿಸಿಕೊಂಡು ನೃತ್ಯ ಮಾಡುತ್ತಿದ್ದೆ. ಹೀಗೆ ಕ್ರಿಕೆಟ್ ಆಟ ನನಗೆ ಒಂದು ರೀತಿಯಲ್ಲಿ ಸಹಬಾಳ್ವೆ ಮತ್ತು ಸಮಾನತೆಯನ್ನು ಕಲಿಸಿತು ಎಂದು ಹೇಳಿದರೆ ತಪ್ಪಾಗಲಾರದು.

ನಾನು ಅನೇಕ ಬಾರಿ "ನೀವ್ಯಾರಾದರೂ ಯಾಕೆ ಕ್ಯಾಪ್ಟನ್ ಆಗಬಾರದು" ಎಂದು ನನ್ನ ತಂಡದವರನ್ನು ಕೇಳುತ್ತಿದ್ದೆ. ಆಗ ಅವರು "ಇಲ್ಲಮ್ಮಾ, ನೀ ದಾ ಎಂಗಳುಕ್ಕು ಕ್ಯಾಪ್ಟನ್. ವೇರೆ ಯಾರುಮೆ ಇಂದ ಕ್ಯಾಪ್ಟನ್‌ಶಿಪ್ ಆವುದಕ್ಕು ಸಾಧ್ಯಮೇ ಇಲ್ಲೈ" ಎಂದು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದರು.

ನಿರೂಪಣೆ: ಸದಾಶಿವ ಶೆಣೈ

8

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ನಾವು ಈ ಕ್ರಿಕೆಟ್ ಮ್ಯಾಚ್‌ಗಳಿಗೋಸ್ಕರ ಹಣವನ್ನು ಕಲೆಕ್ಟ್ ಮಾಡುತ್ತಿದ್ದೆವು. ಆ ಜವಾಬ್ದಾರಿಯನ್ನು ನನಗೆ ನೀಡಿದ್ದರು. ನಾನು ಎಲ್ಲರಿಂದ ತಿಂಗಳಿಗೆ ಒಂದು ರೂಪಾಯಿ ದೇಣಿಗೆಯನ್ನು ಸಂಗ್ರಹಿಸುತ್ತಿದ್ದೆ. ಹಲವೊಮ್ಮೆ ಅದು ಸಾಕಾಗದಾಗ ಮನೆಯವರನ್ನು ಕೇಳಿ ಹಣ ಪಡೆದು ಸೇರಿಸುತ್ತಿದ್ದೆ. ಆದರೆ ನನ್ನ ಗೆಳೆಯರೆಲ್ಲ ತುಂಬ ಸ್ವಾಭಿಮಾನಿಗಳಾಗಿದ್ದರು. ನಾನು ಮನೆಯಿಂದ ಹಣ ತಂದು ಹಾಕುವುದನ್ನು ಅವರುಗಳು ಇಷ್ಟಪಡುತ್ತಿರಲಿಲ್ಲ.

ನಾವು ಯಾವ ಗ್ರೌಂಡ್‌ನಲ್ಲಿ ಮ್ಯಾಚ್ ಆಡುತ್ತಿದ್ದೆವೋ, ಆ ಗ್ರೌಂಡ್‌ಗೆ ಹತ್ತಿರವಿದ್ದ ಮನೆಯಲ್ಲೇ ಬ್ಯಾಟು, ಮ್ಯಾಟು ಮತ್ತು ಬಾಲ್‌ಗಳನ್ನು ಇಟ್ಟಿರುತ್ತಿದ್ದೆವು. ಮರುದಿನ ಬಂದು ಅಲ್ಲಿಂದಲೇ ಆಟ ಶುರು ಮಾಡುತ್ತಿದ್ದೆವು. **We had quite a lot of fun in those days.**

ನಮ್ಮ ತಂಡ ಮ್ಯಾಚ್ ಆಡುತ್ತಿದೆ ಎಂದರೆ, ಅದನ್ನು ನೋಡಲು ಜನ ಸೇರುತ್ತಿದ್ದರು. ಯಾಕೆಂದರೆ ಅಲ್ಲಿ ನಮ್ಮ ತಂಡವೇ ಪಾಪ್ಯುಲರ್ ಆಗಿತ್ತು, ನಾವೆಲ್ಲರೂ ಹೆಚ್ಚಾಗಿ ಅಗ್ರೆಸಿವ್ ಆಗಿ ಆಡುತ್ತಿದ್ದುದರಿಂದ ನೋಡುಗರಿಗೆ ಸಾಕಷ್ಟು ಮನರಂಜನೆ ಸಿಗುತ್ತಿತ್ತು.

ಆಗ ಭಾರತದ ಕ್ರಿಕೆಟ್ ತಂಡದಲ್ಲಿ ಆರು ಜನ ಕರ್ನಾಟಕದ ಆಟಗಾರರು ಇದ್ದದ್ದು ನಮಗೆ ಹೆಮ್ಮೆಯ ವಿಷಯವಾಗಿತ್ತು. ಪ್ರಸನ್ನ, ಚಂದ್ರಶೇಖರ್, ಬ್ರಿಜೇಶ್ ಪಟೇಲ್, ಕಿರ್ಮಾನಿ, ರಾಜರ್ ಬಿನ್ನಿ ಇವರುಗಳ ಹೆಸರುಗಳನ್ನು ನಾವು ಹೇಳುತ್ತಾ ರೋಮಾಂಚನಗೊಳ್ಳುತ್ತಿದ್ದೆವು. ಇದರಿಂದ ಬೇರೆ ಹುಡುಗರಿಗೆ ಇರುಸು-ಮುರುಸಾದರೂ ಅವರು ಏನನ್ನೂ ಹೇಳುತ್ತಿರಲಿಲ್ಲ. ನಾನಂತೂ ವಿಕೆಟ್ ಕೀಪಿಂಗ್ ಮಾಡುವಾಗ ಕಿರ್ಮಾನಿಯಾಗಿಯೂ, ಬೌಲಿಂಗ್ ಮಾಡುವಾಗ ರಾಜರ್ ಬಿನ್ನಿಯಾಗಿಯೂ ರೂಪಾಂತರಗೊಂಡಿದ್ದೇನೆ ಎಂದೇ ಭಾವಿಸುತ್ತಿದ್ದೆ!

ಮದ್ರಾಸಿನ ರಣ ಬಿಸಿಲನ್ನೂ ಲೆಕ್ಕಿಸದೆ ಕ್ರಿಕೆಟ್ ಆಟವಾಡುತ್ತಿದ್ದ ನಾನು ಯಶಸನ್ನು ಗಳಿಸುತ್ತಾ, ಪಂದ್ಯಗಳನ್ನು ಗೆಲ್ಲುತ್ತಾ ಸಾಗಿದೆ. ಪ್ರತಿ ಆಟ ಗೆದ್ದಾಗ ವಿಶ್ವಕಪ್ಪನ್ನೇ ಗೆದ್ದಷ್ಟು ಸಂತೋಷಪಡುತ್ತಿದ್ದೆ. ಕ್ರಮೇಣ ನಾನು ಮದ್ರಾಸಿನಲ್ಲಿದ್ದ ಅನೇಕ ಡಿವಿಜನ್ ಪಂದ್ಯಗಳಲ್ಲಿ ಆಡಲು ಆಯ್ಕೆಯಾದೆ. ಕೊನೆಗೆ 19 ವರ್ಷದ ಕೆಳಗಿನ ಬಾಲಕರ ತಂಡಕ್ಕೆ ಆಯ್ಕೆಯಾಗುವ ಹಂತ ತಲುಪಿದೆ. ಇನ್ನೇನು ನಾನು ತಮಿಳುನಾಡು ತಂಡವನ್ನು ಪ್ರತಿನಿಧಿಸಿ ಆಟವಾಡಬೇಕು, ಅದೇ ಹೊತ್ತಿಗೆ ಒಂದು ಸಿಲ್ಲಿ ಪಾಲಿಟಿಕ್ಸ್ ನಡೆದು ನನಗೆ ತಂಡದಲ್ಲಿ ಸ್ಥಾನ ಸಿಗಲಿಲ್ಲ. ಏನಾಯಿತೆಂಬುದನ್ನು ಇನ್ನೊಮ್ಮೆ ವಿವರವಾಗಿ ಹೇಳುತ್ತೇನೆ.

ಯಾವ ವಿಷಯವೇ ಆಗಲಿ ನನಗೆ **influence** ಬಳಸುವುದು ಇಷ್ಟವಿಲ್ಲ. ನನ್ನ ಪ್ರಕಾರ ಸ್ವಂತ ಪ್ರಯತ್ನದಿಂದಲೇ ಮನುಷ್ಯ ಬೆಳೆಯಬೇಕು. ನಮ್ಮಲ್ಲಿರುವ ಶಕ್ತಿ ಮತ್ತು ಪ್ರತಿಭೆ ಬಗ್ಗೆ ನಮಗೇ ಧೈರ್ಯವಿರಬೇಕು. ಆಗಲೇ ನಾವು ಜೀವನದಲ್ಲಿ ಏನಾದರೂ ಸಾಧನೆಯನ್ನು ಮಾಡಲು ಸಾಧ್ಯ.

ಯಾವಾಗ ರಾಜಕೀಯ ಕಾರಣಗಳಿಂದಾಗಿ 19 ವರ್ಷದ ಬಾಲಕರ ತಂಡಕ್ಕೆ ನನ್ನನ್ನು ಆಯ್ಕೆ ಮಾಡಲಿಲ್ಲವೋ ಆಗ ನನಗೆ ಕ್ರಿಕೆಟ್ ಬಗೆಗಿನ ಆಸಕ್ತಿ ಕಡಿಮೆಯಾಗಲು ಶುರುವಾಯಿತು. ನಿಧಾನವಾಗಿ ಕ್ರಿಕೆಟ್‌ನಿಂದ ದೂರವಾದ ನಾನು ಕಾಲ ಕ್ರಮೇಣ ಕ್ರಿಕೆಟ್ ಆಡುವುದನ್ನು ನಿಲ್ಲಿಸಿದೆನೇ ಹೊರತು ನನ್ನಲ್ಲಿದ್ದ ಕ್ರಿಕೆಟ್ ಕ್ರೇಜ್ ಮಾತ್ರ ಆರಿಹೋಗಲಿಲ್ಲ. ಈಗಲೂ ಬೆಂಗಳೂರಿನಲ್ಲಿ ಯಾವುದೇ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯವಿದ್ದರೆ ನಾನು ನನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಸ್ಟೇಡಿಯಂಗೆ ಹೋಗುತ್ತೇನೆ. ಆಕಸ್ಮಾತ್ ಕ್ರಿಕೆಟ್ ಪಂದ್ಯ ನಡೆಯುತ್ತಿದ್ದಾಗ ಶೂಟಿಂಗ್‌ನಲ್ಲಿದ್ದರೆ ಪ್ರತಿ ಅರ್ಧ ಗಂಟೆಗೊಮ್ಮೆ ಪಂದ್ಯದ ವಿವರಗಳನ್ನು ಕೇಳಿ ಪಡೆಯುತ್ತೇನೆ. ಹಾಗೆಯೇ ಅವಕಾಶ ಸಿಕ್ಕಿದಾಗಲೆಲ್ಲ ಕ್ರಿಕೆಟ್ ಆಡುತ್ತಿರುತ್ತೇನೆ. ನಾಲ್ಕು ವರ್ಷದ ಹಿಂದೆ ರಾಕ್‌ಲೈನ್ ವೆಂಕಟೇಶ್ 'ನಾಗರಾವು ಕಪ್' ಕ್ರಿಕೆಟ್ ಪಂದ್ಯ ಏರ್ಪಡಿಸಿದಾಗ ನಾನು, ರಾಘು ಮತ್ತು ಪುನೀತ್ ಎಲ್ಲರೂ ಒಂದೇ ತಂಡದಲ್ಲಿ ಆಟವಾಡಿದ್ದೆವು.

ಕ್ರಿಕೆಟ್.... ಅದು ನನ್ನ ಜೀವನದ ಅವಿಭಾಜ್ಯ ಅಂಗ! ಇದರಿಂದ ನಾನು ಸುಖವನ್ನೂ ಅನುಭವಿಸಿದ್ದೇನೆ.... ನೋವನ್ನೂ ಕಂಡಿದ್ದೇನೆ....

(ಮುಂದಿನ ವಾರಕ್ಕೆ....)

ಶಾರ್ಟ್ ಕಟ್



ರೊನಾಲ್ಡೊ ಗೆಳತಿ.... ಫುಟ್‌ಬಾಲ್ ಒಡತಿ....

ಈಗ ಬ್ರೆಜಿಲ್‌ನ ರೊನಾಲ್ಡೊ ಮನೆಮಾತು...

ಆತನ ಗರ್ಲ್‌ಫ್ರೆಂಡ್ ಮಾಡೆಲ್ ರೈಕಾ ಒಲಿವಿಯರಾ ಇತ್ತೀಚೆಗೆ ಫ್ಯಾಷನ್ ಶೋವೊಂದರಲ್ಲಿ ಫುಟ್‌ಬಾಲ್ ದಿರಿಸಿನಲ್ಲಿ ಬ್ರೆಜಿಲ್ ಧ್ವಜ ಬೀಸುತ್ತ ಕ್ಯಾಟ್‌ವಾಕ್ ಮಾಡಿದ್ದಾಳೆ. ಎದೆ ಮೇಲೆರಡು, ಮಧ್ಯದಲ್ಲೊಂದು ಫುಟ್‌ಬಾಲ್ ಚಿತ್ರಗಳಿರುವ ಒಂದ್ 'ಫುಟ್' (ಒಂದಡಿ) ಅಳತೆಯ ಡ್ರೆಸ್ ಅದು!

ಸೆಂಟರ್‌ಫೋಲ್ಡ್ ಸೆಲೀನಾ.....

ಇದು ಸೆಂಟರ್‌ಫೋಲ್ಡ್ ಸೆನ್ಸೇಷನ್ ಸುದ್ದಿ....!

ಭಾರತದ ಸೆಲಿನಾ ಸುಬ್ರಹ್ಮಣ್ಯಂ ಬ್ರಿಟಿಷ್ ಟ್ಯಾಬ್ಲಾಯ್ಡ್ 'ಡೈಲಿ ಸ್ಟಾರ್'ನ ಕವರ್‌ನಲ್ಲಿ ಮೈಗೆ ಏನೂ ಕವರ್ ಮಾಡಿಕೊಳ್ಳದೇ ಟಾಪ್‌ಲೆಸ್ ಫೋಟೊವನ್ನು (ಪ್ರ)ದಾನ ಮಾಡಿದ್ದಾಳೆ. ನಾವಿಲ್ಲಿ ಈ ಟಾಪ್‌ಲೆಸ್ ಚೆಲುವೆ (ಫೋಟೋ)ಯ ಒಂದಿಷ್ಟು ಟಾಪ್‌ಕಟ್ ಮಾಡಿ ನಿಮಗೆ ನೀಡಿದ್ದೇವೆ.



R.B.P. LANKESH, Kannada Weekly Price Rs. 10/- 28-6-2006 RNI No. KARKAN2005/14648 Regd.No.KA/BG(S)/2036/2005

ಶಿವ-ಗೀತಾ ಡ್ಯೂಯೆಟ್!





ಇದೇ 22ರಂದು 'ಕುಮಾರರಾಮ' ಚಿತ್ರದ ಕ್ಯಾಸೆಟ್ ಬಿಡುಗಡೆ ಕಾರ್ಯಕ್ರಮವನ್ನು ಅದ್ದೂರಿಯಾಗಿ ಮಾಡಲು ನಿರ್ಧರಿಸಿದ್ದಾರೆ ನಿರ್ಮಾಪಕ ಪಟ್ಟಾಭಿರಾಮ್. ಅಂದಿನ ಕಾರ್ಯಕ್ರಮಕ್ಕೆ ವಿಷ್ಣುವರ್ಧನ್ ಮತ್ತು ಅಂಬರೀಶ್ ಅಲ್ಲದೆ ಚಿತ್ರರಂಗದ ಗಣ್ಯಾತಿ ಗಣ್ಯರನ್ನೂ ಆಹ್ವಾನಿಸುವ ಉದ್ದೇಶವನ್ನು ಪಟ್ಟಾಭಿರಾಮ್ ಹೊಂದಿದ್ದಾರೆ. ಕ್ಯಾಸೆಟ್ ರಿಲೀಸ್ ಸಮಾರಂಭ ಮುಗಿದ ನಂತರ ಅತ್ಯಂತ ಅದ್ದೂರಿಯಾದ ಸಂತೋಷ ಕೂಟವನ್ನು ಬಾಲಿವುಡ್ ಶೈಲಿಯಲ್ಲಿ ಏರ್ಪಡಿಸಿದ್ದಾರೆ. ಇದೆಲ್ಲ 'ಕುಮಾರರಾಮ' ಚಿತ್ರಕ್ಕೆ ನೇರವಾಗಿ ಸಂಬಂಧಿಸಿದ್ದು. ಇದರ ಜೊತೆಗೆ ನಾಯಕ ಶಿವರಾಜ್‌ಕುಮಾರ್ ಅವರಿಗೆ ಅಂದು ವಿಶೇಷವಾದ ದಿನ. ಯಾಕೆಂದರೆ ಅಂದೇ ಅವರ ಪತ್ನಿ ಗೀತಾ ಶಿವರಾಜ್‌ಕುಮಾರ್ ಅವರ ಹುಟ್ಟುಹಬ್ಬ ಕೂಡ. ಪತ್ನಿಯ ಹುಟ್ಟುಹಬ್ಬದ ದಿನದಂದು ಇದೇ ಉದ್ಯಮ ಒಟ್ಟು ಸೇರಿದರೆ ಯಾರಿಗೆ ತಾನೆ ಸಂತೋಷವಾಗಲಾರದು ಹೇಳಿ? ಅಡ್ವಾನ್ಸ್ ಆಗಿ ಹ್ಯಾಪಿ ಬರ್ತ್‌ಡೇ ಟು ಯೂ ಗೀತಾ.

ದರ್ಶನ್‌ಗೆ ಸುದೀಪ್ 'ಆಟೋಗ್ರಾಫ್'!





ದರ್ಶನ್ ಮತ್ತು ಸುದೀಪ್ ಹಳೆಯದನ್ನೆಲ್ಲ ಮರೆತು ಮತ್ತೆ ಒಂದಾಗಿದ್ದಾರೆಯೇ? ಇದು ಗಾಂಧಿನಗರಿಗಳು ಕಳೆದ ನಾಲ್ಕೈದು ವರ್ಷಗಳಿಂದ ಕೇಳುತ್ತಲೇ ಇದ್ದ ಪ್ರಶ್ನೆ. ಆದರೆ ಇನ್ನು ಮುಂದೆ ಈ ಪ್ರಶ್ನೆ ಕೇಳುವ ಅಗತ್ಯವಿಲ್ಲ, ಯಾಕೆಂದರೆ ದರ್ಶನ್ ಮತ್ತು ಸುದೀಪ್ ನಿಜವಾಗಿಯೂ ಭಾಯಿ-ಭಾಯಿಯಾಗಿದ್ದಾರೆ. ಸುದೀಪ್ ಒಂದು ವಾರದ ಹಿಂದೆ ದರ್ಶನ್ ಮನೆಗೆ ಹೋಗಿದ್ದರಂತೆ. ಆ ನಂತರ ದರ್ಶನ್ ಮೊನ್ನೆ ಸುದೀಪ್ ನಟಿಸಿದ-ನಿರ್ದೇಶಿಸಿದ 'ಮೈ ಆಟೋಗ್ರಾಫ್' ಚಿತ್ರ ನೋಡಿದರಂತೆ. ಅಲ್ಲಿಗೆ ಕನ್ನಡ ಚಿತ್ರರಂಗದ ಅತ್ಯಂತ ಬೇಡಿಕೆಯಲ್ಲಿರುವ ಈ ಯುವ ನಾಯಕನಟರ ಕದನಕ್ಕೆ ಅಂತಿಮ ತೆರೆ ಬಿದ್ದಂತಾಗಿದೆ.

ಆದರೆ ಇತಿಹಾಸ ಮರುಕಳಿಸುತ್ತದೆ ಎಂಬ ಮಾತಿದೆ. ಇವರ ವಿಷಯದಲ್ಲಿ ಅದು ಮರುಕಳಿಸದಿರಲಿ. ಇವರಿಬ್ಬರ ಸ್ನೇಹ ಮುಂದುವರಿಯಲಿ.

'ಜೂಲಿ' ಗಯಾ.... 'ಚೆಲ್ಲಾಟ' ಆಗಯಾ!



ಈ ಗಾಂಧಿನಗರವೇ ಹೀಗೆ. ಇಲ್ಲಿ ಸೋಲು-ಗೆಲುವನ್ನು ಅಂದಾಜಿಸುವುದು ಯಾವ ಪಂಡಿತನಿಗೂ ಸಾಧ್ಯವಿಲ್ಲ.

ಉದಾಹರಣೆಗೆ ಎಸ್.ನಾರಾಯಣ್ ನಿರ್ದೇಶನದ 'ಸೇವಂತಿ ಸೇವಂತಿ'. ಬಿಡುಗಡೆಯಾದ ಮೊದಲ ಮೂರು ವಾರ ಕುಂಟುತ್ತಾ ಸಾಗಿದ್ದ ಈ ಚಿತ್ರ ಈಗ ದಿಢೀರನೆ ಚೇತರಿಸಿಕೊಂಡು ಶತದಿನೋತ್ಸವದತ್ತ ಸಾಗುತ್ತಿದೆ. ಅದೇ ರೀತಿ ಪ್ರಥಮ ಬಾರಿಗೆ ಕಾಮಿಡಿ ಟೈಮ್ ಗಣೇಶ್ ಹೀರೊ ಆಗಿ ನಟಿಸಿರುವ 'ಚೆಲ್ಲಾಟ' ಚಿತ್ರ ಕೂಡ ಬಾಕ್ಸ್ ಆಫೀಸಿನಲ್ಲಿ ಏಕ್‌ದಮ್ ಸುಧಾರಿಸಿಕೊಂಡಿದೆ. ಇದೇ ಸಾಲಿಗೆ ಸೇರುವ ಮತ್ತೊಂದು ಚಿತ್ರವೆಂದರೆ ಕೂಡ್ಲು ರಾಮಕೃಷ್ಣ ನಿರ್ದೇಶನದ 'ಮಿಸ್ ಕ್ಯಾಲಿಫೋರ್ನಿಯಾ'. ಈ ಚಿತ್ರ ಮೊದಲ ದಿನವೇ ಬಿದ್ದು ಹೋಗುತ್ತದೆ ಎಂದು ಗಾಂಧಿನಗರದವರು ಬಾಜಿ ಕಟ್ಟಿದ್ದರು. ಆದರೆ 'ಮಿಸ್ ಕ್ಯಾಲಿಫೋರ್ನಿಯಾ' ಇನ್ನೂ ಚೆನ್ನಾಗಿ ಓಡುತ್ತಲೇ ಇದೆ.

ಈ ಮಧ್ಯೆ ಯಾವ ಚಿತ್ರಗಳು ಚೆನ್ನಾಗಿ ಓಡುತ್ತವೆ ಅಂತ ಗಾಂಧಿನಗರದವರು ಭವಿಷ್ಯ ನುಡಿದಿದ್ದರೋ ಅವೆಲ್ಲವೂ ಬಿದ್ದು ಹೋಗಿವೆ. ಉದಾಹರಣೆಗೆ 'ಜೂಲಿ', 'ಅಜಯ್', ಇತ್ಯಾದಿ. ಅದಕ್ಕೇ ಹೇಳಿದ್ದು ಈ ಗಾಂಧಿ ನಗರದಲ್ಲಿ ಕಾಸು ಕೊಟ್ಟು ನೋಡುವ ಪ್ರೇಕ್ಷಕನೇ ಮಹಾಪ್ರಭು ಹೊರತು ಗಾಂಧಿನಗರದ ಪೆದ್ದು ಪಂಡಿತರಲ್ಲ ಅಂತ!



ರಾಖಿ ತುಟಿಗೆ ಬಾಯಿ ಹಾಕಿದ ಮಿಕ!



ಇದು 'ಬೊಂ'ಬಾಯಿಯಿಂದ ಬಂದ ಸುದ್ದಿ....

ಮಿಕವೊಂದು ಸುಖ ಪಡೆಯಲೆಂದು ರಾಖಿ ಸಾವಂತಳ ತುಟಿಗೆ ಬಾಯಿ ಹಾಕಿ ಕಚ್ಚಿಬಿಟ್ಟಿದೆ. ರಾಖಿ ಬಿಡುತ್ತಾಳಾ? ಮಿಕದ ಮೇಲೆ ಕಂಪ್ಲೇಂಟ್ ನೀಡಿಯೇ ಬಿಟ್ಟಿದ್ದಾಳೆ.

ನೋಡಿ ಈ ರಾಖಿ ಬಚ್ಚಿದ್ದಕ್ಕಾಗಿ ಕೇಸ್ ಜಡಿಸಿಕೊಂಡು 'ಶಾಟ್‌ಕಟ್'ನ... ಬರುತ್ತಾಳೆ....

ಮೀಸಲಾತಿ ವಿರೋಧಿಗಳಿಗೆ ನಿಧಿ ಸಂಗ್ರಹಿಸಲು ಅವರ ತಾಳ... ತಕ್ಕಂತೆ ಕುಣಿದು 'ಚಾರ್ವಾಕ'ದಲ್ಲೂ ಬಂದು ಬಿಡುತ್ತಾಳೆ. ಬಿಜೆಪಿ ಮಂಗಗ... ಈ ರಾಖಿಗಾಗಿ ಸೀರೆ ಸಂಗ್ರಹಿಸಲು ಹೋಗಿ ಹುಚ್ ಪ್ಯಾಲಿಗಳಾಗುತ್ತ...

ರಾಖಿ ತುಟಿ ಕಚ್ಚಿದ್ದು ದಲೇರ್ ಮೆಹಂದಿಯ ಸಹೋದರ. ... ಅಡ್ನಾಡಿಯ ಹೆಸರೇ 'ಮಿಕ' ಅಂತೆ! ಹುಡುಗಿಯರನ್ನು ವಿದೇಶಕ್ಕೆ ಸರಬರಾ... ಮಾಡುವ ಆರೋಪವನ್ನು ದಲೇರ್ ಮೆಹಂದಿ ಎದುರಿಸುತ್ತಿದ್ದಾನೆ. ಈ... ಅವನ 'ಮಿಕ' ಎಲ್ಲೆ ಮೀರಿ ವರ್ತಿಸಿದೆ.

ರಾಖಿ ಬೇಬಿ, ಜೋಪಾನ... ಬೊಂ'ಬಾಯಿ' ತುಂಬಾ 'ಮಿಕ'ಗ... ಇವೆ!

ಗ್ರೀನ್ OR ಎವರ್ ಗ್ರೀನ್?

ವಿಷ್ಣುವರ್ಧನ್‌ಗೂ, ಬಣ್ಣಗಳಿಗೂ ವಿಚಿತ್ರವಾದ ಸಂಬಂಧ ಇರುವಂತಿದೆ. ಹಿಂದೊಮ್ಮೆ 'ಬಂಧನ' ಚಿತ್ರದಲ್ಲಿ "ಬಣ್ಣಾ... ನನ್ನ ಒಲವಿನ ಬಣ್ಣಾ..." ಎಂದು ಹಾಡುತ್ತಾ ನಾಯಕಿ ಸುಹಾಸಿನಿಯನ್ನು ತರಹೇವಾರಿ ಬಣ್ಣಗಳಲ್ಲಿ ತೋಯಿಸಿದ್ದು ನಿಮಗೆ ನೆನಪಿರಬೇಕು. ಆ ಹಾಡು ಮತ್ತು ಚಿತ್ರ ಹಿಟ್ಟಾಗಿದ್ದು ಬಿಟ್ಟರೆ, ಆನಂತರ ಬಣ್ಣಗಳು ವಿಷ್ಣುಗೆ ಕೈಕೊಟ್ಟಿದ್ದೇ ಹೆಚ್ಚು.

ಇತ್ತೀಚೆಗೆ ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ 'ವರ್ಷ' ಚಿತ್ರದ ಜಾಹೀರಾತುಗಳೆಲ್ಲ ಎಷ್ಟು ನೀಲಿ ಮಯವಾಗಿದ್ದವೆಂದರೆ ಅದೊಂದು 'ನೀಲಿ' ಚಿತ್ರವಿರಬಹುದೇ ಎಂಬ ಅನುಮಾನ ಬರಿಸುವಂತಿದ್ದವು! ಈಗ ಸದ್ಯದಲ್ಲೇ ಬಿಡುಗಡೆ ಆಗಲಿರುವ 'ನೀನೆಲ್ಲೋ ನಾನಲ್ಲೇ' ಚಿತ್ರದ ಜಾಹೀರಾತುಗಳಲ್ಲಿ ಯಥೇಚ್ಛವಾಗಿ ಹಸಿರು ಬಣ್ಣವನ್ನು ಬಳಸಲಾಗಿದೆ.





ಅಂದಹಾಗೆ, ಇತ್ತೀಚೆಗೆ ಶಾಸ್ತ್ರ ಸಂಪ್ರದಾಯ ಎಂದೆಲ್ಲ ಹರಟುವ ವಿಷ್ಣು ಇಷ್ಟಪಡುವುದು ಶುಭ್ರವಾದ ಬಿಳಿ ಬಟ್ಟೆಗಳನ್ನು, ಆದರೂ 'ನೀನೆಲ್ಲೋ ನಾನಲ್ಲೇ' ಚಿತ್ರದಲ್ಲಿ ಹಸಿರು ಬಳಸಿರುವ ಕಾರಣ ಏನಿರಬಹುದು? ಜಾಹೀರಾತು ವಿನ್ಯಾಸಕಾರರೇ ಕ್ರಿಯೇಟಿವ್ ಹೆಸರಲ್ಲಿ ಈ ರೀತಿ ಮಾಡಿದ್ದಾರೋ, ಅಥವಾ ಈ ಚಿತ್ರದಲ್ಲಿ ಅವರೊಂದಿಗೆ ನಟಿಸಿರುವ ಅವರ ಅಳಿಯ ಅನಿರುದ್ಧ್‌ಗೆ 'ಗ್ರೀನ್ ಸಿಗ್ನಲ್' ನೀಡಿದ್ದಾರೋ ಗೊತ್ತಿಲ್ಲ.

ಉಮಾಗೆ ತಾಳಿಭಾಗ್ಯ!!

ಉಮಾ ಮದುವೆಯಾಗಿದ್ದಾಳೆ. ಯಾರು ಈ ಉಮಾ ಎಂದು ನೀವು ಕೇಳಬಹುದು. ಏಕೆಂದರೆ ಕನ್ನಡದ ಪ್ರೇಕ್ಷಕರಿಗೆ ಈಕೆ ಅಷ್ಟೊಂದು ಪರಿಚಿತಳಲ್ಲ. ಈಕೆ ನಟಿಸಿದ್ದು ಒಂದೇ ಒಂದು ಕನ್ನಡ ಚಿತ್ರದಲ್ಲಿ; 'ಉಪ್ಪಿದಾದಾ ಎಂಬಿಬಿಎಸ್'. ಹೀಗಾಗಿ ಈಕೆಯನ್ನು ಡಿ. ರಾಜೇಂದ್ರ ಬಾಬು-ಸುಮಿತ್ರಾ ದಂಪತಿಗಳ ಪುತ್ರಿ ಎಂದು ಪರಿಚಯಿಸುವುದೇ ಲೇಸು.

ಕನ್ನಡದ ಹೆಚ್ಚಿನ ನಾಯಕಿಯರಂತೆ ಈಕೆ ಕೂಡಾ ಅಮೆರಿಕದಲ್ಲಿರುವ ಸಾಫ್ಟ್‌ವೇರ್ ಇಂಜಿನಿಯರೊಬ್ಬನ ಕೈ ಹಿಡಿದಿದ್ದಾಳೆ. ಆತನ ಹೆಸರು ದುಶ್ಯಂತ್.





ರಕ್ಷಿತಾ ಮತ್ತು ಪ್ರೇಮ್ ನಿಶ್ಚಿತಾರ್ಥ ಸುಂಟರಗಾಳಿಯಂತೆ ಗಾಂಧಿ ನಗರದಲ್ಲಿ ಹಬ್ಬಿದಾಗ, ಪ್ರೇಮಾಳ ಮದುವೆ ಕೂಡ ಒಂದಿಷ್ಟು ಪ್ರಚಾರ ಪಡೆದಾಗ, ಉಮಾ ಮಾತ್ರ ಯಾವ ಸದ್ದು ಗದ್ದಲವಿಲ್ಲದೆ ಮದುವೆ ಆಗಿದ್ದಾಳೆ. ಅಷ್ಟೇ ಅಲ್ಲ, ಈಕೆ ಸರಳವಾಗಿ ನಗರದ ಇಸ್ಕಾನ್ ಮಂದಿರದಲ್ಲಿ ಮದುವೆಯಾಗಿದ್ದಾಳೆ. ಈಕೆಯ ವಿವಾಹ ಜೀವನಕ್ಕೆ ನಮ್ಮ ಶುಭ ಕಾಮನೆಗಳು.

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 266764... Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-...